

# ಚಿಗುರು

## ಲೇಖನಗಳ ಸಂಗ್ರಹ

ಸಂಪಾದಕರು

ಡಾ.ರವಿ ಹೆಚ್

# ಚಿಗುರು

**ಲೇಖನಗಳ ಸಂಗ್ರಹ**

**ಸಂಪಾದಕರು**

**ಡಾ. ರವಿ ಹೆಚ್**

# ಚಿಗುರು ವಾರ್ಷಿಕ ಸಂಚಿಕೆ

**Published By:**
***Notion Press* Publication**
**No.8, 3rd Cross St, CIT Colony, Mylapore,**
**Chennai, Tamil Nadu 600004**
**Email ID: publish @ *notionpress*.com**
**Phone :** 044 4631 5631
**Appointments** : notionpress.com

**ಪುಸ್ತಕದ ಹೆಸರು : ಚಿಗುರು**

**ಸಂಪಾದಕರು:**
**ಡಾ. ರವಿ ಹೆಚ್**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**
**E-mail: ravikumarh.06@gmail.com**

**ಸಹ ಸಂಪಾದಕರು:**
**ಡಾ. ಕಿರಣ್ ಕುಮಾರ್ ಕೆ. ಎಸ್**
**ಡಾ. ವೀರೇಂದ್ರ ಕುಮಾರ್ ವಾಲಿ ಎಸ್**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**
**E-mail: kirankumar.ks25@gmail.com**

**E-mail: veerendrakumarwalis@gmail.com**

**ಮೊದಲ ಮುದ್ರಣ – 2023**

**ಪುಟಗಳು : 89**

**ಹಕ್ಕುಗಳು ©: ಆಯಾ ಲೇಖಕರದ್ದು**

**ಬೆಲೆ : 225/–**

**ISBN:** 979-888975046-8

# ಭಾಷಾಸಂಘ-2022

**ಮಹಾ ಪೋಷಕರು**



**ಶ್ರೀ ಬಿ. ಎಸ್ ಯಡಿಯೂರಪ್ಪ**
ನಿಕಟಪೂರ್ವ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಪೋಷಕರು**



**ಶ್ರೀ ಬಿ ವೈ ರಾಘವೇಂದ್ರ**
ಕಾರ್ಯದರ್ಶಿಗಳು, ಸ್ವಾಮಿ
ವಿವೇಕಾನಂದ ವಿದ್ಯಾಸಂಸ್ಥೆ, ಶಿಕಾರಿಪುರ
ಹಾಗೂ ಸಂಸದರು, ಶಿವಮೊಗ್ಗ
ವಿಧಾನಸಭಾ ಕ್ಷೇತ್ರ

**ಅಧ್ಯಕ್ಷರು**



**ಡಾ. ಶಿವಕುಮಾರ್ ಜಿ. ಎಸ್.,**
ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಮಾರ್ಗದರ್ಶಕರು**



**ಡಾ. ಕಿರಣ್ ಕುಮಾರ್ ಕೆ. ಎಸ್.,**
ಸಹಾಯಕ ಪ್ರಾಧ್ಯಾಪಕರು



**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು



**ಡಾ. ರವಿ ಹೆಚ್.,**
ಸಹಾಯಕ ಪ್ರಾಧ್ಯಾಪಕರು

## ಭಾಷಾಸಂಘದ ಸದಸ್ಯರು.

**ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು**


ಜಿ ಉಮಾದೇವಿ


ಮಂಜುಳಾ ಸಿ


ಪದ್ಮಾ ಜಿ


ಪ್ರೇಮಾ ಬಿ


ಪ್ರಿಯಾಂಕ ಬಿ ಎನ್


ರಚನಾ ಹೆಚ್ ಎಸ್


ರೇಣುಕಾ ಡಿ


ಶ್ವೇತಾ ಜಿ ಹೆಚ್


ಶ್ವೇತಾ ಎಲ್


ಮೌಲಾಲಿ ಟಿ ಕೆ


ಶಶಿಕುಮಾರ ಜಿ

*******

# ಭಾಷಾಸಂಘದ ಸದಸ್ಯರು

## **ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು**



ಚೈತ್ರ ಆರ್ ಲಮಾಣಿ



ಮೇಘಾ ಕೆ



ಪ್ರೇಮಾ ಮೇಗಳಮನಿ



ಸ್ನೇಹ ಎಸ್



ರಂಜಿತಾ ಛಲವಾದಿ



ಸಾವಿತ್ರಮ್ಮ ಎಸ್



ಬಸವರಾಜ ಗುಡಿ



ಮರಿಸ್ವಾಮಿ



ಪ್ರವೀಣ ಎಸ್



ರಫಿ ದೋಡ್ಮನಿ



ಸಂದೀಪ ಕೆ. ಎನ್



ಸಂಜಯ ಎನ್ ಜಿ

*******

# ನಾಡಗೀತೆ

ಜಯ್ ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!


ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ!

ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ!
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ.



ರಾಷ್ಟ್ರಕವಿ ಕುವೆಂಪು

**ಸಂಪಾದಕೀಯ ….,**

ಅವಲೋಕನ, ಅಧ್ಯಯನ, ಆಲೋಚನೆ ಮತ್ತು ಅನುಭವಗಳೇ ಅಭಿವ್ಯಕ್ತಿಯ ಸಮಗ್ರ ನೆಲೆ. ಬೋಧನೆಯು ಒಂದು ಪರಿಣಾಮಕಾರಿ ಅಭಿವ್ಯಕ್ತಿ. ಅದೊಂದು ಏಕಮುಖ ಅಭಿವ್ಯಕ್ತಿಯಾಗಿರದೆ ಪರಿಣಾಮ, ಪ್ರಮಾಣ ಪ್ರತಿಕ್ರಿಯೆಗಳೆಂಬ ಆಶಯದ ಸಂವಹನವಾಗಿದೆ. ಆ ದೃಷ್ಟಿಯಿಂದ ಬೋಧನೆ ಒಂದು ಪರಿಣಾಮಕಾರಿ ಸಂವಹನ ಕ್ರಿಯೆ ಎಂದು ಹೇಳುವಲ್ಲಿ ಸಂಶಯವಿಲ್ಲ. ಈ ಕ್ರಿಯೆ ಬಹುತ್ವಗೊಂಡು ವಿವಿಧ ಚಟುವಟಿಕೆ, ತಾರ್ಕಿಕ ಚಿಂತನೆ, ವೈವಿಧ್ಯಮಯ ದೃಷ್ಟಿಕೋನವನ್ನು ಪಡೆದು ಸೃಜನಶಿಲತೆಯನ್ನು ಪ್ರವಹಿಸುತ್ತದೆ. ಬೋಧನೆಗೆ ಪ್ರಭಾವಿ ಪ್ರೇರೇಪಣೆಯಂದರೆ ವಿದ್ಯಾರ್ಥಿಗಳ ಇಂದಿನ ಕಲಿಕೆ ನಾಳಿನ ಬದುಕಾಗಿಸುವುದಾಗಿದೆ. ಆ ಪ್ರಭಾವಿ ಪ್ರೇರಣೆಯೇ ಬೋಧನಾ ವೃತ್ತಿ ಸಂವರ್ಧನೆಗೆ ಪುನಃ ಪ್ರೇರಣೆ. ಹಾಗಾಗಿ ಬೋಧನೆ ಮತ್ತು ಕಲಿಕೆಗಳು ಸ್ವಯಂಶಕ್ತಿ ಸಂವರ್ಧನ ಪ್ರಕ್ರಿಯೆಗಳು. ಇದಕ್ಕೆ ಬೇಕಾದ ನಿರಂತರ ತಯಾರಿ ಮತ್ತು ಸಿಗುವ ಅವಕಾಶಗಳ ಪ್ರತಿಫಲವೇ ಈ ಚಿಗುರು ಸಂಚಿಕೆ.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಶಿಕ್ಷಣಾರ್ಥಿಗಳ ಭವಿಷ್ಯದ ಭವ್ಯತೆಯನ್ನು ನಿರೀಕ್ಷಿಸುವ ಭರವಸೆಗೆ ಬೆಳಕನ್ನು ನೀಡುವಲ್ಲಿ ತನ್ನ ನಿರಂತರ ಪರಿಶ್ರಮವನ್ನು ಫಲಶೃತಿಗೊಳಿಸುವ ಪ್ರಯತ್ನದಲ್ಲಿಯೇ ತೊಡಗಿರುತ್ತದೆ. ಈ ಹಿನ್ನಲೆಯಲ್ಲಿ ಮಹಾವಿದ್ಯಾಲಯದ ಭಾಷಾಸಂಘ ವಾರ್ಷಿಕವಾಗಿ ವೈವಿದ್ಯಮಯವಾದ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಜ್ಞಾನದ ವೃದ್ಧಿಗೆ ಬೇಕಾದ ಕೌಶಲಗಳ ಹೂರಣವನ್ನು ಸದಾ ಕ್ರಿಯಾತ್ಮಕಗೊಳಿಸಿ ವಿದ್ಯಾರ್ಥಿಗಳನ್ನು ಜಾಗೃತರನ್ನಾಗಿಸುವ ಕೈಂಕರ್ಯವನ್ನೀಯುತ್ತಿದೆ ಎಂಬುದು ಅತಿಶೆಯೋಕ್ತಿಯಾಗಲಾರದು. ಪ್ರಶಿಕ್ಷಣಾರ್ಥಿಗಳು ತಮ್ಮ ಬೋಧನೆಯ ಕೌಶಲಗಳನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ತಮ್ಮಲ್ಲಿರುವ ಸೃಜನಶೀಲತೆಯನ್ನು ಹಲವಾರು ಮಜಲುಗಳ ಮೂಲಕ ತರೆದಿಡುವ ಪ್ರಯತ್ನ ಬಹುಶಃ ಅವರ ಲೇಖನಗಳ ಮೂಲಕ ಪ್ರತಿಪಲನವನ್ನುಂಟು ಮಾಡುತ್ತಿವೆ. ಸಾಹಿತ್ಯಿಕ, ವೈಜ್ಞಾನಿಕ, ತಾರ್ಕಿಕ, ನಾಡು–ನುಡಿಯ ಆಶೋತ್ತರಗಳು ಮತ್ತು ವಿಭಿನ್ನ ಆಶಯದ ಮಾಹಿತಿಗಳನ್ನು ಹೊತ್ತಿರುವ ಚಿಗುರು ಸಂಚಿಕೆಯು ಓದುಗರಿಗೆ ಒಂದು ಹೊಸ ಆಲೋಚನೆಯ ಕಡೆಗೆ ಕೊಂಡೊಯ್ಯುವುದಂತೂ ಸತ್ಯ.

ಈ ಚಿಗುರು ಸಂಚಿಕೆ ಆಕರ್ಷಕವಾಗಿ ಮೂಡಿಬರಲು ಪ್ರೇರಣೆಯಾಗಿರುವ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಧರಣೀಯ ಆಡಳಿತ ಮಂಡಳಿಯ ಸರ್ವಸದಸ್ಯರಿಗೆ ತುಂಬು ಹೃದಯದ ವಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಸದಾ ಮಾರ್ಗದರ್ಶನ ನೀಡಿ ಸೂಕ್ತ ಸಲಹೆ ಸೂಚನೆಗಳೊಂದಿಗೆ ಭಾಷಾಸಂಘದ ಅಡಿಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳ ಯಶಸ್ವಿಗೆ ಕಾರಣರಾದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರರಾದ ಡಾ. ಶಿವಕುಮಾರ್ ಜಿ ಎಸ್ ರವರಿಗೆ ಹೃತ್ಪೂರ್ವಕ ದನ್ಯವಾದಗಳು.

ಭಾಷಾಸಂಘದ ಸೃಜನಾತ್ಮಕ ಕಾರ್ಯಚಟುವಟಿಕೆಗಳ ರುವಾರಿಗಳು ಮತ್ತು ಮಾರ್ಗದರ್ಶಕರಾಗಿ ಪ್ರಶಿಕ್ಷಣಾರ್ಥಿಗಳಿಗೆ ಸರ್ವವಿಧದಲ್ಲಿ ಪ್ರೇರೇಪಕರಾದ ಡಾ. ಕಿರಣ್ ಕುಮಾರ್ ಕೆ. ಎಸ್ ಹಾಗೂ ಡಾ.

ವೀರೇಂದ್ರಕುಮಾರ ವಾಲಿ ಎಸ್‌ರವರಿಗೆ ಹಾಗೂ ಮಹಾವಿದ್ಯಾಲಯದ ಎಲ್ಲಾ ಸಹಾಯಕ ಪ್ರಾಧ್ಯಾಪಕರುಗಳಿಗೂ ಕೂಡಾ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೋಧನಾ ತರಬೇತಿಯ ಕ್ಲಿಷ್ಟ ಸಂದರ್ಭಗಳ ನಡುವೆಯೂ ಬಿಡುವು ಮಾಡಿಕೊಂಡು, ಅಧ್ಯಯನಶೀಲರಾಗಿ, ಭಾಷಾ ಕೌಶಲಗಳ ಸಾಕಾರದ ಕೇಂದ್ರವಾದದ್ದಲ್ಲದೇ ತಮ್ಮ ಕಲಿಕೆಯನ್ನು, ಅನುಭವದ ಸಾರವನ್ನು ಸೃಜನಾತ್ಮಕ ಬರಹದ ಮೂಲಕ ಲೇಖನಗಳ ಕಾಣಿಕೆಯನ್ನಿತ್ತ ಭಾಷಾಸಂಘದ ಎಲ್ಲಾ ಸದಸ್ಯ ಪ್ರಶಿಕ್ಷಣಾರ್ಥಿ ಮಿತ್ರರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಹಾಗೆಯೇ ಸಕಾಲದಲ್ಲಿ ನಮ್ಮ ಓದುಗ ಪ್ರಶಿಕ್ಷಣಾರ್ಥಿಗಳಿಗೆ ಅಗತ್ಯದ ಪುಸ್ತಕಗಳನ್ನು ಒದಗಿಸಿ ಅವರ ಜ್ಞಾನ ಸಂಪಾದನೆಯಲ್ಲಿ ಕೊಂಚ ಜ್ಞಾನ ವೃದ್ಧಿಯಾಗಲು ಕಾರಣರಾದ ಶ್ರೀ ವಿಶ್ವನಾಥ ಜಿ., ಗ್ರಂಥಪಾಲಕರು, ಶ್ರೀಮತಿ ಕವಿತಾ ಹೆಚ್ ಸಹಾಯಕ ಗ್ರಂಥಪಾಲಕರುಗಳಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಚಿಗುರು ಸಂಚಿಕೆಯು ಮಾಹಿತಿಯ ಆಗರವಾಗಿ ಹೊರಹೊಮ್ಮಲು ಕಾರಣರಾದ ನೋಷನ್ ಪ್ರೆಶ್ ಪ್ರಕಾಶನದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಹೃದಯ ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ಸಂಚಿಕೆಯು ಓದುಗರಿಗೆ ಮಾಹಿತಿಯ ಕಣಜವಾಗುವುದು ಎಂದು ಹೇಳುತ್ತಾ, ಈ ಚಿಗುರು ಸಂಚಿಕೆಯ ಉತ್ತಮತೆಗೆ, ಹೊಸ ಸ್ವರೂಪಕ್ಕೆ ಹಾಗೂ ಬದಲಾವಣೆಗೆ ಅಗತ್ಯದ ಸಲಹೆ ಸೂಚನೆಗಳ ನಿರೀಕ್ಷೆಯೊಂದಿಗೆ ..,



**ಡಾ. ರವಿ ಹೆಚ್**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ಈ ಜಗತ್ತಿನ ಇತಿಹಾಸ ಆತ್ಮಶ್ರದ್ಧೆಯನ್ನು ಹೊಂದಿದ್ದ ಕೆಲವೇ ವ್ಯಕ್ತಿಗಳ ಇತಿಹಾಸ. ಆ ಶ್ರದ್ಧೆ ಅಂತರಂಗದ ದಿವ್ಯತೆಯನ್ನು ಬಡಿದೆಬ್ಬಿಸುತ್ತದೆ. ಆಗ ನೀವೇನನ್ನು ಬೇಕಾದರೂ ಸಾಧಿಸಬಲ್ಲಿರಿ."

"ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನಬೇಕು, ಅಪಾರ ಇಚ್ಛಾಶಕ್ತಿ ಬೇಕು. 'ನಾನು ಸಮುದ್ರವನ್ನೇ ಪಾನಮಾಡುತ್ತೇನೆ', ಎಂದು ಪ್ರಯತ್ನಶೀಲನು ಹೇಳುತ್ತಾನೆ. 'ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿಪುಡಿಯಾಗುತ್ತವೆ' ಎನ್ನುತ್ತಾನವನು. ಇಂತಹ ಶಕ್ತಿಯನ್ನೂ, ಛಾತಿಯನ್ನೂ ಪಡೆಯಿರಿ; ಕಷ್ಟಪಟ್ಟು ದುಡಿಯಿರಿ, ನೀವು ಗುರಿ ಸೇರುವುದು ನಿಶ್ಚಯ."

"ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ. ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು –ಇದೇ ಧರ್ಮದ ಸರ್ವಸ್ವ.

# ಪರಿವಿಡಿ


| ಕ್ರ. ಸಂ | ಶೀರ್ಷಿಕೆ | ಪು.ಸಂ |
|---|---|---|
| 01 | **ಭಾಷಾ ಸಂಘ** – 2022 | 3-5 |
| 02 | **ನಾಡಗೀತೆ** – ಕುವೆಂಪು | 6 |
| 03 | **ಸಂಪಾದಕೀಯ** | 7-8 |
| 04 | **ನವೆಂಬರ್ 01 ಕನ್ನಡ ರಾಜ್ಯೋತ್ಸವ**<br>ಡಾ. ರವಿ ಹೆಚ್., ಸಹಾಯಕ ಪ್ರಾಧ್ಯಾಪಕರು | 11-14 |
| 05 | **ಕನ್ನಡ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ**<br>ಡಾ. ವೀರೇಂದ್ರ ಕುಮಾರ ವಾಲಿ ಎಸ್., ಸಹಾಯಕ ಪ್ರಾಧ್ಯಾಪಕರು | 15-18 |
| 06 | **ಪತ್ರಿಕಾ ದಿನಾಚರಣೆ ಇತಿಹಾಸ**<br>ಡಾ. ಕಿರಣ್ ಕುಮಾರ್ ಕೆ. ಎಸ್., ಸಹಾಯಕ ಪ್ರಾಧ್ಯಾಪಕರು | 19-21 |
| 07 | **ಬಾಬಾಸಾಹೇಬ್ ಡಾ. ಬಿ. ಆರ್ ಅಂಬೇಡ್ಕರ್‌ರವರ ಸಾಧನೆಯ ಮೈಲಿಗಲ್ಲುಗಳು** – ವಿಶ್ವನಾಥ ಜಿ., ಗ್ರಂಥಪಾಲಕರು | 22-24 |
| 08 | **ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ**<br>ಶ್ರೀ ರಾಘವೇಂದ್ರ ಕುಲಕರ್ಣಿ., ಮುಖ್ಯ ಶಿಕ್ಷಕರು | 25-27 |
| 09 | **ಕನ್ನಡ ಉಳಿದರೆ ಸಾಕೇ?, ಬೆಳೆಯ ಬೇಡವೇ?** ಸಂಜಯ ಎನ್ ಜಿ | 28-29 |
| 10 | **ಕರ್ನಾಟಕ ರತ್ನ ಡಾ॥ ಪುನೀತ್ ರಾಜ್‌ಕುಮಾರ್** – ರಫಿ ದೋಡ್ಮನಿ | 29-35 |
| 11 | **ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದ ಸ್ಥಳ ಮತ್ತು ಅಧ್ಯಕ್ಷರ ಪಟ್ಟಿ** – ಮೌಲಾಲಿ ಟಿ. ಕೆ | 35-38 |
| 12 | **ಮಹಿಳಾ ಸಬಲೀಕರಣಕ್ಕೆ ಸರ್ಕಾರ ಮತ್ತು ಸಮಾಜದ ಪಾತ್ರ**<br>– ಪ್ರಿಯಾಂಕ ಬಿ ಎನ್ | 39-41 |
| 13 | **ಪಂಪ ಪ್ರಶಸ್ತಿ ಪುರಸ್ಕೃತರು** – ಮರಿಸ್ವಾಮಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ | 42 |
| 14 | **ಹಳೆಗನ್ನಡದ ಪ್ರಮುಖ ಕವಿಗಳು** – ಸ್ನೇಹ ಎಸ್ | 43-46 |
| 15 | **ಕನ್ನಡ ಭಾಷೆ ಮತ್ತು ಸಾಹಿತ್ಯ ಚರಿತ್ರೆ (ನೆನಪಿನಲ್ಲಿಡಬೇಕಾದ ಪ್ರಮುಖ ಅಂಶಗಳು)** – ಬಸವರಾಜ ಗುಡಿ | 47-48 |
| 16 | **ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ** – ರೇಣುಕಾ ಡಿ | 49-53 |
| 17 | **ಏಕಾಗ್ರತೆಯ ಮಹತ್ವ** – ಪ್ರೇಮಾ ಬಿ | 54 |
| 18 | **ಕನ್ನಡ ನಾಡಿನ ವೀರ ವನಿತೆ ಕೆಳದಿಯ ಚೆನ್ನಮ್ಮ** – ಪದ್ಮಾ ಗಿರಿಯಣ್ಣನವರ ಮತ್ತು ರಚನಾ ಹೆಚ್ ಎಸ್ | 55-56 |
| 19 | **ಕನ್ನಡ ಪ್ರಮುಖ ಕವಿಗಳ ಬಿರುದುಗಳು** – ರಂಜಿತಾ ಛಲವಾದಿ | 57-58 |
| 20 | **ಕರ್ನಾಟಕದ / ಕನ್ನಡದ ಮೊದಲುಗಳು** – ಸಂದೀಪ ಕೆ. ಎನ್ | 59-63 |
| 21 | **ಜನಪದ ಕಲೆಯಾಗಿ ಕೋಲಾಟ** – ಶ್ವೇತಾ ಎಲ್ ಮತ್ತು ಮಂಜುಳಾ ಸಿ | 64-67 |
| 22 | **ನಮ್ಮ ಸುತ್ತಮುತ್ತಲಿನ ಜನಪದ ನಂಬಿಕೆಗಳು** – ಪ್ರೇಮಾ ಮೇಗಳಮನಿ ಮತ್ತು ಸಾವಿತ್ರಮ್ಮ ಎಸ್ | 68-70 |

| | | |
|---|---|---|
| 23 | **ಭಾರತ ರತ್ನ ಪ್ರಶಸ್ತಿ ಪುರಸ್ಕೃತರ ಪಟ್ಟಿ –** ಜಿ ಉಮಾದೇವಿ | 71-73 |
| 24 | **ಕವಿಗಳು – ಸಾಹಿತಿಗಳು ಮತ್ತು ಅವರ ಕಾವ್ಯನಾಮ –** ಮೇಘಾ ಕೆ | 73-74 |
| 25 | **ಜನಪದ ಕಲೆಯಲ್ಲಿ ವೀರಗಾಸೆಯ ವೈಶಿಷ್ಟತೆ –** ಶಶಿಕುಮಾರ ಗಂಟೇರ | 75-76 |
| 26 | **ಕನ್ನಡದ ಪ್ರಸಿದ್ಧ ಸಾಹಿತಿಗಳ ಆತ್ಮಕಥೆಗಳು –** ಚೈತ್ರ ಆರ್ ಲಮಾಣಿ | 77 |
| 27 | **ಬೇರಿನಿಂದ ಬೇರಾಗದಿರಿ –** ಶ್ವೇತಾ ಜಿ. ಹೆಚ್ | 78-79 |
| 28 | **ಕನ್ನಡದಲ್ಲಿ ವಚನ ಸಾಹಿತ್ಯ –** ಪ್ರವೀಣ ಎಸ್ | 80-84 |
| 29 | **ಭಾಷಾ ಸಂಘದ ಸಹಯೋಗದಲ್ಲಿ ನಡೆದ ಕಾರ್ಯಕ್ರಮಗಳು** | 85-88 |




**ಕನ್ನಡ ಭುವನೇಶ್ವರಿ ಮಾತೆ**

## ನವೆಂಬರ್ 01 ಕನ್ನಡ ರಾಜ್ಯೋತ್ಸವ

– ಡಾ. ರವಿ ಹೆಚ್., ಸಹಾಯಕ ಪ್ರಾಧ್ಯಾಪಕರು

ಇದು ಕನ್ನಡಾಂಬೆಯ ಮಹೋತ್ಸವ. ತಾಯಿ ಭುವನೇಶ್ವರಿಯ ಉತ್ಸವ. ಕನ್ನಡ ನಾಡು ನುಡಿಯ ವೈಭವವು ವೈಶಿಷ್ಟ್ಯಪೂರ್ಣವಾದುದು.

ಇಂದು ನಾವು ಶ್ರೀಗಂಧದ ಬೀಡು, ಶಿಲ್ಪಕಲೆಯ ತವರೂರು, ಸಂಸ್ಕೃತಿಯ ನೆಲೆವೀಡು, ಹಚ್ಚ ಹಸುರಿನ ಸುಂದರ ಬೆಟ್ಟಗಳ, ಪವಿತ್ರ ನದಿಗಳ ನಾಡು, ಕರುನಾಡು ಎಂದು ಕರೆಯಲ್ಪಡುವ ಕರ್ನಾಟಕದ ಕನ್ನಡ ರಾಜ್ಯೋತ್ಸವವನ್ನು ಬಹಳ ಸಡಗರ – ಸಂಭ್ರಮ ಹಾಗೂ ಹೆಮ್ಮೆಯಿಂದ ಆಚರಿಸುತ್ತೇವೆ.

ಕನ್ನಡ ನುಡಿಯು ಪ್ರಾಯಶಃ 2000 ವರ್ಷಗಳಿಗೂ ಹಿಂದಿನ ಇತಿಹಾಸವನ್ನು ಹೊಂದಿದೆ. ಕದಂಬರ ಕಾಲದ ತಾಳಗುಂದದ ಸಿಂಹಕಟಾಂಜನ ಶಾಸನ ಹಾಗೂ ಹಲ್ಮಿಡಿ ಶಾಸನದಲ್ಲಿ ಹುಟ್ಟಿ, ರಾಷ್ಟ್ರಕೂಟರ ಕಾಲದ ಕವಿರಾಜ ಮಾರ್ಗದಲ್ಲಿ ಬೆಳೆದು. ರನ್ನ– ಪಂಪರಿಂದ ಪೋಷಿಸಲ್ಪಟ್ಟು. ಪೂರ್ವದ ಹಳಗನ್ನಡ – ನಡುಗನ್ನಡ – ಹೊಸಗನ್ನಡವಾಗಿ ರೂಪಾಂತರಗೊಂಡು, ಸಂವಿಧಾನದಲ್ಲಿ ಲಿಖಿತಗೊಂಡ 18 ಭಾಷೆಗಳಲ್ಲಿಯೇ ಕನ್ನಡ ಭಾಷೆ 8 ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದು ವಿಶಾಲ ಸಮೃದ್ಧ ಸಾಹಿತ್ಯವಾಗಿ ಬೆಳೆದು ನಿಂತಿದೆ.

ಕರುನಾಡನ್ನು ಹಲವು ಸಾಮ್ರಾಜ್ಯಗಳು ಹಾಗೂ ರಾಜ ವಂಶದವರು ಆಳಿದ್ದಾರೆ. ಕನ್ನಡದ ಮೊದಲ ರಾಜವಂಶ ಬನವಾಸಿಯ ಕದಂಬರು, ಶಿಲ್ಪಕಲೆಯನ್ನು ಹುಟ್ಟುಹಾಕಿದ ಹೊಯ್ಸಳರು, ತಲಕಾಡಿನ ಗಂಗರು, ಚರಿತ್ರೆಯ ಪುಟಗಳಲ್ಲಿ ಸುವರ್ಣ ಯುಗವನ್ನು ಬರೆದು ಹೋಗಿರುವ ವಿಜಯನಗರ ಸಾಮ್ರಾಜ್ಯದ ಅರಸರು, ಮೈಸೂರು ಸಂಸ್ಥಾನದವರು ಇನ್ನೂ ಅನೇಕ ರಾಜಮನೆತನದವರು ಕನ್ನಡದ ವೈಭವೋಪೇತ ಇತಿಹಾಸಕ್ಕೆ ಮತ್ತು ಶ್ರೀಮಂತ ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿಯ ಹುಟ್ಟು ಹಾಗೂ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ರಾಷ್ಟ್ರಕವಿ ಕುವೆಂಪು, ವರಕವಿ ಬೇಂದ್ರೆ, ಕಡಲತೀರದ ಭಾರ್ಗವ ಶಿವರಾಮ ಕಾರಂತ, ಕನ್ನಡದ ಆಸ್ತಿ ಮಾಸ್ತಿ, ಭಾರತ ಸಿಂಧೂ ರಶ್ಮಿಯ ವಿ. ಕೃ. ಗೋಕಾಕ್, ಸಮಗ್ರ ಸಾಹಿತ್ಯದ ಅನಂತಮೂರ್ತಿ, ನಾಟಕಕಾರ ಗಿರೀಶ್ ಕಾರ್ನಾಡು, ಚಂದ್ರಶೇಖರ ಕಂಬಾರ ಹಾಗೂ ಇನ್ನೂ ಅನೇಕ ಮಹಾನ್ ವಿದ್ವಾಂಸರು, ಸಾಹಿತಿಗಳು, ಕವಿಗಳು, ಲೇಖಕರು ಹಾಗೂ ಬರಹಗಾರರಿಂದ ಕನ್ನಡ ನುಡಿ ಪ್ರಜ್ವಲಿಸಿದೆ.

ರನ್ನ – ಪಂಪ ಜನಿಸಿದ ಪುಣ್ಯಬೀಡು ಈ ಕರ್ನಾಟಕ. ಹೊಯ್ಸಳ, ಚಾಲುಕ್ಯ, ಕದಂಬರು, ಗಂಗರು ಹಾಗೂ ಇನ್ನೂ ಅನೇಕ ರಾಜಮನೆತನಗಳು ಆಳಿದ ತ್ಯಾಗ ಭೂಮಿ ಈ ಕರ್ನಾಟಕ. ಈ ಮಣ್ಣಿನಲ್ಲಿ ಪ್ರೀತಿ ಇದೆ, ತ್ಯಾಗವಿದೆ, ಪರೋಪಕಾರ ಗುಣವಿದೆ, ಧೈರ್ಯವಿದೆ, ಶೌರ್ಯವಿದೆ, ಕರುಣೆಯಿದೆ. ಇಂತಹ ನಾಡಿನಲ್ಲಿ ಹುಟ್ಟಿದ ನಾವೆಲ್ಲರೂ ಭಾಗ್ಯಶಾಲಿಗಳು.

ಕರ್ನಾಟಕದ ಹುಟ್ಟಿನ ಬಗ್ಗೆ ತಿಳಿಯುವುದಾದರೆ 1905 ರಲ್ಲಿ ಕನ್ನಡದ ಕುಲಪುರೋಹಿತರಾದ ಆಲೂರು ವೆಂಟರಾವ್ ರವರು ಕರ್ನಾಟಕ ಏಕೀಕರಣ ಚಳುವಳಿ ಪ್ರಾರಂಭಿಸಿದರೆ ಜೊತೆಗೂಡಿ ಹೋರಾಡಿದವರು ಕೋಟಿ ಕೋಟಿ ಕನ್ನಡಿಗರು. 1950 ರಲ್ಲಿ ಭಾರತವು ಗಣರಾಜ್ಯವಾಗಿ ನಂತರ ಭಾರತದ ವಿವಿಧ ಪ್ರಾಂತ್ಯಗಳು ಭಾಷೆಗಳ ಆಧಾರದ ಮೇಲೆ ರಾಜ್ಯಗಳು ರೂಪುಗೊಂಡವು. ಮದ್ರಾಸ್, ಮುಂಬಯಿ ಹೈದರಾಬಾದ್ ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ 1956 ನವಂಬರ್ 1ರಂದು ಏಕೀಕೃತ ಕನ್ನಡ ನಾಡು ಮೈಸೂರು ರಾಜ್ಯ ಎಂಬ ಅಭಿದಾನದೊಂದಿಗೆ ಉದಯವಾಯಿತು.

1956ರಲ್ಲಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರಿಂದ ಉದ್ಘಾಟನೆಗೊಂಡ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಗಳಾಗಿ ಎಸ್. ನಿಜಲಿಂಗಪ್ಪನವರು ಹಾಗೂ ರಾಜ್ಯಪಾಲರಾಗಿ ಜಯಚಾಮರಾಜೇಂದ್ರ ಒಡೆಯರ್‌ರವರು ಆಯ್ಕೆಯಾದರು.

ನಂತರದ ಬೆಳವಣಿಗೆಯಲ್ಲಿ ಕರ್ನಾಟಕ ಏಕೀಕರಣ ಚಳುವಳಿಯ ಹೋರಾಟಗಾರರು, ಕನ್ನಡ ಸಾಹಿತಿಗಳು, ಕನ್ನಡಿಗರು ಹಾಗೂ ಕನ್ನಡ ಪರ ಸಂಘಟನೆಗಳ ಆಶಯದಂತೆ ದೇವರಾಜ ಅರಸರ ಕಾಲದಲ್ಲಿ 1973 ನವಂಬರ್ 1ರಂದು ಮೈಸೂರು ರಾಜ್ಯ **"ಕರ್ನಾಟಕ"** ಎಂಬ ಅಭಿದಾನ ಪಡೆಯಿತು. ಅಂದಿನಿಂದ ಪ್ರತಿ ವರ್ಷ ನವಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ಕನ್ನಡ ನಾಡು ನುಡಿಗೆ ಗೌರವ ಸಲ್ಲಿಸುತ್ತೇವೆ.

**ಕರ್ನಾಟಕದ ವಿಶೇಷ**

ಕರ್ನಾಟಕ ಪದದ ಮೂಲವೂ ಸಾಮಾನ್ಯವಾಗಿ ಕರು ಮತ್ತು ನಾಡು ಸೇರಿ ಎತ್ತರದ ಭೂಮಿ ಎಂಬರ್ಥದ ಕರುನಾಡು ಪದದಿಂದ ಉಗಮವಾಗಿದೆ.

ಕರು ಎಂದರೆ ಕಪ್ಪು, ನಾಡು ಎಂದರೆ ಪ್ರದೇಶ ಅಂದರೆ ಬಯಲು ಸೀಮೆಯ ಕಡುಕಪ್ಪು ಹತ್ತಿ ಮಣ್ಣಿನಿಂದಾಗಿ ಕರ್ನಾಟಕ ಎಂಬ ಹೆಸರು ಬಂದಿದೆ.

ಕೃಷ್ಣ ನದಿಯ ದಕ್ಷಿಣಕ್ಕೆ ಎರಡು ಕಡೆ ಜಲಾವೃತವಾದ ಪ್ರದೇಶವಾದುದರಿಂದ ಬ್ರಿಟಿಷರ ಕಾಲದಲ್ಲಿ ಕರ್ನಾಟಿಕ್ ಅಥವಾ ಕರ್ನಾಟಕ ಎಂದು ಹೆಸರು ಬಳಕೆ ಬಂದಿತು.

ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಬಾವುಟವಿದೆ. ಕೆಂಪು ಮತ್ತು ಹಳದಿ ಬಣ್ಣದ ಕನ್ನಡ ಧ್ವಜವು ಕನ್ನಡ ನಾಡಿನ ಹಿರಿಮೆ ಗರಿಮೆಯ ಸಂಕೇತವಾಗಿದೆ. ಈ ಬಣ್ಣವು ಕನ್ನಡಾಂಬೆಯ ಅರಿಷಿನ ಕುಂಕುಮವನ್ನು ಸೂಚಿಸುತ್ತದೆ ಹಾಗೂ ಹಳದಿ ಬಣ್ಣವು ಶಾಂತಿ ಸೌಹಾರ್ದತೆ ಸೂಚಿಸಿದರೆ ಕೆಂಪು ಬಣ್ಣವು ಕ್ರಾಂತಿಯ ಸಂದೇಶ ನೀಡುತ್ತದೆ ಅಂದರೆ ಕನ್ನಡಿಗರು ಶಾಂತಿಗೂ ಬದ್ಧ, ಕ್ರಾಂತಿಗೂ ಸಿದ್ಧ ಎಂಬ ಸಂದೇಶ ನೀಡುತ್ತದೆ. ಕನ್ನಡ ಬಾವುಟವನ್ನು ಕನ್ನಡ ಹೋರಾಟಗಾರರಾದ ಎಂ. ರಾಮಮೂರ್ತಿಯವರು ಸಿದ್ಧಪಡಿಸಿದರು. ಕನ್ನಡ ಧ್ವಜವನ್ನು ಕರ್ನಾಟಕದ ಎಲ್ಲೆಡೇ ಸ್ಥಿರವಾಗಿ ಕರ್ನಾಟಕ ಹಾಗೂ ಕನ್ನಡವನ್ನು ಪ್ರತಿನಿಧಿಸಲು ಬಳಸುತ್ತಾರೆ. ರಾಜ್ಯೋತ್ಸವದಂದು ಎಲ್ಲಾ ರೀತಿಯ ವಾಹನಗಳ ಮೇಲೂ ಕನ್ನಡ ಬಾವುಟ ರಾರಾಜಿಸುತ್ತದೆ.

ಕರ್ನಾಟಕದ ಮಾತೃಭಾಷೆ ಕನ್ನಡವೇ ಆದರೂ ಅದರಲ್ಲಿ ಹಲವು ವಿಶೇಷತೆಗಳನ್ನು ಕಾಣಬಹುದು. ಬೆಂಗಳೂರಿನ ಕಂಗ್ಲೀಷ್ ಕನ್ನಡ, ಮೈಸೂರಿನ ಮೆಲುಧನಿ ಕನ್ನಡ, ಧಾರವಾಡದ ಗಂಡು ಕನ್ನಡ, ದಕ್ಷಿಣದ ಗ್ರಾಂಥಿಕ ಕನ್ನಡ, ಕಾಸರಗೂಡಿನ ಮಲೆಯಾಳಮ್ ಕನ್ನಡ, ಹೈದರಾಬಾದ್ ಕರ್ನಾಟಕದ ಉರ್ದು ಮಿಶ್ರಿತ ಕನ್ನಡ ಮುಂತಾದವು.

ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವದಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತದೆ.

**ಕನ್ನಡದ ಬಗ್ಗೆ ಕವಿವಾಣಿಗಳು**

ಸುಲಿದ ಬಾಳೆಯ ಹಣ್ಣಿನಂದದಿ, ಕಳಿದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ, ಸುಲಭವಾಗಿರ್ಪ, ಲಲಿತವಹ ಕನ್ನಡದ ನುಡಿಯಲ್ಲಿ ತಿಳಿದ ತನ್ನೋಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನಿದೆ. – ಮಹಲಿಂಗರಂಗ.

ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು. ಕನ್ನಡಕ್ಕಾಗಿ ಕೊರಳೆತ್ತಿದರೆ ಅದು ಪಾಂಚಜನ್ಯವಾಗುವುದು. ಕನ್ನಡಕ್ಕಾಗಿ ಕಿರುಬೆರಳೆತ್ತಿದರೆ ಅದು ಗೋವರ್ಧನಗಿರಿಯಾಗುವುದು. – ಕುವೆಂಪು.

ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು. ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನವೊಂದಿದ್ದರೇ ನೀ ನಮಗೆ ಕಲ್ಪತರು. – ಕುವೆಂಪು.

ಹೆಂಡ ಹೋಗ್ಲಿ, ಹೆಂಡ್ತಿ ಹೋಗ್ಲಿ, ಎಲ್ಲಾ ಕೊಚ್ಕೊಂಡು ಹೋಗಲಿ, ಪರ್‌ಪಂಚ ಇರೋತನಕ ಮೂಗ್ನಲ್ಲಿ ಕನ್ನಡ ಪದವಾಡ್ತೀನಿ. – ಜಿ. ಪಿ. ರಾಜರತ್ನಂ.

ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವಾ ದೀಪ. – ಡಿ. ಎಸ್. ಕರ್ಕಿ.

ಕನ್ನಡದ ರವಿಮೂಡಿ ಬಂದ, ಮುನ್ನಡೆವ ಬೆಳಕನ್ನೇ ತಂದ, ರಾಜ್ಯೋತ್ಸವ, ನಮ್ಮ ರಾಜ್ಯೋತ್ಸವ.

ನಾವಾಡುವ ನುಡಿಯೇ ಕನ್ನಡ ನುಡಿ. ನಾವಿರುವ ತಾಣವೇ ಗಂಧದ ಗುಡಿ.

ಕನ್ನಡ ಹೊನ್ನುಡಿ ದೇವಿಯನು ಪೂಜಿಸುವೆ, ನಾ ಆರಾಧಿಸುವೆ.

ಇಂತಹ ಅರ್ಥಪೂರ್ಣ ಕನ್ನಡ ಮಾಧುರ್ಯ ಗೀತೆಗಳನ್ನು ರಚಿಸಿದ ಹಾಗೂ ರಚಿಸುವಂತಹ ಕವಿಗಳು ಕೋಟಿ ಕೋಟಿ ಉದಯಿಸಲಿ. ನಾವೆಲ್ಲಾ ಅವುಗಳನ್ನು ಸಂಭ್ರಮದಿಂದ ಹಾಡೋಣ. ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವವರನು ಕೂಡಿಸಿ ಒಲಿಸು ಎಂಬ ಕವಿವಾಣಿಯ ಆಶಯದಂತೆ ಕಾರ್ಯ ಪ್ರವೃತ್ತರಾಗೋಣ. ಕನ್ನಡ ಉಳಿಸಿ ಬೆಳೆಸೋಣ.

ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡಿನಲ್ಲಿ ಕನ್ನಡ ಕಣ್ಮರೆಯಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ಹಾಗಾಗಿ ನಾವೆಲ್ಲಾ ಅಖಂಡ ಕರ್ನಾಟಕದ ಉಳಿವಿಗಾಗಿ ಹೋರಾಡಬೇಕು. ಇಲ್ಲದಿದ್ದರೆ ಮುಂದೆ ನಮ್ಮ ಭಾಷೆಯನ್ನು ಕಳೆದುಕೊಳ್ಳುವ ಆತಂಕ ಬರುವುದು ಬೇಡ. ಕನ್ನಡ ಭಾಷೆ ಈ ನಾಡಿನ ಸಮಸ್ತ ಕನ್ನಡಿಗರ ಆಸ್ತಿ. ಕನ್ನಡ ನಾಡು ನುಡಿಯ ಅಭಿಯಾನ ಇಂದಿನ ಜನತೆಯ ನರ–ನರಗಳಲ್ಲಿ ಮಿಡಿಯುವಂತಾಗಲಿ ಎಂದು ಶಾಂತದೇವಿ ಮಾಳವಾಡ ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡ ಭಾಷೆಯ ಉಳಿವಿಗೆ ಮತ್ತು ಬೆಳವಣಿಗೆಗೆ ಭಾಷಾಭಿಮಾನ, ಭಾಷೆಯ ಬಗ್ಗೆ ಅಪಾರವಾದ ಜ್ಞಾನ, ಭಾಷೆಯನ್ನು ಶ್ರೀಮಂತಗೊಳಿಸುವ, ಮುನ್ನಡೆಸುವ ಇಚ್ಛಾ ಶಕ್ತಿ ಬೇಕು. ಅನ್ಯಭಾಷಿಗರಿಗೆ ಕನ್ನಡ ಕಲಿಸೋಣ. ಕನ್ನಡಿಗರೆಲ್ಲರೂ ಕನ್ನಡ ಭಾಷೆಯನ್ನು ಹೆಬ್ಬಾಗಿಲಿನಂತೆ ಬಳಸಿ ಇತರ ಭಾಷೆಗಳನ್ನು ಗಾಳಿ, ಬೆಳಕಿಗೆ ಬೇಕಾದ ಕಿಟಕಿಗಳಂತೆ ಉಪಯೋಗಿಸಬೇಕು. ಅದರಲ್ಲಿರುವ ಉತ್ತಮಾಂಶಗಳನ್ನು ನಾವು ಸ್ವೀಕರಿಸಬೇಕು. ಗೌರವಿಸಬೇಕು.

ಮಗು ಭಾಷೆಯನ್ನು ಅನುಕರಣೆಯ ಮೂಲಕ ಕಲಿಯುತ್ತದೆ. ಆದುದರಿಂದ ಮಗುವಿಗೆ ಮೊದಲು ಮಾತೃಭಾಷೆಯ ಮೂಲಕ ಶಿಕ್ಷಣ ಕೊಡಬೇಕು. ಅಗತ್ಯವಿದ್ದರೆ ಪರಭಾಷೆಯನ್ನು ಕಲಿಸಬೇಕು. ಭಾಷೆ ಮಕ್ಕಳ ಸರ್ವಾಂಗೀಣ ಸಾಧನೆಯಾಗಬೇಕು.

ಮನೆಯೇ ಮೊದಲ ಪಾಠಶಾಲೆ. ಇಲ್ಲಿಂದಲೇ ಮಕ್ಕಳಿಗೆ ಮಾತೃಭಾಷಾ ಕಲಿಕೆ ಮತ್ತು ಭಾಷಾಭಿಮಾನ ಬೆಳಸುವುದು ಮುಖ್ಯವಾಗುತ್ತದೆ. ಮಕ್ಕಳಿಗೆ ನಮ್ಮ ನಾಡು ನುಡಿಯ ಬಗ್ಗೆ ಹೆಮ್ಮೆ ಪಡುವಂತಹ ಕಲಿಕೆಯನ್ನು ಪ್ರೋತ್ಸಾಹಿಸಬೇಕು. ಕನ್ನಡ ಕಲಿಕೆಯನ್ನು ಒತ್ತಾಯವಾಗಿ ಹೇರುವ ಪರಿಸ್ಥಿತಿ ಬದಲಾಗಿ ಕನ್ನಡ ಭಾಷೆ ನಮ್ಮ ತಾಯಿ ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರದ್ದು ಎಂಬ ಭಾವಾನಾತ್ಮಕ ಅಂಶಗಳನ್ನು ಬಿತ್ತುವ ಕಾರ್ಯ ಮಾಡಬೇಕು. ಈ ಕಾಯಕದಲ್ಲಿ ಪ್ರತಿಯೊಬ್ಬ ಕನ್ನಡಿಗನು ಕಂಕಣ ಬದ್ಧವಾಗಿ ಕಾರ್ಯನಿರ್ವಹಿಸಿದರೆ ಕನ್ನಡಿಗರಷ್ಟೆ ಅಲ್ಲದೆ ಇತರರು ನಮ್ಮ ಕನ್ನಡ ಭಾಷೆಯನ್ನು ಪ್ರೀತಿಸಿ ಅವರು ಅಳವಡಿಸಿಕೊಳ್ಳಲು ಪ್ರಯತ್ನಿಸುವರು.

ಇಂದು ಕನ್ನಡದ ಅಭಿವೃದ್ಧಿಯು ಕೇವಲ ನವಂಬರ್ ತಿಂಗಳಲ್ಲಿ ನಡೆದರೆ ಸಾಲದು. ಸಾಮಾನ್ಯ ಪ್ರಜೆಯಿಂದ ಹಿಡಿದು, ವಿಧಾನಸೌಧದವರೆಗೂ ವರ್ಷದಾದ್ಯಂತ ನಡೆಯಬೇಕು. ರಾಷ್ಟ್ರೀಯ ಐಕ್ಯತೆಗೆ ಭಂಗ ಬರದಂತೆ ಕನ್ನಡ ರಾಜ್ಯೋತ್ಸವ ಆಚರಿಸೋಣ. ಅದಕ್ಕಾಗಿ ಕಂಕಣ ಬದ್ಧರಾಗಿ ನಿಲ್ಲೋಣ.

ರಾಷ್ಟ್ರಕವಿ ಕುವೆಂಪುರವರು ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ಎಂದು ಹಾಡಿ ಹೊಗಳಿದ್ದಾರೆ. ಭಾರತಾಂಬೆ ತಾಯಿಯಾದರೆ ಕನ್ನಡಾಂಬೆ ಮಗಳಾಗಿದ್ದಾರೆ. ಅಮ್ಮ ಮಗಳ ಸಂಬಂಧಕ್ಕೆ ಯಾವುದೇ ತೊಡಕಾಗದಂತೆ ನಾವು ನಮ್ಮ ಹೆಜ್ಜೆಯಿಡಬೇಕು.

ಗಡಿನಾಡೆ ಇರಲಿ... ನಡುನಾಡೆ ಇರಲಿ... ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು ಸಾಧ್ಯವೋ ಅಲ್ಲೆಲ್ಲಾ ಕನ್ನಡದ ಪರಿಮಳವನ್ನು ಚೆಲ್ಲೋಣ. ಕನ್ನಡದ ಕೀರ್ತಿ ಪತಾಕೆ ಹಾರಿಸೋಣ. ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು... ಎಲ್ಲೆಡೆ ಮೊಳಗಲಿ.. ಕನ್ನಡದ ನಾದ.. ಕನ್ನಡದ ಪದ.

ಕನ್ನಡವೇ ಸತ್ಯ, ಕನ್ನಡವೇ ನಿತ್ಯ, ಸಿರಿಗನ್ನಡಂ ಗೆಲ್ಗೆ, ಸರಿಗನ್ನಡಂ ಬಾಳ್ಗೆ...

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ವಿಕಾಸವೇ ಜೀವನ; ಸಂಕೋಚವೇ ಮರಣ. ಪ್ರೇಮವೆಲ್ಲಾ ವಿಕಾಸ; ಸ್ವಾರ್ಥವೆಲ್ಲಾ ಸಂಕೋಚ; ಆದುದರಿಂದ ಪ್ರೇಮವೇ ಬದುಕಿನ ಧರ್ಮ."

"ಬುದ್ಧಿ ಶ್ರೇಷ್ಠವಾದುದು ನಿಜ. ಆದರ ಕಾರ್ಯವ್ಯಾಪ್ತಿ ಸೀಮಿತವಾದುದು. ಸ್ಫೂರ್ತಿ ಉಂಟಾಗುವುದು ಹೃದಯದ ಮೂಲಕ; ಹೃದಯವೇ ಸ್ಫೂರ್ತಿಯ ಮೂಲ."

"ಜೀವನಾವಧಿ ಅಲ್ಲ, ಪ್ರಾಪಂಚಿಕ ವಿಷಯಗಳೆಲ್ಲ ಕ್ಷಣಿಕ. ಆದರೆ ಯಾರು ಇತರರಿಗಾಗಿ ಬಾಳುತ್ತಾರೋ ಅವರೇ ನಿಜವಾಗಿ ಬಾಳುತ್ತಾರೆ. ಉಳಿದವರು ಜೀವನ್ ಮೃತರು."

# ಕನ್ನಡ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ

– ಡಾ. ವೀರೇಂದ್ರ ಕುಮಾರ ವಾಲಿ ಎಸ್.,
ಸಹಾಯಕ ಪ್ರಾಧ್ಯಾಪಕರು

ಕರ್ನಾಟಕ ರಾಜ್ಯದಲ್ಲಿ ಉಪಯೋಗಿಸಲ್ಪಡುವ ಭಾಷೆಯೇ ಕನ್ನಡ. ಕನ್ನಡ ಭಾಷೆ ದ್ರಾವಿಡ ಭಾಷಾ ಬಳಗಕ್ಕೆ ಸೇರುತ್ತದೆ. ಆಧುನಿಕ ಭಾರತದಲ್ಲಿ ಪ್ರಚಲಿತವಾಗಿರುವ ಭಾಷೆಗಳಲ್ಲಿ ಎರಡನೇ ಅತಿ ಹಳೆಯ ಭಾಷೆಯೂ ಹೌದು (ತಮಿಳಿನ ನಂತರ). ಸಂಸ್ಕೃತ ಸಾಹಿತ್ಯ ಮತ್ತು ಅದರ ಉಪಭಾಷೆಗಳಾದ ಪ್ರಾಕೃತ ಇತ್ಯಾದಿ ಹಾಗೂ ತಮಿಳು ಸಾಹಿತ್ಯದ ನಂತರ. ಕನ್ನಡ ಸಾಹಿತ್ಯ ಭಾರತದಲ್ಲಿ ಮೂರನೇ ಅತಿ ಹಳೆಯ ಸಾಹಿತ್ಯ ಸಂಪ್ರದಾಯ.

ಕನ್ನಡ ಬರವಣಿಗೆಯ ಪ್ರಪ್ರಥಮ ಉದಾಹರಣೆ ದೊರಕಿರುವುದು ಹಲ್ಮಿಡಿ ಶಾಸನ ದಲ್ಲಿ (ಸು. ಕ್ರಿ.ಶ. 450). ಪ್ರಸಿದ್ಧವಾದ ಬಾದಾಮಿ ಶಾಸನಗಳು ಪುರಾತನ ಕನ್ನಡ ಬರವಣಿಗೆಯ ಮತ್ತಷ್ಟು ಉದಾಹರಣೆಗಳನ್ನು ನೀಡುತ್ತವೆ. (ಇತ್ತೀಚಿನ ಮಾಹಿತಿ ಪ್ರಕಾರ ಕ್ರಿ. ಶ 370ರಲ್ಲಿ ರಚಿತವಾದ ತಾಳಗುಂದದ ಸಿಂಹಕಟಾಂಜನ ಶಾಸನ ಕನ್ನಡದ ಮೊದಲ ಶಾಸನ ಎಂದು ಸಂಶೋಧಕರು ಅಧಿಕೃತಗೊಳಿಸಿದ್ದಾರೆ.) ಉಪಲಬ್ಧವಾಗಿರುವ ಪ್ರಥಮ ಕನ್ನಡ ಪುಸ್ತಕವೆಂದರೆ 9 ನೇ ಶತಮಾನದ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿ ಶ್ರೀವಿಜಯನ ಕವಿರಾಜಮಾರ್ಗ. ಈ ಪುಸ್ತಕ ಕನ್ನಡ ಕಾವ್ಯ, ಕನ್ನಡ ನಾಡು, ಮತ್ತು ಕನ್ನಡಿಗರ ಬಗ್ಗೆ ಬರೆಯಲ್ಪಟ್ಟ ಒಟ್ಟಾರೆ ಸಾರಾಂಶವೆನ್ನಬಹುದು. ಇದಕ್ಕೆ ಹಿಂದೆ ಬರೆಯಲ್ಪಟ್ಟ ಕೆಲವು ಕನ್ನಡ ಪುಸ್ತಕಗಳ ಉಲ್ಲೇಖ ಈ ಪುಸ್ತಕದಲ್ಲಿ ಬಂದಿರುವ ಆಧಾರದ ಮೇಲೆ ಕನ್ನಡ ಸಾಹಿತ್ಯದ ಉಗಮ ಸುಮಾರು ಕ್ರಿ. ಶ. 6–7ನೇ ಶತಮಾನಗಳಲ್ಲಿ ಆದದ್ದಿರಬಹುದು. ಆದರೆ ಕವಿರಾಜಮಾರ್ಗದ ಹಿಂದಿನ ಯಾವ ಕೃತಿಗಳೂ ಇದುವರೆಗೆ ದೊರಕಿಲ್ಲ.

ಕನ್ನಡ ಸಾಹಿತ್ಯದ ಚರಿತ್ರೆಯನ್ನು ಮೂರು ಘಟ್ಟಗಳಾಗಿ ವಿಂಗಡಿಸಬಹುದು: ಹಳೆಗನ್ನಡ, ನಡುಗನ್ನಡ ಹಾಗೂ ಆಧುನಿಕ ಕನ್ನಡ.

**ಹಳೆಗನ್ನಡ**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೇ ಶತಮಾನದಿಂದ ಸುಮಾರು ಹನ್ನೆರಡನೇ ಶತಮಾನದವರೆಗಿನ ಕಾಲಘಟ್ಟವನ್ನು ಹಳೆಗನ್ನಡ ಎಂದು ಗುರುತಿಸಬಹುದು. ಈ ಕಾಲದ ಸಾಹಿತ್ಯ ಮುಖ್ಯವಾಗಿ ಜೈನ ಧರ್ಮವನ್ನು ಅವಲಂಬಿಸಿದೆ. ಕನ್ನಡ ಚರಿತ್ರೆಯ ಈ ಘಟ್ಟಕ್ಕೆ ಆದಿ–ಕಾವ್ಯ ಎಂದೂ ಸಹ ಕರೆಯಬಹುದು. ಈ ಕಾಲದ ಅತಿ ಪ್ರಸಿದ್ಧ ಕವಿಯೆಂದರೆ ಪಂಪ (ಕ್ರಿ. ಶ. 902–975). ಪಂಪನ ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ ಇಂದಿಗೂ ಮೇರು ಕೃತಿಯೆಂದು ಪರಿಗಣಿತವಾಗಿದೆ. ಪಂಪ ಭಾರತ ಮತ್ತು ತನ್ನ ಇನ್ನೊಂದು ಮುಖ್ಯಕೃತಿಯಾದ ಆದಿಪುರಾಣದ ಮೂಲಕ ಪಂಪ ಕನ್ನಡ ಕಾವ್ಯಪರಂಪರೆಯ ದಿಗ್ಗಜರಲ್ಲಿ ಒಬ್ಬನಾಗಿದ್ದಾನೆ. ಪಂಪ ಭಾರತ ಸಂಸ್ಕೃತ ಮಹಾಭಾರತದ ಕನ್ನಡ ರೂಪಾಂತರ. ತನ್ನ ಮಾನವತಾವಾದ ಹಾಗೂ ಗಂಭೀರ ಲೇಖನಶೈಲಿಯ ಮೂಲಕ ಕನ್ನಡದ ಅತ್ಯಂತ ಪ್ರಭಾವಶಾಲಿ ಲೇಖಕರಲ್ಲಿ ಒಬ್ಬನಾಗಿದ್ದಾನೆ. ಇದೇ ಕಾಲದ ಇನ್ನೊಬ್ಬ ಪ್ರಮುಖ ಲೇಖಕನೆಂದರೆ ಶಾಂತಿನಾಥ ಪುರಾಣವನ್ನು ರಚಿಸಿದ ಪೊನ್ನ (939–966). ಈ ಕಾಲದ ಮತ್ತೊಬ್ಬ ಹೆಸರಾಂತ ಕವಿ ರನ್ನ (949). ರನ್ನನ ಪ್ರಮುಖ ಕೃತಿಗಳು ಜೈನ ಧರ್ಮೀಯವಾದ ಅಜಿತ ತೀರ್ಥಂಕರ ಪುರಾಣ ಮತ್ತು ಗದಾಯುದ್ಧಂ ಅಥವಾ ಸಾಹಸಭೀಮ ವಿಜಯ. ಇದು ಇಡೀ ಮಹಾಭಾರತದ ಒಂದು ಸಿಂಹಾವಲೋಕನ ದೃಷ್ಟಿ. ಮಹಾಭಾರತ ಯುದ್ಧದ ಕೊನೆಯ ದಿನದಲ್ಲಿ ಸ್ಥಿತವಾಗಿದ್ದರೂ ಸಿಂಹಾವಲೋಕನ ಕ್ರಮದಲ್ಲಿ ಇಡಿಯ

ಮಹಾಭಾರತವನ್ನು ಪರಿಶೀಲಿಸುತ್ತದೆ. ಛಂದಸ್ಸಿನ ದೃಷ್ಟಿಯಿಂದ ಈ ಕಾಲದ ಕಾವ್ಯ ಚಂಪೂ ಶೈಲಿಯಲ್ಲಿದೆ (ಒಂದು ರೀತಿಯ ಗದ್ಯ ಮಿಶ್ರಿತ ಪದ್ಯ)

**ನಡುಗನ್ನಡ**

ನಡುಗನ್ನಡ ಸಾಹಿತ್ಯದಲ್ಲಿ ಅನೇಕ ಹೊಸ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬಂದವು. ಇವುಗಳಲ್ಲಿ ಮುಖ್ಯವಾದವು ರಗಳೆ, ಸಾಂಗತ್ಯ ಮತ್ತು ದೇಸಿ. ಈ ಕಾಲದ ಸಾಹಿತ್ಯ ಜೈನ, ಹಿಂದೂ ಹಾಗೂ ಜಾತ್ಯತೀತ ಬೋಧನೆಗಳ ಮೇಲೆ ಆಧಾರಿತವಾಗಿದೆ.

ಈ ಘಟ್ಟದ ಪ್ರಮುಖ ಲೇಖಕರಲ್ಲಿ ಇಬ್ಬರೆಂದರೆ ಹರಿಹರ ಮತ್ತು ರಾಘವಾಂಕ. ಇಬ್ಬರೂ ತಮ್ಮದೇ ಶೈಲಿಯಲ್ಲಿ ಕನ್ನಡ ಸಾಹಿತ್ಯದ ದಾರಿಯನ್ನು ಬೆಳಗಿದವರು. ಹರಿಹರ ರಗಳೆ ಸಾಹಿತ್ಯವನ್ನು ಬಳಕೆಗೆ ತಂದನು, ತನ್ನ ಶೈವ ಮತ್ತು ವೀರಶೈವ ಕೃತಿಗಳ ಮೂಲಕ. ರಾಘವಾಂಕ ತನ್ನ ಆರು ಕೃತಿಗಳ ಮೂಲಕ ಷಟ್ಪದಿ ಛಂದಸ್ಸನ್ನು ಜನಪ್ರಿಯಗೊಳಿಸಿದನು. ಅವನ ಮುಖ್ಯ ಕೃತಿ ಹರಿಶ್ಚಂದ್ರ ಕಾವ್ಯ, ಪೌರಾಣಿಕ ಪಾತ್ರವಾದ ಹರಿಶ್ಚಂದ್ರನ ಜೀವನವನ್ನು ಕುರಿತದ್ದು. ಈ ಕೃತಿ ತೀವ್ರವಾದ ಮಾನವತಾವಾದಕ್ಕೆ ಪ್ರಸಿದ್ಧವಾಗಿದೆ. ಇದೇ ಕಾಲದ ಇನ್ನೊಬ್ಬ ಪ್ರಸಿದ್ಧ ಜೈನ ಕವಿ ಜನ್ನ. ತನ್ನ ಕೃತಿಗಳಾದ ಯಶೋಧರ ಚರಿತೆ ಮತ್ತು ಅನಂಥನಾಥ ಪುರಾಣಗಳ ಮೂಲಕ ಜೈನ ಸಂಪ್ರದಾಯದ ಬಗ್ಗೆ ಬರೆದನು. ಇದೇ ಕಾಲದ ಕನ್ನಡ ವ್ಯಾಕರಣದ ಬಗೆಗಿನ ಮುಖ್ಯ ಕೃತಿ ಕೇಶಿರಾಜನ ಶಬ್ದಮಣಿ ದರ್ಪಣ.

**ವಚನ ಸಾಹಿತ್ಯ**

ವಚನಗಳು ಎಂದು ಸಾಮಾನ್ಯವಾಗಿ ಕರೆಯಲಾಗುವ ವೀರಶೈವ ಶರಣರ ವಚನಗಳು ಮುಕ್ತ ಛಂದಸ್ಸಿನಲ್ಲಿವೆ. ಬಸವೇಶ್ವರ, ಅಕ್ಕಮಹಾದೇವಿ ಮೊದಲಾದವರ ವಚನಗಳನ್ನು ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿ ಮಲ್ಲಿಕಾರ್ಜುನ ಮನಸೂರ ಮೊದಲಾದ ಹಿಂದುಸ್ತಾನಿ ಸಂಗೀತಗಾರರು ಹಾಡಿದ್ದಾರೆ. ಶರಣರ ನಂತರದ ಕವಿಯಾದ ಸರ್ವಜ್ಞರ ವಚನಗಳು ಮಾತ್ರ ತ್ರಿಪದಿಯಲ್ಲಿವೆ. ವಚನಗಳು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗೆಗಿನ ಯೋಚನಾಧಾರೆಗಳು. ಇನ್ನೂ ಮುಖ್ಯವಾಗಿ, ವಚನ ಸಾಹಿತ್ಯ ಅಂದಿನ ಸಾಮಾಜಿಕ ಕ್ರಾಂತಿಯ ಪ್ರಕ್ರಿಯೆಗೆ ಕನ್ನಡಿ ಹಿಡಿಯುತ್ತದೆ. ಬಸವಣ್ಣನವರಿಂದ ಆರಂಭವಾದ ಈ ಕ್ರಾಂತಿ ಜಾತಿ, ಮತ, ಧರ್ಮಗಳ ಯೋಚನೆಗಳ ಕ್ರಾಂತಿಕಾರಿ ಮರು–ಪರಿಶೀಲನೆಗೆ ದಾರಿ ಮಾಡಿಕೊಟ್ಟಿತು. ವಚನ ಸಾಹಿತ್ಯದಿಂದ ಬಂದ ಮುಖ್ಯ ಬೋಧನೆಗಳೆಂದರೆ ಕಾಯಕವೇ ಕೈಲಾಸ ಮತ್ತು ಅಧ್ಯಾತ್ಮಿಕತೆಯ ಬಗ್ಗೆ ಹೊಸ ನೋಟ.

ವಚನ ಸಾಹಿತ್ಯದ ಪ್ರಮುಖ ಹರಿಕಾರರೆಂದರೆ ಬಸವೇಶ್ವರ (1134–1196), ಅಲ್ಲಮಪ್ರಭು ಮತ್ತು ಕನ್ನಡದ ಮೊದಲ ಮಹಿಳಾ ಲೇಖಕಿಯಾದ ಅಕ್ಕ ಮಹಾದೇವಿ (12ನೇ ಶತಮಾನ).

**ಕುಮಾರವ್ಯಾಸ**

ಕುಮಾರವ್ಯಾಸ ಪ್ರಾಯಶಃ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಪ್ರಭಾವಶಾಲಿ ಕವಿ ಎಂದರೂ ಸರಿ. ಅವನ ಜೀವನಕೃತಿ ಕರ್ನಾಟ ಭಾರತ ಕಥಾಮಂಜರಿ. ಇದು ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಅತ್ಯದ್ಭುತ ಶೈಲಿಯಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಅದು ಕೇವಲ ರೂಪಾಂತರವಲ್ಲ; ಅನೇಕ ಕವಿ ಸಮಯದಿಂದ ಕೂಡಿದ್ದು, ಸ್ವಂತ ಕೃತಿಯೆಂಬಂತೆ ರಚಿಸಿದ್ದಾನೆ. ಈ ಕೃತಿ ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು

ಮಾನ್ಯತೆ ಪಡೆದ ಕೃತಿಯಿದ್ದೀತು. ಇದರ ಪ್ರಸಿದ್ಧಿಗೆ ಪ್ರಮುಖ ಕಾರಣ ಇದು ಎಲ್ಲ ಕಾಲಗಳಲ್ಲಿಯೂ ಎಲ್ಲ ಬುದ್ಧಿಮತ್ತೆಯ ಜನರಿಗೂ ಸಹ ಅವರವರ ಶಕ್ತಿಗನುಸಾರವಾಗಿ ನಿಲುಕಿದೆ. ಇಡೀ ಕಾವ್ಯ ಭಾಮಿನೀ ಷಟ್ಪದಿ ಛಂದಸ್ಸಿನಲ್ಲಿ ರಚಿಸಲ್ಪಟ್ಟಿದೆ. ಕುಮಾರವ್ಯಾಸ ಹುಡುಕಿ ನೋಡುವ ಮಾನವ ಭಾವಗಳ ವ್ಯಾಪ್ತಿ, ಆತನ ಕಾವ್ಯದ ವೈವಿಧ್ಯತೆ ಮತ್ತು ಶಬ್ದಭಂಡಾರ ಓದುಗರನ್ನು ಬೆರಗುಗೊಳಿಸುತ್ತವೆ. ಕುಮಾರವ್ಯಾಸ ಎಲ್ಲಕ್ಕಿಂತ ಹೆಚ್ಚಾಗಿ ತನ್ನ ರೂಪಕಾಲಂಕಾರ ಚಮತ್ಕಾರಕ್ಕೆ ಪ್ರಸಿದ್ಧನಾಗಿದ್ದಾನೆ. ಇದರಿಂದಾಗಿಯೇ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದಿಗೂ ಪಾತ್ರನಾಗಿದ್ದಾನೆ. ಕುಮಾರವ್ಯಾಸನು ಗದುಗಿನ ವೀರನಾರಾಯಣನ ಭಕ್ತ, ಅವನನ್ನು ಗದುಗಿನ ನಾರಣಪ್ಪ ಎಂದು ಕರೆಯುತ್ತಾರೆ. ಈತನ ಮೊದಲಿನ ಹೆಸರು ನಾರಯಣಪ್ಪ ಎಂದು (ಹೆಸರು).

**ದಾಸ ಸಾಹಿತ್ಯ**

ದಾಸ ಸಾಹಿತ್ಯ (ಭಕ್ತಿ ಸಾಹಿತ್ಯ) 15ನೇ ಶತಮಾನದಲ್ಲಿ ಆರಂಭಗೊಂಡ ಭಕ್ತಿ ಪಂಥದ ಹರಿದಾಸರಿಂದ ವಿರಚಿತವಾದದ್ದು. ಈ ಪದ್ಯಗಳಿಗೆ ಸಾಮಾನ್ಯವಾಗಿ 'ಪದ' ಗಳೆಂದು ಹೆಸರು. ಇವು ಭಗವಂತನಲ್ಲಿ ಒಂದಾಗ ಬಯಸುವ ಭಕ್ತನ ಭಾವವನ್ನು ಪ್ರತಿಬಿಂಬಿಸುತ್ತವೆ. ಈ ಸಾಹಿತ್ಯ ಸಂಗೀತದೊಂದಿಗೂ ನಿಲುಕಿದೆ. ದಾಸ ಸಾಹಿತ್ಯ ಭಾರತದ ಶಾಸ್ತ್ರೀಯ ಸಂಗೀತ ಪದ್ಧತಿಗಳಲ್ಲೊಂದಾದ ಕರ್ನಾಟಕ ಸಂಗೀತಕ್ಕೆ ಬುನಾದಿಯಾಗಿದೆ.

ದಾಸರ ಪದಗಳಿಗೆ ದೇವರನಾಮಗಳೆಂದೂ ಹೆಸರು. ಈ ಪ್ರಕಾರದ ಮುಖ್ಯ ಕನ್ನಡ ಕವಿಗಳೆಂದರೆ ಪುರಂದರದಾಸ (1494–1564) ಮತ್ತು ಕನಕದಾಸ. ಇವರನ್ನು ದಾಸ ಸಾಹಿತ್ಯದ ಅಶ್ವಿನಿದೇವತೆಗಳೆಂದು ಕರೆಯಲಾಗಿದೆ.

**ಆಧುನಿಕ ಕನ್ನಡ**

**ಕನ್ನಡದ ನವೋದಯ**

ನವೋದಯ ಎಂದರೆ ಹೊಸ ಹುಟ್ಟು. ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತಗಳಲ್ಲಿ ಹೆಚ್ಚು ಬೆಳಕು ಕಾಣದೆ ಇದ್ದ ಕನ್ನಡ ಸಾಹಿತ್ಯ, 19ನೇ ಶತಮಾನದ ಕೊನೆಗೆ ಹಾಗು ಇಪ್ಪತ್ತನೆ ಶತಮಾನದ ಆರಂಭದಲ್ಲಿ ಹೊಸ ಹುಟ್ಟು ಪಡೆಯಿತು. ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಗೆ ಕಾರಣವಾಯಿತು. ಈ ಹಂತದಲ್ಲಿ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಶ್ರೇಷ್ಠ ಲೇಖಕರು ಬೆಳಕಿಗೆ ಬಂದರು. ಈ ಕಾಲದ ಸಾಹಿತ್ಯ ಪ್ರಕಾರಗಳು ರೊಮ್ಯಾಂಟಿಕ್ ಇಂಗ್ಲಿಷ್ ಕಾವ್ಯ ಮತ್ತು ಗ್ರೀಕ್ ರುದ್ರನಾಟಕಗಳಿಂದ ಪ್ರಭಾವಿತವಾಯಿತು. ಈ ಘಟ್ಟದ ಬೆಳವಣಿಗೆಯನ್ನು ತಂದವರು ಬಿ. ಎಂ. ಶ್ರೀಕಂಠಯ್ಯ, ತಮ್ಮ ಇಂಗ್ಲಿಷ್ ಗೀತೆಗಳು ಪುಸ್ತಕದೊಂದಿಗೆ. ಅನೇಕ ಸುಶಿಕ್ಷಿತ ಕನ್ನಡಿಗರು, ಮುಖ್ಯವಾಗಿ ಶಿಕ್ಷಕ ವೃತ್ತಿಯಲ್ಲಿದ್ದವರು, ತಮ್ಮ ಮಾತೃಭಾಷೆಯಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯನ್ನೊದಗಿಸಿದರು.

ಇದಕ್ಕೆ ಉದಾಹರಣೆಯಾಗಿ ಕುವೆಂಪು – ತಮ್ಮ ಒಬ್ಬ ಶಿಕ್ಷಕರಿಂದ (ಬ್ರಿಟಿಷ್ ಮೂಲದವರು) ಕನ್ನಡದಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಮುಂದೆ ರಾಷ್ಟ್ರಕವಿ ಬಿರುದಿಗೆ ಪಾತ್ರರಾದರು. ಅವರ ಪ್ರಕೃತಿಪ್ರೇಮ, ಮಾನವನ ಉನ್ನತಿಯಲ್ಲಿ ನಂಬಿಕೆ ಮತ್ತು ಪ್ರಕೃತಿ ಮತ್ತು ದೇವರ ಸಮ್ಮಿಶ್ರಣವನ್ನು ಕಾಣುವ ಅವರ ಮನಸ್ಸು ಅವರನ್ನು ಕನ್ನಡದ ಉಚ್ಚ ಕವಿಗಳಲ್ಲಿ ಒಬ್ಬರನ್ನಾಗಿ ಮಾಡಿವೆ. ಅವರ ಅತಿ ಪ್ರಸಿದ್ಧ ಕೃತಿ ಶ್ರೀ ರಾಮಾಯಣ ದರ್ಶನಂ.

ಇದಕ್ಕೆ ಉದಾಹರಣೆಯಾಗಿ ನಿಂತಿರುವ ಮತ್ತೊಬ್ಬ ಲೇಖಕರೆಂದರೆ ಶಿವರಾಮ ಕಾರಂತ – ಅತ್ಯಂತ ಬುದ್ಧಿಮತ್ತೆಯ, ಆಳವಾದ ಆದರ್ಶಗಳುಳ್ಳ ವ್ಯಕ್ತಿತ್ವ, ಹಾಗೂ ಅಷ್ಟೇ ಆಳವಾದ ಸಾಮಾಜಿಕ ಕಳಕಳಿಯಿದ್ದ ಲೇಖಕರು. ಅವರ ಶಕ್ತಿಶಾಲಿ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಸಿದ್ಧವಾದವು "ಮರಳಿ ಮಣ್ಣಿಗೆ" ಮತ್ತು "ಮೂಕಜ್ಜಿಯ ಕನಸುಗಳು".

ಈ ಕಾಲದ ಪ್ರಸಿದ್ಧ ಕವಿಗಳು: ಕುವೆಂಪು, ಬಿ.ಎಂ. ಶ್ರೀಕಂಠಯ್ಯ, ದ.ರಾ. ಬೇಂದ್ರೆ, ಪು ತಿ ನ, ಕೆ.ಎಸ್. ನರಸಿಂಹಸ್ವಾಮಿ, ಎಂ.ಗೋಪಾಲಕೃಷ್ಣ ಅಡಿಗ, ಪ್ರೊ. ನಿಸಾರ್ ಅಹಮದ್, ಚೆನ್ನವೀರ ಕಣವಿ ಮೊದಲಾದವರು.

ಈ ಕಾಲದ ಪ್ರಸಿದ್ಧ ಕಾದಂಬರಿಕಾರರು: ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಅ.ನ.ಕೃ, ಯು.ಆರ್. ಅನಂತಮೂರ್ತಿ, ಡಾ. ಚಂದ್ರಶೇಖರ್ ಕಂಬಾರ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮುಂತಾದವರು.

ಈ ಕಾಲದ ಪ್ರಸಿದ್ಧ ನಾಟಕಕಾರರು: ಟಿ.ಪಿ. ಕೈಲಾಸಂ, ಶ್ರೀರಂಗ, ಕುವೆಂಪು, ಬಿ.ಎಂ. ಶ್ರೀಕಂಠಯ್ಯ, ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ ಮೊದಲಾದವರು.

**ನವ್ಯ**

1947 ರ ಭಾರತದ ಸ್ವಾತಂತ್ರ್ಯಾನಂತರ ಕನ್ನಡ ಸಾಹಿತ್ಯದಲ್ಲಿ ಇನ್ನೊಂದು ಹೊಸ ಸಾಹಿತ್ಯ ಪ್ರಕಾರದ ಉಗಮವಾಯಿತು: ಅದೇ ನವ್ಯ ಸಾಹಿತ್ಯ. ಈ ಪ್ರಕಾರದ ಪಿತರೆಂದರೆ ಗೋಪಾಲಕೃಷ್ಣ ಅಡಿಗರು. ನವ್ಯ ಕವಿಗಳು ನಿರಾಶಾವಾದಿ ಬುದ್ಧಿಜೀವಿಗಳಿಗಾಗಿ ಕಾವ್ಯ ರಚಿಸಿದರು. ಭಾಷಾಪ್ರಯೋಗದ ಚಮತ್ಕಾರ ಹಾಗೂ ಕಾವ್ಯತಂತ್ರ ಹೊಸ ಎತ್ತರವನ್ನು ಈ ಪ್ರಕಾರದಲ್ಲಿ ಕಂಡಿತು.

**ಇತರ ಪ್ರಕಾರಗಳು**

ಕಳೆದ ಐದು ದಶಕಗಳಲ್ಲಿ ಕನ್ನಡ ಸಾಹಿತ್ಯದ ದಾರಿ ಸಾಮಾಜಿಕ ವಿಷಯಗಳನ್ನು ಕುರಿತದ್ದಾಗಿದೆ. ಜಾತಿಪದ್ಧತಿಯ ತಾರತಮ್ಯಗಳಿಂದ ಬಂಡಾಯ ಮತ್ತು ದಲಿತ ಕಾವ್ಯ ಪ್ರೇರಿತವಾಗಿದೆ. ಸ್ತ್ರೀ–ವಿಮೋಚನಾ ಚಳುವಳಿಗಳು ಸ್ತ್ರೀ–ಕಾವ್ಯ ಪ್ರಕಾರಕ್ಕೆ ಎಡೆ ಮಾಡಿಕೊಟ್ಟಿವೆ. ಸಣ್ಣ ಕಥೆಗಳು ಹಾಗೂ ಭಾವಗೀತೆಗಳು ಸಹ ಇಪ್ಪತ್ತನೆ ಶತಮಾನದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳಾಗಿವೆ ಎಂದು ಹೇಳಬಹುದು.

**ಗ್ರಂಥ ಋಣ**

1. ಜಿ. ಎಸ್ ಸಿದ್ದಲಿಂಗಯ್ಯ ಮತ್ತು ಎಂ. ಎಚ್ ಕೃಷ್ಣಯ್ಯ(2016) ಸಾಲುದೀಪಗಳು, ಕನ್ನಡ ಸಾಹಿತ್ಯ ಅಕಾಡೆಮಿ ಕನ್ನಡ ಭವನ ಬೆಂಗಳೂರು– 560 002.

4. ರಾಜಪ್ಪ ದಳವಾಯಿ(2005), ಕನ್ನಡ ಸಾಹಿತ್ಯಕೋಶ, ಶ್ರೀ ರಾಘವೇಂದ್ರ ಪ್ರಕಾಶನ, ಬೆಂಗಳೂರು.

https://kn.wikipedia.org/wiki/ಕನ್ನಡ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ

***

## ಪತ್ರಿಕಾ ದಿನಾಚರಣೆ ಇತಿಹಾಸ

– ಡಾ. ಕಿರಣ್ ಕುಮಾರ್ ಕೆ. ಎಸ್.,
ಸಹಾಯಕ ಪ್ರಾಧ್ಯಾಪಕರು

ಕನ್ನಡ ಪತ್ರಿಕೆಗಳು ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಹಾಗೂ ಸ್ವಾತಂತ್ರ್ಯಾ ನಂತರ ಕರ್ನಾಟಕ ಏಕೀಕರಣದ ಹೋರಾಟದಲ್ಲೂ, ನಾಗರಿಕತೆಯ ಬೆಳವಣಿಗೆಯಲ್ಲೂ ಪ್ರಮುಖ ಪಾತ್ರವನ್ನು ವಹಿಸಿದೆ. ಜನರ ಧ್ವನಿಯಾಗಿ, ಸಮಾಜದ ಕೈಗನ್ನಡಿಯಾಗಿ ಕನ್ನಡ ಪತ್ರಿಕೆಗಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲೂ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿ ನಾಗರಿಕ ಬದುಕಿನಲ್ಲಿ ವಿಶಿಷ್ಟ ಸ್ಥಾನಮಾನವನ್ನು ತನ್ನದಾಗಿಸಿಕೊಂಡಿದೆ.

ಭಾರತದಲ್ಲಿ ಧರ್ಮ ಪ್ರಚಾರಕ್ಕಾಗಿ ಬಂದ ಕ್ರೈಸ್ತ ಮಿಷನರಿಗಳೇ ಪತ್ರಿಕೋದ್ಯಮದ ಮೂಲಪುರುಷರು. ಮೊತ್ತಮೊದಲಿಗೆ ಪುಸ್ತಕ ರೂಪದಲ್ಲಿ, ನಿಯತಕಾಲಿಕೆ ರೂಪದಲ್ಲಿ ಪ್ರಸಾರ ಆರಂಭಿಸಿದ ಪತ್ರಿಕೋದ್ಯಮ ಕ್ರಮೇಣ ದಿನಪತ್ರಿಕೆ ರೂಪದಲ್ಲಿ ಪ್ರಸರಣಕ್ಕೆ ಮುನ್ನುಡಿ ಬರೆಯಿತು. 1440ರಲ್ಲಿ ಜರ್ಮನಿಯ ಜೋಹಾನ್ ಗುಟನ್‌ಬರ್ಗ್ ಎಂಬಲ್ಲಿ ಎರಕಹೊಯ್ದ ಅಚ್ಚುಮೊಳೆ ತಯಾರಿಸಿ ಕ್ರೈಸ್ತರ ಪವಿತ್ರ ಬೈಬಲ್ ಗ್ರಂಥವನ್ನು ಮುದ್ರಿಸಿದಾಗ ಅಂದಿನ ದಿನಗಳಲ್ಲಿ ಅದೊಂದು ಕ್ರಾಂತಿಕಾರಕ ಆವಿಷ್ಕಾರವಾಗಿ ಹೆಸರು ಪಡೆಯಿತು.

ಅದೇ ರೀತಿ ಕನ್ನಡ ಪತ್ರಿಕೋದ್ಯಮದ ಪಿತಾಮಹರೆಂಬ ಖ್ಯಾತಿಯೂ ಕ್ರೈಸ್ತ ಮಿಶನರಿಗಳಿಗೇ ಸಲ್ಲುತ್ತದೆ. ಧರ್ಮ ಪ್ರಚಾರದ ಜೊತೆಗೆ ಒಂದು ಪತ್ರಿಕೆಯನ್ನು ಪ್ರಸರಣ ರೂಪಕ್ಕೆ ತಂದು ಆ ಮೂಲಕ ಜನರಿಗೆ ಸುದ್ದಿ ಹಾಗೂ ಮಾಹಿತಿ ನೀಡಬೇಕೆಂಬ ಬಾಶೆಲ್ ಮಿಷನ್ ಚಿಂತಿಸಿದ ಫಲವಾಗಿ ಕನ್ನಡದ ಮೊತ್ತ ಮೊದಲ ಪತ್ರಿಕೆ 'ಮಂಗಳೂರ ಸಮಾಚಾರ' ಎಂಬ ಪಾಕ್ಷಿಕ 1843 ರಲ್ಲಿ ಸಾಕಾರ ರೂಪ ಪಡೆದು ನಾಗರಿಕ ಸಮಾಜಕ್ಕೆ ಅರ್ಪಣೆಗೊಂಡಿತು. ಬಾಶಲ್ ಮಿಷನ್‌ನ 'ರೆವರೆಂಡ್ ಹರ್ಮನ್ ಮೊಗ್ಲಿಂಗ್' ಈ ಪತ್ರಿಕೆಯ ಸಂಪಾದಕರಾಗಿದ್ದರು. ಇದರಿಂದಾಗಿ ಇವರನ್ನು 'ಕರ್ನಾಟಕ ಪತ್ರಿಕಾ ರಂಗದ ಪಿತಾಮಹ' ಎಂದು ಇಂದಿಗೂ ಸ್ಮರಿಸಿಕೊಳ್ಳಲಾಗುತ್ತಿದೆ.

ಪ್ರಮುಖ ಸುದ್ದಿಗಳು ಹಾಗೂ ಸ್ಥಳೀಯ ಆಸಕ್ತಿದಾಯಕ ವಿಚಾರಗಳನ್ನು ಹೊತ್ತುಕೊಂಡು 'ಮಂಗಳೂರ ಸಮಾಚಾರ'ದ ಮೊದಲ ಸಂಚಿಕೆ 1843ರ ಜುಲೈ 1ರಂದು ಮಂಗಳೂರಿನಿಂದ ಪ್ರಕಟವಾಯಿತು. ಕನ್ನಡ ಪತ್ರಿಕಾ ರಂಗದ ಮೊದಲ ಆವೃತ್ತಿ ಹೊರಬಂದ ದಿನವನ್ನು ಸ್ಮರಿಸುವುದಕ್ಕಾಗಿ ಕರ್ನಾಟಕದಲ್ಲಿ ಇಂದಿಗೂ ಜುಲೈ 1ರಂದು 'ಪತ್ರಿಕಾ ದಿನ'ವಾಗಿ ಆಚರಿಸಲ್ಪಡುತ್ತಿದೆ. ಆ ಪ್ರಯುಕ್ತ ಜುಲೈ ತಿಂಗಳು ಪೂರ್ತಿ ಪತ್ರಕರ್ತರ ಸಂಘ, ಕಾರ್ಯನಿರತ ಪತ್ರಕರ್ತ ಸಂಘ, ಎಡಿಟರ್ಸ್ ಕ್ಲಬ್ ಮೊದಲಾದ ಮಾಧ್ಯಮ ಪ್ರತಿನಿಧಿಗಳ ಸಂಘ–ಸಂಸ್ಥೆಗಳು ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ವತಿಯಿಂದ ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಪತ್ರಿಕೋದ್ಯಮ ಸಂಬಂಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ವಾಡಿಕೆಯಾಗಿದೆ.

ಕನ್ನಡದ ಚೊಚ್ಚಲ ಪತ್ರಿಕೆಯಾಗಿ ಹೊರಬಂದ 'ಮಂಗಳೂರ ಸಮಾಚಾರ' ಪ್ರಜ್ಞಾಪೂರ್ವಕ ಮಾಹಿತಿ, ಶಿಕ್ಷಣ ಮತ್ತು ಮನೋರಂಜನೆಯನ್ನು ಅಂದಿನ ಜನತೆಗೆ ಒದಗಿಸಿಕೊಡುವಲ್ಲಿ ಯಶಸ್ವಿಯಾಗಿತ್ತು. ಆಧುನಿಕ ಪತ್ರಿಕೋದ್ಯಮದ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡು ಮಂಗಳೂರು ಸಮಾಚಾರ ಹೊರಬರುವ ಮೂಲಕ ಜನರ ಜ್ಞಾನ ದಾಹಕ್ಕೆ ಸೂಕ್ತ ಸಿಂಚನವನ್ನು ನೀಡುತ್ತಿತ್ತು. ಇವೆಲ್ಲದರೊಟ್ಟಿಗೆ ಪತ್ರಿಕೆ ದೇಶಪ್ರೇಮಕ್ಕೆ, ದೇಶಭಕ್ತಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ವಿದೇಶಿ ಆಕ್ರಮಣಕಾರರ ವಿರುದ್ಧ ಜನ ಸಂಘಟಿತರಾಗಿ ಎದ್ದುನಿಲ್ಲುವಂತೆ ಪತ್ರಿಕೆ ಪ್ರೇರಣೆ ನೀಡಿತು. ಸ್ಥಳೀಯ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ವಿಷಯಗಳ ಮಾಹಿತಿಯ

ಜೊತೆಗೆ ಅಂತರಾಷ್ಟ್ರೀಯ ಆಗುಹೋಗುಗಳ ಬಗ್ಗೆ ಓದುಗರಿಗೆ ಸರಳ ಭಾಷೆಯಲ್ಲಿ ಮನದಟ್ಟು ಮಾಡಿದ ಪತ್ರಿಕೆ ಸ್ವಾತಂತ್ರ್ಯ, ಸಮಾನತೆ ಹಾಗೂ ನ್ಯಾಯ ಮೊದಲಾದ ಮೌಲ್ಯಗಳ ಬಗ್ಗೆ ಜನಜಾಗೃತಿ ಮೂಡಿಸುವಲ್ಲಿಯೂ ಯಶ ಕಂಡಿತು.

ಮಂಗಳೂರಿನಿಂದ ಕಲ್ಲಚ್ಚಿನಲ್ಲಿ ಪ್ರಸರಣಗೊಳ್ಳುತ್ತಿದ್ದ 'ಮಂಗಳೂರ ಸಮಾಚಾರ' ಪತ್ರಿಕೆ ಪ್ರಾರಂಭಗೊಂಡ ಒಂದು ವರ್ಷದ ಬಳಿಕ ಅಂದರೆ 1844ರ ಮಾರ್ಚ್ ತಿಂಗಳಲ್ಲಿ ಬಳ್ಳಾರಿ ಕಾಗದ ಮುದ್ರಣಾಲಯದಲ್ಲಿ ಮುದ್ರಿಸುವ ಉದ್ದೇಶದಿಂದ ಬಳ್ಳಾರಿಗೆ ವರ್ಗಾಯಿಸಲಾಯಿತು. ಇಲ್ಲಿ ಪತ್ರಿಕೆಗೆ 'ಕನ್ನಡ ಮಿಷನರಿ ಸಮಾಚಾರ' ಎಂದು ಮರು ನಾಮಕರಣಗೊಳಿಸಲಾಯಿತು. ಇಲ್ಲಿ ಮೊಗ್ಲಿಂಗ್ ಅವರ ಆಪ್ತನಾಗಿದ್ದ ಇನ್ನೊಬ್ಬ ಮಿಷನರಿ ರೀಡ್ ಎಂಬಾತ ಪತ್ರಿಕೆಯ ಪ್ರಕಟಣೆ ಜವಾಬ್ದಾರಿ ಹೊತ್ತುಕೊಂಡರು. ಆದರೆ ರೀಡ್ ಅವರ ಮರಣಾನಂತರ ಪತ್ರಿಕೆಯ ಪ್ರಸರಣಕ್ಕೆ ತೀವ್ರ ಹೊಡೆತ ಬಿತ್ತು. ಒಂದು ವರ್ಷಕ್ಕಿಂತ ಹೆಚ್ಚು ಕಾಲ ಪತ್ರಿಕೆ ಅಲ್ಲಿ ಬಾಳಲಿಲ್ಲ.

ದೇಶದ ಸ್ವಾತಂತ್ರ್ಯ ಹಾಗೂ ಏಕತೆಯ ಹಿನ್ನಲೆಯಲ್ಲಿ ಜನ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಮೊಗ್ಲಿಂಗ್ 1857ರಲ್ಲಿ 'ಕನ್ನಡ ಸುವಾಟಿಕ' ಎಂಬ ಇನ್ನೊಂದು ಪತ್ರಿಕೆಯನ್ನು ಆರಂಭಿಸಿದರಾದರೂ ಎರಡು ವರ್ಷದ ಬಳಿಕ ಅದೂ ಕೂಡಾ ನಿಂತಿತು. ಸಮರ್ಪಕ ಸಂಪರ್ಕ ಸಾಧನಗಳಿಲ್ಲದ ಪ್ರಾಚೀನ ಶಿಲಾಯುಗದ ಕಾಲದಲ್ಲಿ ಕನ್ನಡ ಪತ್ರಿಕೆಯೊಂದನ್ನು ಹುಟ್ಟು ಹಾಕಿ ಕನ್ನಡ ಪತ್ರಿಕಾ ರಂಗಕ್ಕೆ ಮುನ್ನುಡಿ ಬರೆದ ಕನ್ನಡ ಪತ್ರಿಕಾ ರಂಗದ ಮೂಲ ಪುರುಷ ಎಂದೇ ಗುರುತಿಸಿಕೊಂಡಿರುವ ಮೊಗ್ಲಿಂಗ್ ಲೇಖಕ, ಸಾಹಿತಿ, ಇತಿಹಾಸಕಾರ, ತರ್ಜುಮೆದಾರ ಹಾಗೂ ಸಂಗ್ರಹಕಾರರಾಗಿಯೂ ವಿಶೇಷ ಗುಣವನ್ನು ಮೈಗೂಡಿಸಿಕೊಂಡಿದ್ದವರು. ಮೂಲತಃ ಜರ್ಮನಿ ದೇಶದ ಬ್ರಾಕನ್ ಹೀಮ್ ಎಂಬ ಗ್ರಾಮದಲ್ಲಿ ವಿಲೆಲ ಲುಡವಿಗ ಫೆಡ್ರಿಕ್ ಮೊಗ್ಲಿಂಗ್ ಹಾಗೂ ರೀಸೆ ದಂಪತಿಯ ಪುತ್ರನಾಗಿ 1811 ರಲ್ಲಿ ಜನಿಸಿದ 'ರೆವರೆಂಡ್ ಹರ್ಮನ್ ಫೆಡರಿಂಗ್ ಮೊಗ್ಲಿಂಗ್' 1834 ರಲ್ಲಿ ತನ್ನ ವ್ಯಾಸಂಗವನ್ನು ಮುಗಿಸಿ ಧರ್ಮ ಪ್ರಚಾರಕರಾಗಿ ಸೇವೆಯನ್ನು ಪ್ರಾರಂಭಿಸಿದ್ದರು. 1836ರಲ್ಲಿ ಇಂಗ್ಲಂಡ್‌ನಿಂದ ಭಾರತಕ್ಕೆ ಆಗಮಿಸಿದ ಮೊಗ್ಲಿಂಗ್ ಅದಾಗಲೇ ಮಂಗಳೂರಿನಲ್ಲಿ ಕಾರ್ಯಪ್ರವೃತ್ತವಾಗಿದ್ದ ಬಾಶೆಲ್ ಮಿಷನ್‌ನೊಂದಿಗೆ ಸೇರಿಕೊಂಡು ಧರ್ಮ ಪ್ರಚಾರದಲ್ಲಿಯೇ ತೊಡಗಿಸಿಕೊಂಡಿದ್ದರು.

1837ರಲ್ಲಿ ಧಾರವಾಡಕ್ಕೆ ಆಗಮಿಸಿ ಶಾಲೆಯನ್ನೂ ಆರಂಭಿಸಿದ ಮೊಗ್ಲಿಂಗ್ ಧರ್ಮಪ್ರಚಾರ ಹಾಗೂ ಸಮಾಜ ಸೇವೆಯಿಂದ ಮಾತ್ರ ಜನ ಸೇವೆ ಸಾಧ್ಯವಿಲ್ಲ ಎಂದು ಮನಗಂಡು ಜಗತ್ತಿನ ನಾಲ್ಕು ದಿಸೆಗಳಿಂದ ಮಾಹಿತಿ ಸಂಗ್ರಹಿಸಿ ಜನರಿಗೆ ನೀಡಿದಾಗ ಇನ್ನಷ್ಟು ತೃಪ್ತಿ ದೊರೆಯಬಹುದೆಂದು ಭಾವಿಸಿದ ಪರಿಣಾಮ 4 ಪುಟಗಳ ಅಂದಿನ ಒಂದಾಣೆ (ನಾಲ್ಕು ಪೈಸೆ)ಯ 'ಮಂಗಳೂರು ಸಮಾಚಾರ ಪತ್ರಿಕೆ' ರೂಪದಳೆಯಿತು.

ಮೊಗ್ಲಿಂಗ್ ಓರ್ವ ಧರ್ಮ ಪ್ರಚಾರಕ್ಕಾಗಿದ್ದರೂ ಪತ್ರಿಕೆಯನ್ನು ಕ್ರೈಸ್ತ ಧರ್ಮದ ಪ್ರಚಾರಕ್ಕೋ ಅಥವಾ ಯಾವುದೇ ಧಾರ್ಮಿಕ ಉದ್ದೇಶಗಳಿಗೆ ಬಳಸಿಕೊಳ್ಳದೆ ಪ್ರತಿಯೊಂದು ಧರ್ಮೀಯರ ಅಂತರಾಳವನ್ನು ಬಿಚ್ಚಿಡಲು ಅವಕಾಶ ನೀಡಿದ್ದರು. ಪತ್ರಿಕೆಯ ಮುಖಾಂತರ ಪತ್ರಿಕಾ ಧರ್ಮ ಹಾಗೂ ಲಾಭಗಳಿಕೆ ನಡುವೆ ಸಮಾನ ಅಂತರವನ್ನು ಕಾಯ್ದುಕೊಂಡು ಬಂದ ಮೊಗ್ಲಿಂಗ್ ಸಮಾಜದಲ್ಲಿ ಆರೋಗ್ಯಕರ ಸಮತೋಲನಕ್ಕೆ ಒತ್ತು ನೀಡಿದ್ದರು.

19ನೇ ಶತಮಾನದಲ್ಲಿ ಬಾಳಿ ಬದುಕಿದ ಕನ್ನಡ ಪತ್ರಿಕೋದ್ಯಮದ ಪಿತಾಮಹ ಮೊಗ್ಲಿಂಗ್ ಜರ್ಮನ್ ಮೂಲದವನಾದರೂ ಕನ್ನಡದಲ್ಲಿ ಅಪಾರ ಆಸಕ್ತಿ ಹಾಗೂ ಪ್ರೀತಿಯನ್ನಿಟ್ಟುಕೊಂಡು ಕನ್ನಡ ಭಾಷೆಗೆ ಸಂಬಂಧಿಸಿ ಅನೇಕ ವಿಷಯಗಳಲ್ಲಿ ಮೊದಲಿಗ ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ. ಕನ್ನಡದಲ್ಲಿ 'ಪತ್ರ ಸಾಹಿತ್ಯ' ಪ್ರಾರಂಭಿಸಿದ ಹೆಗ್ಗಳಿಕೆ ಕೂಡಾ ಮೊಗ್ಲಿಂಗ್‌ರವರಿಗೆ ಸಲ್ಲುತ್ತದೆ. ಈತ ಮಂಗಳೂರಿಗೆ ಬಂದು ರಚಿಸಿದ ಚೊಚ್ಚಲ 'ಬಿಬ್ಲಿಯಾಥೆಕಾ

ಕರ್ನಾಟಕ' ಎಂಬ ಗ್ರಂಥವು ಜರ್ಮನಿವರೆಗೂ ತಲುಪಿತು. ಈತ ಕನ್ನಡಕ್ಕಾಗಿ ಸಲ್ಲಿಸಿದ ಮಹತ್ತರ ಕಾರ್ಯಕ್ಕಾಗಿ 1858ರಲ್ಲಿ 'ಗೌರವ ಡಾಕ್ಟರೇಟ್' ಪ್ರಶಸ್ತಿಯೂ ಒಲಿದು ಬಂತು. ಕನ್ನಡ ಪರ ಸೇವೆಗಾಗಿ ದೊರೆತ ಮೊತ್ತ ಮೊದಲ ಡಾಕ್ಟರೇಟ್ ಪದವಿ ಇದಾಗಿತ್ತು ಎಂಬುದನ್ನಿಲ್ಲಿ ಪ್ರಸ್ತಾಪಿಸಲೇಬೇಕು.

ಕನ್ನಡಕ್ಕಾಗಿ ತೋರಿದ ಪ್ರೀತಿ, ಅಭಿಮಾನ, ಆಸಕ್ತಿ ಮೊಗ್ಲಿಂಗೇತರ ಇನ್ಯಾವ ವಿದೇಶಿಯರಲ್ಲೂ ಕಂಡು ಬಂದಿಲ್ಲ ಎಂಬುದು ಕೂಡಾ ಅಷ್ಟೇ ಪ್ರಾಮುಖ್ಯವನ್ನು ಪಡೆಯುತ್ತದೆ. ಓರ್ವ ವಿದೇಶಿಗನಾಗಿ, ಅದರಲ್ಲೂ ಓರ್ವ ಧರ್ಮ ಪ್ರಚಾರಕನಾಗಿ ಭಾರತಕ್ಕೆ ಬಂದು ಕನ್ನಡಕ್ಕಾಗಿ ಇನ್ನಿಲ್ಲದ ಶ್ರಮವಹಿಸಿ ಕನ್ನಡ ಪತ್ರಿಕೋದ್ಯಮದ ಮೂಲಪುರುಷನಾಗಿ ಹೆಸರು ಪಡೆದ 'ರೆವರೆಂಡ್ ಹರ್ಮನ್ ಫ್ರೆಡರಿಕ್ ಮೊಗ್ಲಿಂಗ್' 1881ರಲ್ಲಿ ತನ್ನ ಜೀವಿತದ 70ನೇ ಸಂವತ್ಸರದಲ್ಲಿ ಈ ಲೋಕಕ್ಕೆ ವಿದಾಯ ಹೇಳಿದರು. ಇವರ ಸಮಾಧಿ ಜರ್ಮನಿ ದೇಶದಲ್ಲಿದೆ.

'ರೆವರೆಂಡ್ ಹರ್ಮನ್ ಫ್ರೆಡರಿಕ್ ಮೊಗ್ಲಿಂಗ್' ಮುನ್ನುಡಿ ಬರೆದ ಕನ್ನಡ ಪತ್ರಿಕಾ ರಂಗಕ್ಕೆ ಇದೀಗ 180 ವಸಂತಗಳೇ ಸಂದುತ್ತಿವೆ. ಇಂದಿಗೂ ಕನ್ನಡ ಪತ್ರಿಕಾ ರಂಗವು ನಾಗರಿಕ ಸಮಾಜದ ಅವಿಭಾಜ್ಯ ಅಂಗವಾಗಿ, ಸಮಾಜದ ಅಂಕು–ಡೊಂಕುಗಳ ಕೈಗನ್ನಡಿಯಾಗಿ ಸಮಾಜದ ಎಲ್ಲ ಆಗು–ಹೋಗುಗಳ ಬಗ್ಗೆ ಸ್ಪಷ್ಟ ಬೆಳಕನ್ನು ಚೆಲ್ಲುವ ಮೂಲಕ ಸಮಾಜ ಸುಧಾರಣೆಯಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ. ತಮ್ಮ ಮೂಗಿನ ನೇರಕ್ಕೆ ಸುದ್ದಿ, ಲೇಖನಗಳು ಪ್ರಕಟಗೊಳ್ಳುತ್ತಿಲ್ಲ ಹಾಗೂ ಸಮಾಜದ ಏರು–ಪೇರುಗಳನ್ನು, ಆಡಳಿತ ವರ್ಗದ ವೈಫಲ್ಯಗಳನ್ನು ಯಥಾವತ್ ಅನಾವರಣಗೊಳಿಸಲಾಗುತ್ತಿದೆ ಎಂಬ ಒಂದೇ ಒಂದು ಕಾರಣಕ್ಕೆ ಪತ್ರಿಕೆಗಳ ಹಾಗೂ ಪತ್ರಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಪ್ರಯತ್ನವನ್ನು ಅಧಿಕಾರದ ಗದ್ದುಗೆಯಲ್ಲಿರುವ ಮಂದಿಗಳು ಮಾಡುತ್ತಿರುವ ಒಂದೆರಡು ಪ್ರಕರಣಗಳು ಕಂಡು ಬರುತ್ತಿದೆಯಾದರೂ ಅವೆಲ್ಲವನ್ನೂ ಯಶಸ್ವಿಯಾಗಿ ಮೆಟ್ಟಿನಿಂತು ಕನ್ನಡ ಪತ್ರಿಕಾ ರಂಗ ಇಂದಿಗೂ ತನ್ನ ಗಂಭೀರತೆಯನ್ನು, ಪ್ರಾಮುಖ್ಯತೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದೆ. ಎಲ್ಲ ಏಳು–ಬೀಳುಗಳ ಮಧ್ಯೆ ಕನ್ನಡ ಪತ್ರಿಕಾರಂಗ ಇದೀಗ ಒಂದೂಮುಕ್ಕಾಲು ಶತಮಾನ ದಾಟಿ ಮುನ್ನಡೆಯುತ್ತಿರುವುದು ಸಾಧನೆಯೇ ಸರಿ.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ನಿಮ್ಮೊಬ್ಬರ ಮೇಲೆಯೇ ಇಡೀ ಕೆಲಸವೂ ಬಿದ್ದಿದೆಯೇನೋ ಎಂಬಂತೆ ನೀವು ಪ್ರತಿಯೊಬ್ಬರೂ ಕೆಲಸ ಮಾಡಿ. ಐವತ್ತಕ್ಕೂ ಹೆಚ್ಚು ಶತಮಾನಗಳು ನಿಮ್ಮನ್ನು ನೋಡುತ್ತ ನಿಂತಿವೆ. ಭಾರತದ ಭವಿಷ್ಯ ನಿಮ್ಮನ್ನು ಅವಲಂಬಿಸಿದೆ. ಕೆಲಸಮಾಡಿಕೊಂಡು ಹೋಗಿ."

"ಮಾನವನಲ್ಲಿ ಈಗಾಗಲೇ ಅಡಗಿರುವ ದೈವತ್ವವನ್ನು ಪ್ರಕಾಶಪಡಿಸುವುದೇ ಧರ್ಮ."

"ಪ್ರಾಣಿಸಹಜ ವ್ಯಕ್ತಿಯನ್ನು ಮನುಷ್ಯನನ್ನಾಗಿಸಿ, ಮನುಷ್ಯನನ್ನು ದೇವರನ್ನಾಗಿಸುವ ಭಾವನೆಯೇ ಧರ್ಮ."

"ಯಾರಿಗೆ ತನ್ನಲ್ಲಿ ತನಗೇ ನಂಬಿಕೆಯಿಲ್ಲವೋ ಅವನು ನಾಸ್ತಿಕ. ಹಳೆಯ ಧರ್ಮಗಳು ಹೇಳಿದವು, ದೇವರನ್ನು ನಂಬದವನು ನಾಸ್ತಿಕ ಎಂದು. ಹೊಸ ಧರ್ಮವು ಹೇಳುತ್ತದೆ, ಯಾರಿಗೆ ತನ್ನಲ್ಲಿ ನಂಬಿಕೆಯಿಲ್ಲವೋ ಅವನು ನಾಸ್ತಿಕ ಎಂದು."

## ಬಾಬಾಸಾಹೇಬ್ ಡಾ. ಬಿ. ಆರ್ ಅಂಬೇಡ್ಕರ್‌ರವರ ಸಾಧನೆಯ ಮೈಲಿಗಲ್ಲುಗಳು

– ವಿಶ್ವನಾಥ ಜಿ., ಗ್ರಂಥಪಾಲಕರು

ನವ ಭಾರತ ನಿರ್ಮಾಣಕ್ಕಾಗಿ ಶ್ರಮಿಸಿದ ಪ್ರತಿಭಾನ್ವಿತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅತ್ಯುತ್ತಮ ಸಂಸದೀಯ ಪಟು, ಸಂವಿಧಾನ ಶಿಲ್ಪಿ ಡಾ. ಬಿ. ಆರ್ ಅಂಬೇಡ್ಕರ್‌ರವರನ್ನು ಕುರಿತು ಓದಿ, ತಿಳಿದು ಅರ್ಥೈಸಿಕೊಳ್ಳುವುದು ಎಲ್ಲರ ಆದ್ಯ ಕರ್ತವ್ಯವಾಗದೆ. ಅವರ ಘನತೆ ಮತ್ತು ಗೌರವಗಳನ್ನು ಎತ್ತಿ ಹಿಡಿಯಬಹುದಾದ ಅನೇಕ ಅಂಶಗಳು ಬಾಬಾ ಸಾಹೇಬರ ಸಾಧನೆಯ ಮೈಲಿಗಲ್ಲುಗಳಂತಿವೆ. ಅವುಗಳನ್ನು ತಿಳಿಯುವುದಾದರೆ; ಇವರು

1. ಭಾರತದ ಅತ್ಯಂತ ವಿದ್ಯಾವಂತ ವ್ಯಕ್ತಿ
2. ಹೆಚ್ಚಿನ ಪುಸ್ತಕ ಬರೆದವರು
3. ವೇಗವಾದ ಟೈಪ್ ಮಾಡುತ್ತಿದ್ದವರು
4. ಅತಿ ಹೆಚ್ಚು ಚಳುವಳಿಗಳನ್ನು ಮಾಡಿದವರು
5. ಎಲ್ಲಾ ಜಾತಿಯ ಮಹಿಳೆಯರ ಹಕ್ಕುಗಳಿಗಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದವರು
6. ದಲಿತರು, ಹಿಂದುಳಿದವರ ಹಕ್ಕುಗಳನ್ನು ತಂದುಕೊಟ್ಟವರು.
7. ವರ್ಣ ಪದ್ಧತಿಯಿಂದ ಜನರನ್ನು ವಿಭಾಗ ಮಾಡಿದ ಹಿಂದೂ ಧರ್ಮ ಗ್ರಂಥಗಳಾದ ಮನುಸ್ಮೃತಿಯನ್ನು ಅಡ್ಡದಾರಿಯಲ್ಲಿ ಸುಟ್ಟವರು.
8. ಜಾತೀಯತೆ ತೊಲಗಿಸಲು ತಮ್ಮ ಪಾಂಡಿತ್ಯದಿಂದ ಸಾಧನೆ ಮಾಡಿದವರು
9. ಬಡ ಜನರ ಹಕ್ಕುಗಳಿಗಾಗಿ 4 ಮಕ್ಕಳನ್ನು ತ್ಯಾಗಮಾಡಿದವರು.
10. 2 ಲಕ್ಷ ಪುಸ್ತಕಗಳನ್ನು ಓದಿ ಕಂಠಪಾಠ ಮಾಡಿದವರು
12. ಭಾರತದ ಸಂವಿಧಾನವನ್ನು ಬರೆದವರು
13. ಪೂನಾ ಒಪ್ಪಂದವನ್ನು ಬರೆದರು
14. ಮೂಕನಾಯಕ ಪತ್ರಿಕೆ ಹೊರತಂದವರು.
15. ಭಹಿಷ್ಕೃತ ಭಾರತ ಪತ್ರಿಕೆಯನ್ನು ಹೊರತಂದವರು
16. ವೇಗದ ಬರಹಗಾರರು
17. ಎರಡು ಕೈಯಲ್ಲೂ ಬರಹಗಾರರು
19. ಅತ್ಯಂತ ಸಮರ್ಥ ಬ್ಯಾರಿಸ್ಟರ್
20. ಮುಂಬೈನ ಸೇಠ್ ಮಗನನ್ನು ನಕಲಿ ಪ್ರಕರಣದಿಂದ ಖುಲಾಸೆಗೊಳಿಸಿದವರು
21. ಯೋಗ ಮಾಡುವವರು
22. ಅತ್ಯಂತ ಪ್ರಾಮಾಣಿಕರು
23. 18 ರಿಂದ 20 ಗಂಟೆಗಳ ಅಧ್ಯಯನ ಮಾಡಿದವರು
24. OBC ಅರ್ಥವನ್ನು ಸರ್ದಾರ್ ಪಟೇಲ್ ಅವರಿಗೆ ಹೇಳಿಕೊಟ್ಟವರು.
25. ಶಾಲೆಯ ಹೊರಗೆ ಕುಳಿತು ಅವಮಾನ ಅನುಭವಿಸುತ್ತಾ ಉನ್ನತ ಶಿಕ್ಷಣ ಪಡೆದವರು.

**ಬಾಬಾಸಾಹೇಬ್ ಡಾ. ಭೀಮರಾವ್ ಅಂಬೇಡ್ಕರ್ ರವರಿಗೆ ಈ ಕೆಳಗಿನಂತೆ 9 ಭಾಷೆಗಳು ತಿಳಿದಿದ್ದವು.**

1. ಮರಾಠಿ (ಮಾತೃಭಾಷೆ)
2. ಹಿಂದಿ
3. ಸಂಸ್ಕೃತ
4. ಗುಜರಾತಿ
5. ಇಂಗ್ಲೀಷ್
6. ಪಾರ್ಸಿ
7. ಜರ್ಮನ್
8. ಫ್ರೆಂಚ್
9. ಪಾಲಿ

ಅವರು ಪಾಲಿ ವ್ಯಾಕರಣ ಮತ್ತು ನಿಘಂಟನ್ನು ಸಹ ಬರೆದಿದ್ದಾರೆ, ಇದನ್ನು ಮಹಾರಾಷ್ಟ್ರ ಸರ್ಕಾರವು ಪ್ರಕಟಿಸಿದೆ. "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರವಣಿಗೆ ಮತ್ತು ಭಾಷಣಗಳು ಸಂಪುಟ 16" ರಲ್ಲಿ ಮಹಾರಾಷ್ಟ್ರ ಸರ್ಕಾರವು ಪ್ರಕಟಿಸಿದೆ.

**ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂಸತ್ತಿನಲ್ಲಿ ಕೆಳಕಂಡ ಮಸೂದೆಯನ್ನು ಮಂಡಿಸಿದರು.**

1. ಮಹಾರ್ ಸಂಬಳ ಬಿಲ್
2. ಹಿಂದೂ ಕೋಡ್ ಬಿಲ್
3. ಜನತಾ ಮಸೂದೆಯ ಪ್ರಾತಿನಿಧ್ಯ
4. ಹೆರಿಗೆ ರಜೆಗಾಗಿ ಬಿಲ್
5. ಮಂತ್ರಿಗಳ ಸಂಬಳ ಬಿಲ್
6. ಕಾರ್ಮಿಕರಿಗೆ ಸಂಬಳ ಬಿಲ್
7. ಉದ್ಯೋಗ ವಿನಿಮಯ ಕೇಂದ್ರ ಸೇವೆ
8. ಪಿಂಚಣಿ ಬಿಲ್
9. ಭವಿಷ್ಯ ನಿಧಿ (PF) ಬಿಲ್

**ಬಾಬಾ ಸಾಹೇಬರಿಂದ ಪ್ರಕಟವಾದ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು:**

1. ಮೂಕ ನಾಯಕ್ – 31 ಜನವರಿ 1920
2. ಬಹಿಷ್ಕೃತ ಭಾರತ – 3 ಏಪ್ರಿಲ್ 1927
3. ಸಮತಾ– 29 ಜೂನ್ 1928
4 ಜನತಾ – 24 ನವೆಂಬರ್ 1930
5. ಪ್ರಬುದ್ಧ ಭಾರತ– 4 ಫೆಬ್ರವರಿ 1956

ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಜೀವನದಲ್ಲಿ ವಿವಿಧ ವಿಷಯಗಳ ಕುರಿತು 527 ಕ್ಕೂ ಹೆಚ್ಚು ಭಾಷಣಗಳನ್ನು ನೀಡಿದ್ದಾರೆ.

**ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸಂದ ಸನ್ಮಾನಗಳು.**

1. ಭಾರತ ರತ್ನ
2. ವಿಶ್ವದ ಶ್ರೇಷ್ಠ ವ್ಯಕ್ತಿ (ಕೊಲಂಬಿಯಾ ವಿಶ್ವವಿದ್ಯಾಲಯ)
3. ಯೂನಿವರ್ಸ್ ಮೇಕರ್ (ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ)
4. ದಿ ಗ್ರೇಟೆಸ್ಟ್ ಇಂಡಿಯನ್ (CNN IBN & History Tv)

**ಬಾಬಾಸಾಹೇಬ್ ಅಂಬೇಡ್ಕರ್ ವೈಯಕ್ತಿಕ ತಮ್ಮ ಲೈಬ್ರರಿಯಲ್ಲಿ ಈ ಕೆಳಕಂಡ ಪುಸ್ತಕಗಳನ್ನು ಹೊಂದಿದ್ದರು:**

1. ಇಂಗ್ಲಿಷ್ ಸಾಹಿತ್ಯ – 1300 ಪುಸ್ತಕಗಳು
2. ರಾಜಕೀಯ – 3,000 ಪುಸ್ತಕಗಳು
3. ಯುದ್ಧಶಾಸ್ತ್ರ– 300 ಪುಸ್ತಕಗಳು
4. ಅರ್ಥಶಾಸ್ತ್ರ – 1100 ಪುಸ್ತಕಗಳು
5. ಇತಿಹಾಸ – 2,600 ಪುಸ್ತಕಗಳು
6. ಧರ್ಮ– 2000 ಪುಸ್ತಕಗಳು
7. ಕಾನೂನು – 5,000 ಪುಸ್ತಕಗಳು
8. ಸಂಸ್ಕೃತ– 200 ಪುಸ್ತಕಗಳು
9. ಮರಾಠಿ– 800 ಪುಸ್ತಕಗಳು
10. ಹಿಂದಿ– 500 ಪುಸ್ತಕಗಳು
11. ತತ್ವಶಾಸ್ತ್ರ – 600 ಪುಸ್ತಕಗಳು
12. ವರದಿ– 1,000
13. ಉಲ್ಲೇಖ ಪುಸ್ತಕಗಳು – 400 ಪುಸ್ತಕಗಳು
14. ಪತ್ರಗಳು ಮತ್ತು ಭಾಷಣಗಳು– 600
15. ಜೀವನಚರಿತ್ರೆ – 1200
16. ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾ – ಸಂಪುಟಗಳು 1 ರಿಂದ 29
17. ಎನ್‌ಸೈಕ್ಲೋಪೀಡಿಯಾ ಆಫ್ ಸೋಶಿಯಲ್ ಸೈನ್ಸ್ – ಸಂಪುಟಗಳು 1 ರಿಂದ 15
18. ಕ್ಯಾಥೋಲಿಕ್ ಎನ್‌ಸೈಕ್ಲೋಪೀಡಿಯಾ – ಸಂಪುಟಗಳು 1 ರಿಂದ 12

19. ಎನ್‌ಸೈಕ್ಲೋಪೀಡಿಯಾ ಆಫ್ ಎಜುಕೇಶನ್

20. ಇತಿಹಾಸಕಾರರ ಪ್ರಪಂಚದ ಇತಿಹಾಸ – ಸಂಪುಟಗಳು 1 ರಿಂದ 25

21. ದೆಹಲಿಯಲ್ಲಿ ಇರಿಸಲಾಗಿರುವ ಪುಸ್ತಕಗಳು – ಬುದ್ಧ ಧಮ್ಮ, ಪಾಲಿ ಸಾಹಿತ್ಯ, ಮರಾಠಿ ಸಾಹಿತ್ಯ – 2000 ಪುಸ್ತಕಗಳು

22. ಉಳಿದ ವಿಷಯಗಳ ಕುರಿತು 2305 ಪುಸ್ತಕಗಳು.

ಅದಕ್ಕಾಗಿಯೇ ಬ್ರಿಟಿಷರು ಅವರನ್ನು ಚಲಿಸುವ ಗ್ರಂಥಾಲಯ ಎಂದು ಕರೆಯುತ್ತಿದ್ದರು.

ಒಬ್ಬ ಮನುಷ್ಯನ ಜೀವಿತ ಕಾಲದಲ್ಲಿ ಇಷ್ಟೊಂದು ಸಾಧನೆ ಮಾಡಲು ಸಾಧ್ಯವೇ. ಅದಕ್ಕೆ ಜಗತ್ತು ಅವರನ್ನು "Symbol of knowledge" ಎಂದು ಅವರನ್ನು ಗೌರವಿಸುತ್ತದೆ.

ಒಟ್ಟಾರೆಯಾಗಿ ಡಾ. ಅಂಬೇಡ್ಕರ್‌ರವರು ಒಂದು ದೊಡ್ಡ ಯಶೋಗಾಥೆಯ ಪ್ರತೀಕ. ಭಾರತದಲ್ಲಿ ಅತ್ಯಂತ ದೀನ ವ್ಯಕ್ತಿಯೂ ಸಹ ಅತ್ಯುನ್ನತ ಸ್ಥಾನಕ್ಕೆ ಏರಬಲ್ಲವೆಂಬುದಕ್ಕೆ ಅವರ ಬದುಕು ಮತ್ತು ಸಾಧನೆಯೇ ಒಂದು ನಿದರ್ಶನ. ಇದಕ್ಕಾಗಿ ಅವರನ್ನು ಶತಮಾನಗಳುರುಳಿದರೂ ದೇಶ ತುಂಬಾ ಕೃತಜ್ಞತೆಯಿಂದ ಸ್ಮರಿಸುತ್ತದೆ ಮತ್ತು ಸ್ಮರಿಸಬೇಕು ಕೂಡಾ!.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ವತ್ಸ, ಪ್ರೀತಿಗೆ ಸೋಲೆಂಬುದಿಲ್ಲ; ಇಂದೋ ನಾಳೆಯೋ / ಯುಗಾಂತರವೋ ಸತ್ಯ ಗೆದ್ದೇ ತೀರುವುದು. ಪ್ರೀತಿ ಖಂಡಿತ ಜಯ ಗಳಿಸುತ್ತದೆ. ನಮ್ಮ ಮಾನವಬಂಧುಗಳನ್ನು ನೀವು ಪ್ರೀತಿಸುತ್ತೀರೇನು?"

"ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡಿಪಾಗಿಡಿ. ನೀವು ತ್ಯಾಗಜೀವನವನ್ನು ಆರಿಸಿಕೊಳ್ಳುವುದಾದರೆ ಸೌಂದರ್ಯ, ಹಣ, ಅಧಿಕಾರಗಳ ಕಡೆ ತಿರುಗಿಯೂ ನೋಡಬೇಡಿ."

"ನೀವು ದ್ವೇಷ ಮತ್ತು ಅಸೂಯೆಗಳನ್ನು ಹೊರಸೂಸಿದರೆ ಅವುಗಳು ಚಕ್ರಬಡ್ಡಿ ಸಮೇತ ನಿಮಗೇ ಹಿಂತಿರುಗುತ್ತವೆ. ಯಾವು ಶಕ್ತಿಯೂ ಅದನ್ನು ತಡೆಯಲಾರದು. ಒಮ್ಮೆ ನೀವು ಅವುಗಳನ್ನು ಚಲಿಸುವಂತೆ ಮಾಡಿದರೆ ಅದರ ದುಷ್ಪರಿಣಾಮವನ್ನು ನೀವು ಅನುಭವಿಸಲೇಬೇಕು. ನೀವಿದನ್ನು ನೆನಪಿನಲ್ಲಿಟ್ಟರೆ ದುಷ್ಕಾರ್ಯಗಳಿಂದ ಪಾರಾಗಬಹುದು."

# ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ

– ರಾಘವೇಂದ್ರ ಕುಲಕರ್ಣಿ.,
ಮುಖ್ಯ ಶಿಕ್ಷಕರು, ಬಾಪೂಜಿ ಪ್ರೌಢಶಾಲೆ, ಶಿಕಾರಿಪುರ

ಭರತ ಖಂಡ ತನ್ನದೇ ಆದ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ರೂಪಿತವಾಗಿರುವ ಒಂದು ಸುಂದರ ದೇಶ. ಆಧ್ಯಾತ್ಮದ ಭದ್ರ ಬುನಾದಿಗೆ ಸಾಮಾಜಿಕ ಸುಧಾರಣೆಗೆ ಅನೇಕ ಮಹನೀಯರ ಮಾರ್ಗದರ್ಶನ, ಕೊಡುಗೆ ಅಪಾರವಾದುದು. ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ, ಅಕ್ಕಮಹಾದೇವಿ, ವಿದ್ಯಾರಣ್ಯ, ರಾಜಾರಾಮ್ ಮೋಹನ್ ರಾಯ್, ರಾಧಾಕೃಷ್ಣ, ಪರಮಹಂಸರಂತಹ ಮಹಾತ್ಮರ ಪಂಕ್ತಿಯಲ್ಲಿ ಸ್ವಾಮಿ ವಿವೇಕಾನಂದರು ಅಗ್ರಸ್ಥಾನದಲ್ಲಿರುವರು. ವಿಶ್ವ ಮಾನವ ವಿವೇಕಾನಂದರನ್ನು ತಿಳಿಯುವುದೆಂದರೆ ಭಾರತವನ್ನು ಅರಿತಂತೆ. ಅಂತಹ ಮಹಾನ್ ಪುರುಷರ ಜೀವನ ಚರಿತ್ರೆಯನ್ನು ಈ ಪ್ರಬಂಧದ ಮೂಲಕ ಅವಲೋಕಿಸುವ ಭಾಗ್ಯ ನಮ್ಮದಾಗಿದೆ.

**ಬಾಲ್ಯ ಜೀವನ:**

ತಮ್ಮ ಪೂರ್ವಾಶ್ರಮದ ದಿನಗಳಲ್ಲಿ ನರೇನ್ ಎಂದು ಕರೆಯಲ್ಪಡುತ್ತಿದ್ದ ವಿವೇಕಾನಂದರು ಅಥವಾ ನರೇಂದ್ರನಾಥ ದತ್ತರು 1863 ಜನವರಿ 12ರ ಸೋಮವಾರದಂದು ವಿಶ್ವನಾಥ ದತ್ತ ಮತ್ತು ಭುವನೇಶ್ವರಿದೇವಿ ದಂಪತಿಗಳಿಗೆ ಕಲ್ಕತ್ತಾದಲ್ಲಿ ಜನಿಸಿದರು. ದತ್ತ ಕುಟುಂಬವು ಶ್ರೀಮಂತಿಕೆ, ಗೌರವ, ಪ್ರತಿಷ್ಠೆಗಳನ್ನು ಗಳಿಸಿದ್ದು, ಔಧಾರ್ಯ ಪಾಂಡಿತ್ಯ ಮತ್ತು ಸ್ವಾತಂತ್ರ್ಯಪ್ರೀಯತೆಗೆ ಹೆಸರುವಾಸಿಯಾಗಿತ್ತು. ನರೇಂದ್ರರ ತಾತ ದುರ್ಗಾಚರಣದತ್ತರು ಪರ್ಶಿಯನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹಾಗೂ ಕಾನೂನಿನಲ್ಲಿ ಪರಿಣಿತರಾಗಿದ್ದರು. ಈ ಕುಟುಂಬಕ್ಕೆ ಬಡಜನರ ಬಗ್ಗೆ ಅಪಾರ ಸಹಾನುಭೂತಿ ಇತ್ತು. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ವಿಚಾರವಾದಿಯೂ ಪ್ರಗತಿಪರ ಮನೋಭಾವವುಳ್ಳವರಾಗಿದ್ದರು. ಭುವನೇಶ್ವರಿದೇವಿಯವರು ರಾಜಕುಟುಂಬದ ಸುಸಂಸ್ಕೃತ ಹೆಣ್ಣುಮಗಳಾಗಿದ್ದರು ಮತ್ತು ಪರಮ ಧಾರ್ಮಿಕರಾಗಿದ್ದರು. ಅವರಿಗೆ ನರೇಂದ್ರರು ಹುಟ್ಟುವ ಮುನ್ನ ಹೆಣ್ಣು ಮಕ್ಕಳಾಗಿದ್ದರೂ ಗಂಡು ಮಗುವಿಗಾಗಿ ಶಿವನಿಗೆ ಹರಕೆ ಹೊತ್ತಿದ್ದರು. ಕೆಲ ದಿನಗಳ ನಂತರ ಶಿವ ಅವರ ಕನಸಿನಲ್ಲಿ ಕಾಣಿಸಿಕೊಂಡು ತಾನು ಅವರ ಮಗನಾಗಿ ಜನಿಸುವೆನೆಂದು ವಚನವಿತ್ತ. ಆನಂತರವೇ ನರೇಂದ್ರನಾಥರ ಜನನವಾಯಿತು.

ಬಾಲ್ಯದಲ್ಲಿ ಅಕ್ಕಂದಿರನ್ನು ಪೀಡಿಸುವುದೆಂದರೆ ನರೇಂದ್ರನಿಗೆ ಬೆಲ್ಲ ತಿಂದಂತೆ, ಹಿಂದಿನಿಂದ ಬಂದು ಅವರಿಬ್ಬರಿಗೆ ಒಂದೊಂದು ಗುದ್ದು ಕೊಟ್ಟು ಓಡಿಬಿಡುತ್ತಿದ್ದನು. ತಾಯಿ ಮಗನನ್ನು ತೊಡೆಯ ಮೇಲೆ ಕೂರಿಸಿಕೊಂಡು ನರೇನ್ ನೀನು ಮುಂದೆ ಏನಾಗಬೇಕೆಂದಿದ್ದೀಯಾ? ಎಂದಾಗ, ನರೇನ್ ಅಮ್ಮಾ ನಾನು ಜೋಡು ಕುದುರೆ ಗಾಡಿ ಓಡಿಸುವ ಕೋಚ್ ಮ್ಯಾನ್ ಆಗಬೇಕೆಂದುಕೊಂಡಿದ್ದೇನೆ ಎಂದು ಅಮ್ಮನನ್ನು ನಗಿಸುತ್ತಿದ್ದನು. ಆಗ ತಾಯಿಯು ಕೋಚ್ ಮ್ಯಾನ್ ಕೆಲಸವೇನು ಸಾಮಾನ್ಯವೇ?, ಶ್ರೀಕೃಷ್ಣನೂ ಕೂಡ ಅರ್ಜುನನ ಕೋಚ್ ಮ್ಯಾನ್ ಆಗಿರಲಿಲ್ಲವೇ?. ಎಂದು ಸಮರ್ಥನೆ ಮಾಡಿದರು. ನರೇನ್ ಚಿಕ್ಕಂದಿನಲ್ಲಿ ತಾಯಿಯು ಹೇಳುತ್ತಿದ್ದ ರಾಮಾಯಣ, ಮಹಾಭಾರತದ ಕಥೆಗಳನ್ನು ಆಲಿಸುತ್ತಿದ್ದರು. ರಾಮಾಯಣವನ್ನು ಕೇಳುತ್ತಾ ಕೇಳುತ್ತಾ ಸರಳ ಶಿಶು ಹೃದಯ ಭಕ್ತಿಯಿಂದ ಪೂರ್ಣವಾಗುತ್ತಿತ್ತು.

**ಶ್ರೀ ರಾಮಕೃಷ್ಣರ ಒಡನಾಟ:**

ತಾರುಣ್ಯದಲ್ಲಿ ನರೇಂದ್ರನು ಗಂಭೀರ ಚೆಲುವಿನ ಒಳ್ಳೆಯ ಕ್ರೀಡಾಪಟುವಿನ ಮೈಕಟ್ಟು, ತೀಕ್ಷ್ಣಬುದ್ಧಿಮತ್ತೇ, ಕ್ರೀಡೆ, ತತ್ವಶಾಸ್ತ್ರ, ಸಂಗೀತ ವಿದ್ಯೆಗಳಲ್ಲಿ ಪ್ರವೀಣನಾಗಿದ್ದನು. ಒಮ್ಮೆ ಕಲ್ಕತ್ತಾದ ದಕ್ಷಿಣೇಶ್ವರದಲ್ಲಿರುವ ಸಾಧು ಒಬ್ಬರ ಬಗ್ಗೆ ತಮ್ಮ ಪ್ರಾಧ್ಯಾಪಕ ಹೇಷ್ಟಿಯವರು ಹೇಳಿದ್ದ ಮಾತುಗಳನ್ನು ನೆನೆಸಿಕೊಂಡ ನರೇಂದ್ರನು 1881ರಲ್ಲಿ ರಾಮಕೃಷ್ಣ ಪರಮಹಂಸರನ್ನು ಭೇಟಿ ಮಾಡಿದರು. ಅವರನ್ನು ಕುರಿತು ಮಹಾಶಯರೇ ನೀವು ದೇವರನ್ನು ನೋಡಿದ್ದೀರಾ? ಎಂದು ಪ್ರಶ್ನೆ ಹಾಕಿದರು. ರಾಮಕೃಷ್ಣರು ಹೌದು, ನಿನ್ನನ್ನು ಈಗ ಇಲ್ಲಿ ನೋಡುತ್ತಿರುವುದಕ್ಕಿಂತಲೂ ಗಾಢವಾಗಿ ಅವನನ್ನು ನಾನು ನೋಡಿದ್ದೇನೆ ಎಂದು ಉತ್ತರವಿತ್ತರು. ದಿನೆ ದಿನೆ ಅವರ ಸಂಬಂಧ ಬಹು ಸಾಮಿಪ್ಯವನ್ನು ತಂದುಕೊಟ್ಟಿತ್ತು. ಕ್ರಮೇಣ ರಾಮಕೃಷ್ಣರಿಗೆ ವಿವೇಕಾನಂದರು ಶರಣಾಗತರಾದರು. ಗುರುಗಳು ಅಪಾರವಾದ ತಾಳ್ಮೆಯಿಂದ ತಮ್ಮ ತರುಣ ಶಿಷ್ಯನ ಹೋರಾಟ ಮನೋಭಾವನೆಯನ್ನು ಶಾಂತಗೊಳಿಸಿ ಆಧ್ಯಾತ್ಮಿಕ ಆನಂದದೆಡೆಗೆ ಕರೆದೊಯ್ದರು. ರಾಮಕೃಷ್ಣರು ಮಹಾಸಮಾಧಿಸ್ಥರಾಗುವ ಮೂರು–ನಾಲ್ಕು ದಿನಗಳ ಮುಂಚೆ ತಮ್ಮ ಶಕ್ತಿಯನ್ನೆಲ್ಲಾ ನರೇಂದ್ರನಿಗೆ ಧಾರೆಯೆರೆದರು. ಈ ಶಕ್ತಿಯ ಪಲದಿಂದ ಅನೇಕ ಮಹಾತ್ಕಾರ್ಯಗಳನ್ನು ಎಸಗುವೆ ಎಂದು ರಾಮಕೃಷ್ಣ ಪರಮಹಂಸರು 1886ರಲ್ಲಿ ಸಮಾಧಿಸ್ಥರಾದರು.

**ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು:**

1893 ಸೆಪ್ಟೆಂಬರ್ 11ರಂದು ಸರ್ವಧರ್ಮ ಅಮ್ಮೇಳನ ಅಮೇರಿಕಾದ ಚಿಕಾಗೋದಲ್ಲಿ ಆರಂಭವಾಯಿತು. ಇದುವರೆಗೆ ವಿವೇಕಾನಂದರು ಅಷ್ಟು ದೊಡ್ಡ ಸಭಾಂಗಣದಲ್ಲಿ ಉಪನ್ಯಾಸ ನೀಡಿರಲಿಲ್ಲ. ಜ್ಞಾನದ ಅಧಿದೇವತೆ ಸರಸ್ವತಿಯನ್ನು ಮನದಲ್ಲಿ ಧ್ಯಾನಿಸಿ ನಂತರ ಸಭೆಯನ್ನುದ್ದೇಶಿಸಿ ಭಾಷಣದಲ್ಲಿ "ಅಮೇರಿಕಾದ ನನ್ನ ಸಹೋದರ ಸಹೋದರಿಯರೇ" ಎಂದು ಸಂಬೋಧಿಸಿದಾಗ ಸಭೆಯಲ್ಲಿ ಎರಡು ನಿಮಿಷಗಳ ಕಾಲ ಅಭಿನಂದನೆಯ ಕರತಾಡನ ಕೇಳಿಬಂತು. ಭಿಕ್ಷಾ ಪಾತ್ರೆಯನ್ನು ಹಿಡಿದಿದ್ದ ಸಾಮಾನ್ಯ ಭಾರತೀಯ ಸನ್ಯಾಸಿ ಕ್ಷಣಾರ್ಧದಲ್ಲಿ ಶ್ರೇಷ್ಟ ವ್ಯಕ್ತಿಯಾಗಿ ಪರಿಣಮಿಸಿದರು. ಭಾರತೀಯ ಹಿಂದೂ ಧರ್ಮದ ಪತಾಕೆಯನ್ನು ಹಾರಿಸಿ ಗೀತೆಯ ಮಹಿಮೆಯನ್ನು ಸಾರಿ ವಿಶ್ವಮಾನವರಾದರು. ಸ್ವಾಮೀಜಿಯವರ ಭಾಷಣವನ್ನೆಲ್ಲಾ ಅತ್ಯಂತ ಆದರದಿಂದ, ಮೆಚ್ಚುಗೆಯಿಂದ ಜನರು ಆಲಿಸಿದರು. ವಿಶ್ವ ವ್ಯಾಪಕತ್ವ ಎನ್ನುವುದೇ ಎಲ್ಲರ ಪ್ರಧಾನ ವಿಷಯವಾಗಿತ್ತು. ಪ್ರತಿಯೊಬ್ಬ ಪ್ರತಿನಿಧಿಯೂ ತಮ್ಮ ತಮ್ಮ ಧರ್ಮವನ್ನು ಕುರಿತು ಮಾತನಾಡಿದರೆ ಸ್ವಾಮಿ ವಿವೇಕಾನಂದರು ಮಾತ್ರ ಬಾನಿನಷ್ಟು ವಿಸ್ತಾರ, ಸಮುದ್ರದಷ್ಟು ಆಳವಾದದ್ದು ಎಂದು ದರ್ಮದ ಬಗ್ಗೆ ವಾಖ್ಯಾನಿಸಿದರು. ಮಹಾಸಭೆಯ ಮುಕ್ತಾಯದೊಂದಿಗೆ ಸ್ವಾಮಿಗಳ ವಿಶ್ರಾಂತಿ ದಿನಗಳು ಮುಗಿದವು. ನಂತರ ಅಮೇರಿಕಾದ ಪ್ರತಿಯೊಂದು ಭಾಗದಲ್ಲೂ ಎಡೆಬಿಡದೆ ಉಪನ್ಯಾಸ ನೀಡಿದರು.

**ಶಿಕ್ಷಣ ಮತ್ತು ಸಮಾಜ ಸೇವೆ:**

ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ, ಯಾವ ಬಗೆಯ ಶಿಕ್ಷಣದಿಂದ ಶೀಲ ರೂಪಗೊಳ್ಳುತ್ತದೆಯೋ ಅಂತಹ ಶಿಕ್ಷಣ ನಮಗೆ ಅವಶ್ಯಕ, ಯಾವ ಬಗೆಯ ಶಿಕ್ಷಣದಿಂದ ಶೀಲ ರೂಪಗೊಳ್ಳುವುದೊ ಅದರಿಂದ ಮನಶಕ್ತಿ ವೃದ್ಧಿಯಾಗುವುದು, ಬುದ್ಧಿ ವಿಕಾಸಗೊಳ್ಳುವುದು ಮತ್ತು ಸ್ವಂತ ಕಾಲಮೇಲೆ ನಾವು ನಿಂತುಕೊಳ್ಳಬಲ್ಲ ಶಿಕ್ಷಣದ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು. ಇತರರನ್ನು ಟೀಕೆ ಮಾಡುವುದು ಮತ್ತು ದ್ವೇಷ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ, ಪವಿತ್ರತೆ ನಮ್ಮ ಆಜನ್ಮಸಿದ್ದ ಹಕ್ಕು ಆಗಬೇಕು ಎಂದು ಕೂಡಾ ಪ್ರತಿಪಾದಿಸಿದರು. ನಿಮ್ಮ ನರಗಳನ್ನು ದೃಢಪಡಿಸಿ, ನಮಗೆ ಇಂದು

ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳನ್ನು ಹೊಂದಿರುವ ಯುವಕರು. ಯುವ ಜನತೆಯಿಂದ ಸದೃಢ ಭವ್ಯ ಭಾರತವನ್ನು ಕಟ್ಟಬಹುದು ಎಂಬುದು ಅವರ ಭವ್ಯ ಕನಸಾಗಿತ್ತು. ನಿಮ್ಮ ಆದರ್ಶ ಜಡವಸ್ತುವಾದರೆ ನೀವು ಜಡವಾಗುವಿರಿ, ನೋಡಿ! ನಮ್ಮ ಆದರ್ಶ ಆತ್ಮ ಅದೊಂದೇ ಶಾಶ್ವತ, ಉಳಿದವು ಯಾವೂ ಶಾಶ್ವತವಲ್ಲ, ಅದರಂತೆ ನಾವು ಶಾಶ್ವತವಾಗಿ ಬಾಳುವೆವು.

**ರಾಮಕೃಷ್ಣಮಠ:**

1897ರಲ್ಲಿ ರಾಮಕೃಷ್ಣಮಠವನ್ನು ಸ್ಥಾಪಿಸುವ ಮೂಲಕ ಸಮಾಜದ ಪಿಡುಗುಗಳನ್ನು, ಕಂದಾಚಾರ, ಮೂಢನಂಬಿಕೆಗಳನ್ನು ತೊಲಗಿಸುವಲ್ಲಿ ಶಾಲಾ ಕಾಲೇಜುಗಳ ಸ್ಥಾಪನೆ ಮೂಲಕ ಶಿಕ್ಷಣಕ್ಕೆ ಒತ್ತು ನೀಡುತ್ತಾ ಸಾಮಾಜಿಕ ಕಾಳಜಿ ಮೆರೆದರು. ಜಾತ್ಯಾತೀತತೆ, ವಯಕ್ತಿಕ ನಂಬಿಕೆ, ಜಾತಿ ಆಧಾರದ ಮೇಲೆ ನಿಂತಿಲ್ಲ ತತ್ವದ ಆಧಾರದ ಮೇಲೆ ನಿಲ್ಲಬೇಕು. ಮೈಸೂರಿನ ರಾಮಕೃಷ್ಣ ಮಠಕ್ಕೆ ರಾಷ್ಟಕವಿ ಕುವೆಂಪುರವರು ಮಠದ ಭಕ್ತರಾಗಿ ಆಗಾಗ ಭೇಟಿ ನೀಡುತ್ತಿದ್ದರು. ಸ್ವಾಮಿ ವಿವೇಕಾನಂದರು 1902 ಜುಲೈ 4ರಂದು ಸಂಜೆ ಒಂದು ಘಂಟೆ ಕಾಲ ಧ್ಯಾನಸ್ಥರಾಗಿ ತಮ್ಮ ಕೊಠಡಿಯಲ್ಲಿ ಕಳೆದು, ಮಲಗಿ ಎರಡು ಬಾರಿ ಉಸಿರನ್ನು ಎಳೆದು ಚಿರಶಾಂತಿಗೆ ಜಾರಿದರು.

ಇದುವರೆಗಿನ ಎಲ್ಲಾ ಅಂಶಗಳನ್ನುಅವಲೋಕಿಸಿದಾಗ ವಿಶ್ವ ಮಾನವ ವಿವೇಕಾನಂದರ ಕನಸು, ಭವ್ಯ ಭಾರತದ ನಿರ್ಮಾಣ, ಹಾಗಾಗಬೇಕೆಂದರೆ ಹಿಂದೂ ಸಮಾಜವು ತನ್ನ ತಮೋ ನಿದ್ರೆಯಿಂದ ಏಳಬೇಕು. ಕಣ್ತೆರೆದು ಸುತ್ತಮುತ್ತಲಿನ ಪ್ರಪಂಚವನ್ನು ನೋಡಬೇಕು. ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ಹೊಸ ಗಾಳಿ ಬೆಳಕನ್ನು ಆಹ್ವಾನಿಸಬೇಕು. ಇದು ಸಾರ್ಥಕ ಬದುಕಿನ ದಾರಿ. ಕುವೆಂಪುರವರು ಹೇಳುವಂತೆ "ಅವರು ಮಾನವತಾ ಮಿತ್ರ"ರಾಗಿದ್ದರು. ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ, ನಮಗಿಂತಲೂ ಬೇರೆಯಾದ ದೇವರಿಲ್ಲ, ಕ್ರೈಸ್ತ, ಬೌದ್ಧ, ರಾಮ, ಕೃಷ್ಣರೆಲ್ಲಾ ಅಹಮಸ್ಮೀ ಎಂಬ ಮಹಾವಾರಿದಿಯ ತರಂಗಗಳು ಮಾತ್ರ ಎಂದು ವ್ಯಾಖ್ಯಾನಿಸಿದರು. ಪರಿಶುದ್ದ ಹೃದಯವು ಸುಂದರ ಬದುಕನ್ನು ರೂಪಿಸುತ್ತದೆ. ಎಂಬ ನುಡಿಯಂತೆ ಸ್ವಾಮಿ ವಿವೇಕಾನಂದರು ರೂಪಿಸಿಕೊಟ್ಟ ಆದರ್ಶಗಳನ್ನು ಭಾರತೀಯರಾದ ನಾವು ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದೇ ಆದಲ್ಲಿ ಅವರ ಕನಸಿನ ಭವ್ಯ ಭಾರತ ನಿರ್ಮಾಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

"ಜೈ ಹಿಂದ್'

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

“ಎದ್ದೇಳಿ ಕಾರ್ಯೋನ್ಮುಖರಾಗಿ, ಈ ಜೀವನವಾದರೂ ಎಷ್ಟು ಕಾಲ? ನೀವು ಈ ಜಗತ್ತಿಗೆ ಬಂದ ಮೇಲೆ ಏನಾದರೂ ಗುರುತನ್ನು ಬಿಟ್ಟು ಹೋಗಿ, ಅದಿಲ್ಲದಿದ್ದರೆ ನಿಮಗೂ ಮರಕಲ್ಲುಗಳಿಗೂ ಏನು ವ್ಯತ್ಯಾಸ? ಅವೂ ಅಸ್ತಿತ್ವಕ್ಕೆ ಬರುತ್ತವೆ, ನಶಿಸಿ ನಿರ್ನಾಮವಾಗುತ್ತವೆ.”

“ಈ ಜಗತ್ತಿನ ಇತಿಹಾಸ ಆತ್ಮಶ್ರದ್ಧೆಯನ್ನು ಹೊಂದಿದ್ದ ಕೆಲವೇ ವ್ಯಕ್ತಿಗಳ ಇತಿಹಾಸ. ಆ ಶ್ರದ್ಧೆ ಅಂತರಂಗದ ದಿವ್ಯತೆಯನ್ನು ಬಡಿದೆಬ್ಬಿಸುತ್ತದೆ. ಆಗ ನೀವೇನನ್ನು ಬೇಕಾದರೂ ಸಾಧಿಸಬಲ್ಲಿರಿ.”

## ಕನ್ನಡದ ಉಳಿದರೆ ಸಾಕೇ? ಬೆಳೆಯ ಬೇಡವೇ?

– ಸಂಜಯ ಎನ್ ಜಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

"ಕನ್ನಡ ಭಾಷೆ ಚಂದ
ಕನ್ನಡ ಜನರು ಚಂದ
ಕವಿ ಪುಂಗವರು ಹುಟ್ಟಿದ ನಾಡು
ಸತ್ಯವಂತರು ಇರುವ ಬೀಡು
ಅದುವೇ ನಮ್ಮ ಕನ್ನಡ ನಾಡು"

**ಕನ್ನಡ ಉಳಿದರೆ ಸಾಕೆ? ಬೆಳೆಯುವುದು ಬೇಡವೇ? –**

ಎನ್ನುವ ಶೀರ್ಷಿಕೆಯಲ್ಲಿ ಇರುವಂತಹ ಅರ್ಥ 'ಕನ್ನಡ ನಮ್ಮ ಮಾತೃಭಾಷೆ ಅದು ಕೇವಲ ಮನೆಯ ಮಾತಾಗಿಯೇ ಉಳಿದಿರಬೇಕಾ? ಹಾಗಾದರೆ ಬೆಳೆಯುವುದು ಬೇಡವಾ? ಕನ್ನಡವು ಉಳಿದಿರುವುದು ಎಲ್ಲಿ? ಹಾಗೂ ಕನ್ನಡವು ಬೆಳೆಯಬೇಕಾದುದು ಎಲ್ಲಿ ಎನ್ನುವಂತಹ ಪ್ರಶ್ನೆಗಳು ಉದ್ಭವವಾದಾಗ; ಮೊದಲ ಬಾರಿಗೆ: ಕನ್ನಡ ಭಾಷೆಯು ಉಳಿದಿರುವುದು ಕೇವಲ ಸಾಹಿತ್ಯವಾಗಿ ಮತ್ತು ಮನೆಯ ಮಾತಾಗಿ ಹೋಗಿದೆ. ಸಾಹಿತಿಗಳ ಕಲ್ಪನೆಯಾಗಿ ಹಾಗೂ ನಾಟಕಗಳ ಸಂವಹನ ಕ್ರಿಯೆಗಳಾಗಿ ಉಳಿದಿದೆ. ಆದರೆ ಬೇರೆ ಭಾಷಿಕರು ಓದುವ ಮತ್ತು ನೋಡುವ ಕ್ರಿಯೆಯಲ್ಲಿ ಬೆಳವಣಿಗೆಯಾಗಿಲ್ಲ.

ಇನ್ನು, ಎರಡನೆಯದಾಗಿ: ಕನ್ನಡವು ಮೊದಲು ಎಲ್ಲಿ ಬೆಳೆಯಬೇಕು. ಕನ್ನಡ ಬೆಳವಣಿಗೆಗೆ ಶ್ರಮಿಸಬೇಕಾದವರು ಯಾರು? ಕನ್ನಡವು ಮೊದಲು ಶಿಕ್ಷಣದಲ್ಲಿ ಬೆಳೆಯಬೇಕು. ಶಿಕ್ಷಣದಲ್ಲಿ ಮಾತ್ರ ಪ್ರಥಮ ಭಾಷೆಯಾಗಿ ಅಲಂಕೃತವಾಗಿ ಉಳಿದಿದೆ. ಆದರೆ ಮಕ್ಕಳ ಅಧ್ಯಯನದ ಬೇರೆ ವಿಷಯಗಳಲ್ಲಿ ಪ್ರಮುಖವಾಗಿ ಪಠ್ಯಕ್ರಮಗಳಲ್ಲಿ, ವಿಜ್ಞಾನದಲ್ಲಿ ಬರೀ ಇಂಗ್ಲೀಷ್ ಭಾಷೆಯೇ ಇದೆ. ಅದಕ್ಕೆ ಕೆಲವು ವಿದ್ಯಾರ್ಥಿಗಳು ಈ ವಿಷಯವನ್ನು ಓದಲು ಭಯಭೀತರಾಗುತ್ತಾರೆ. ಏಕೆಂದರೆ ಇಂಗ್ಲೀಷ್ ಭಾಷೆಯೇ ಹಾಗಿದೆ. ಅದು ಪರಕೀಯ ಭಾಷೆ ಅದಕ್ಕಾಗಿಯೇ ಈ ವಿಷಯದಲ್ಲಿ ಮಾತೃಭಾಷೆ ಅಳವಡಿಕೆಯಾದರೆ ಮಾತೃಭಾಷೆಯಲ್ಲಿ ಓದುವಂತಹ ಮಕ್ಕಳೂ ಓದುವಂತಾಗುತ್ತಾರೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಇಂಗ್ಲೀಷ್ ಭಾಷೆ ಹೆಚ್ಚಾಗಿದೆ. ಅದರಲ್ಲಿಯೂ ಓದುವಂತಹ ಇಂಜಿನಿಯರಿಂಗ್, ಡಿಪ್ಲೋಮೊ, ಐಟಿಐ ಹಾಗೂ ಕೃಷಿ ತರಗತಿಗಳಲ್ಲಿ ಹೆಚ್ಚಾಗಿ ಇಂಗ್ಲೀಷ್ ಇದೆ. ಅದೇ ತರಗತಿಯ ಪಠ್ಯಕ್ರಮಗಳು ಕನ್ನಡ ಮಾಧ್ಯಮದಲ್ಲಿ ಇದ್ದರೆ "ಕೃಷಿ ತರಗತಿಗಳಲ್ಲಿ ರೈತರ ಮಕ್ಕಳೇ ಅತಿ ಹೆಚ್ಚಾಗಿಯೇ ಇರುತ್ತಿದ್ದರು. ಜ್ಞಾನದಲ್ಲಿ, ನಮ್ಮ ಮಾತೃ ಭಾಷೆಯಲ್ಲಿ ನಮ್ಮ ಸಂಸ್ಕೃತಿ, ನಮ್ಮ ಕಲಿ, ನಮ್ಮತನ ಇರುತ್ತದೆ. ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು, ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಯುವುದು ಕಲಿಸುವುದು ನಮ್ಮ ಭಾಷೆಯ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಮೂಢ ನಂಬಿಕೆಯಾಗಿಯೇ ಉಳಿದಿದೆ.

ಕನ್ನಡದ ಮೂಲಕ ಕಲಿತೂ ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೇ ಆದ ಡಾ. ಸಿ. ಎನ್. ಆರ್. ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಜನರಿಗೆ ಇಂಗ್ಲೀಷ್‌ನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ. ನಾವು ಕಲಿಯುವ ಕನ್ನಡವೇ ನಮಗೆ ಬದುಕು ಕಟ್ಟಿಕೊಡುವ ಭಾಷೆಯಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಶ್ರಮಿಸಬೇಕಾದವರು ಯಾರು? ಮೊದಲನೆಯದಾಗಿ ಸರ್ಕಾರ, ಎರಡನೇಯದಾಗಿ ಪೋಷಕರು. ಮೂರನೆಯದಾಗಿ ಸಾಹಿತಿಗಳು ಹಾಗೂ ಸಾರ್ವಜನಿಕರು (ಕನ್ನಡಿಗರು) ಮತ್ತು ಸಮೂಹ

ಮಾಧ್ಯಮಗಳು, ಸರ್ಕಾರವು ನೀತಿ ನಿಬಂಧನೆಗಳನ್ನು ಎಲ್ಲಾ ಉದ್ಯೋಗಾವಕಾಶಗಳನ್ನು ಕನ್ನಡದವರಿಗೆ ಮೊದಲ ಆದ್ಯತೆ ನೀಡಬೇಕು ಹಾಗೂ ಎಲ್ಲಾ ವ್ಯವಹಾರ ಜ್ಞಾನವ ಕನ್ನಡದಲ್ಲಿಯೇ ಇರಬೇಕು. ಸರ್ಕಾರದ ಆಡಳಿತ ಕಛೇರಿ, ಶಿಕ್ಷಣ, ಸಂಶೋಧನೆಗಳಲ್ಲಿ ಮಾತೃಭಾಷೆಯು ಪ್ರಮುಖ ಸ್ಥಾನದಲ್ಲಿರಬೇಕು. ಪೋಷಕರು ಮಕ್ಕಳ ಭವಿಷ್ಯ ಉಜ್ವಲವಾಗಿರಬೇಕು ಎಂದು ಆಶಿಸುತ್ತಾರೆ. ಅದಕ್ಕೆ ಪೋಷಕರು ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟಪಡುವುದಿಲ್ಲ. ಇದು ನಿಲ್ಲಬೇಕು, ಮಕ್ಕಳಿಗೆ ಮೊದಲಿಗೆ ಕನ್ನಡ ಕಲಿಕೆಯನ್ನು ಮನೆಯಲ್ಲಿ ತಿಳಿಸಬೇಕು. ಇಂಗ್ಲೀಷ್ ಭಾಷೆಯ ವ್ಯಾಮೋಹ ಬಿಡಿಸಬೇಕು. ಸಮೂಹ ಮಾಧ್ಯಮಗಳಾದಂತೆ ದಿನ ಪತ್ರಿಕೆಗಳು, ಟಿ.ವಿ. (ದೂರದರ್ಶನ) ರೇಡಿಯೋ, ಪೇಸ್ ಬುಕ್‌ಗಳಂತಹ ಸಾಮಾಜಿಕ ಜಾಲತಾಣಗಳಲ್ಲಿ, ಜಾಹಿರಾತುಗಳಲ್ಲಿ ಕನ್ನಡವನ್ನು ಉನ್ನತ ಸ್ಥಾನದಲ್ಲಿ ಇಟ್ಟು ಅದನ್ನು ಬೆಳೆಸಲು ಶ್ರಮಿಸಬೇಕು.

**ಕನ್ನಡ ಉಳಿಸಿ, ಬೆಳೆಸಿ** **ಕನ್ನಡವೇ ಸತ್ಯ ಕನ್ನಡವೇ ನಿತ್ಯ**

***

## ಕರ್ನಾಟಕ ರತ್ನ ಡಾ॥ ಪುನೀತ್ ರಾಜ್‌ಕುಮಾರ್



– ರಫಿ ದೋಡ್ಮನಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಭಾರತೀಯ ಚಿತ್ರನಟ, ಹಿನ್ನೆಲೆ ಗಾಯಕ ಮತ್ತು ದೂರದರ್ಶನ ನಿರೂಪಕ ಮತ್ತು ಸಿನಿಮಾ ನಿರ್ಮಾಪಕ. ಇವರು 29 ಕನ್ನಡ ಚಲನಚಿತ್ರಗಳಲ್ಲಿ ನಾಯಕ ನಟನಾಗಿ ನಟನೆ ಮಾಡಿದ್ದಾರೆ. ಬಾಲ್ಯದಲ್ಲಿ ತನ್ನ ತಂದೆ ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದರು. ವಸಂತ ಗೀತ (1980), ಭಾಗ್ಯವಂತ (1981), ಚಲಿಸುವ ಮೋಡಗಳು (1982), ಎರಡು ನಕ್ಷತ್ರಗಳು (1983), ಭಕ್ತ ಪ್ರಹ್ಲಾದ, ಯಾರಿವನು ಮತ್ತು ಬೆಟ್ಟದ ಹೂವು (1985) ಚಿತ್ರಗಳಲ್ಲಿ ನಟನೆಗೆ ಮೆಚ್ಚುಗೆ ಪಡೆದರು. ಅವರ ಬೆಟ್ಟದ ಹೂವು ಚಿತ್ರದ 'ರಾಮು' ಪಾತ್ರಕ್ಕೆ ಅತ್ಯುತ್ತಮ ಬಾಲ ಕಲಾವಿದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಪಾತ್ರರಾಗಿದ್ದರು. ಚಲಿಸುವ ಮೋಡಗಳು ಮತ್ತು ಎರಡು ನಕ್ಷತ್ರಗಳು ಚಿತ್ರಕ್ಕಾಗಿ ಕರ್ನಾಟಕ ರಾಜ್ಯ ಅತ್ಯುತ್ತಮ ಬಾಲ ಕಲಾವಿದ ಪ್ರಶಸ್ತಿಯನ್ನು ಪಡೆದರು. ಪುನೀತ್ ಅವರು 2002ರಲ್ಲಿ ಅಪ್ಪು ಚಿತ್ರದಲ್ಲಿ ಮೊದಲ ಬಾರಿಗೆ ನಾಯಕನಟನಾಗಿ ಸಿನಿಮಾರಂಗದ ಪಯಣ ಶುರುಮಾಡಿದರು. ಅವರಿಗೆ ಅಭಿಮಾನಿಗಳು ಪವರ್‌ಸ್ಟಾರ್ ಎಂದು ಕರೆಯುತ್ತಾರೆ.

ಅವರು ನಟಿಸಿದ ಅಪ್ಪು (2002), ಅಭಿ (2003), ವೀರಕನ್ನಡಿಗ (2004), ಮೌರ್ಯ (2004), ಆಕಾಶ್ (2005), ಅಜಯ್ (2006), ಅರಸು (2007), ಮಿಲನ (2007), ವಂಶಿ (2008), ರಾಮ್ (2009), ಪೃಥ್ವಿ (2010), ಜಾಕಿ (2010), ಹುಡುಗರು (2011), ಅಣ್ಣಾ ಬಾಂಡ್ (2012), ಪವರ್ (2014), ರಣವಿಕ್ರಮ (2015), ದೊಡ್ಮನೆ ಹುಡುಗ (2016), ರಾಜಕುಮಾರ (2017), ಯುವರತ್ನ(2021), ಜೇಮ್ಸ್ (2022) ಸೇರಿದಂತೆ ಇತರ ಹಲವು ಚಲನಚಿತ್ರಗಳು ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ಅವರು ಕನ್ನಡ ಚಿತ್ರರಂಗದ ಪ್ರಮುಖ ಹಾಗೂ ಅತ್ಯಂತ ಯಶಸ್ವಿ ನಾಯಕನಟರಾಗಿದ್ದರು. ಅವರು ಪ್ರಸಿದ್ಧ ಟಿವಿ ಆಟದ ಕಾರ್ಯಕ್ರಮ ಹೂ ವಾಂಟ್ಸ್ ಟು ಬಿ ಮಿಲಿಯನೇರ್ ಕನ್ನಡ ಆವೃತ್ತಿ ಕನ್ನಡದ ಕೋಟ್ಯಾಧಿಪತಿಯ ನಿರೂಪಣೆ

ಮಾಡಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ರಾಯಭಾರಿಯಾಗಿ ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

**ವೈಯಕ್ತಿಕ ಜೀವನ**

ಪುನೀತ್ ರವರ (ಮೊದಲ ಹೆಸರು ಲೋಹಿತ್) ಡಾ. ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ದಂಪತಿಗೆ ಚೆನ್ನೈನಲ್ಲಿ ಜನಿಸಿದರು. ಇವರು ರಾಜಕುಮಾರ್ ದಂಪತಿಯ ಐದನೇ ಮತ್ತು ಕಿರಿಯ ಮಗ. ಇವರ ಸಹೋದರರಾದ ಶಿವರಾಜ್‌ಕುಮಾರ್ (ನಟ) ಮತ್ತು ರಾಘವೇಂದ್ರ ರಾಜ್‌ಕುಮಾರ್ (ನಟ) ಅವರು ಜನಪ್ರಿಯ ನಟರು. ಪುನೀತ್ ಆರು ವರ್ಷ ವಯಸ್ಸಿನವನಾಗಿದ್ದಾಗ ಅವರ ಕುಟುಂಬ ಮೈಸೂರಿಗೆ ಸ್ಥಳಾಂತರಗೊಂಡಿತು. ಅವರು ಹತ್ತು ವರ್ಷ ವಯಸ್ಸಿನವನಾಗುವವರೆಗೂ ಅವರ ತಂದೆ ಅವರನ್ನು ಮತ್ತು ಅವರ ಸಹೋದರಿ ಪೂರ್ಣಿಮಾರನ್ನು ಚಲನಚಿತ್ರದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಪುನೀತ್ 1 ಡಿಸೆಂಬರ್ 1999ರಂದು ಚಿಕ್ಕಮಗಳೂರಿನ ಅಶ್ವಿನಿ ರೇವಂತ್ ರನ್ನು ವಿವಾಹವಾದರು. ಇವರಿಗೆ ಧೃತಿ, ವಂದಿತಾ ಹೆಸರಿನ ಇಬ್ಬರು ಪುತ್ರಿಯರಿದ್ದಾರೆ.

**ನಟನಾ ವೃತ್ತಿ ಜೀವನ**

**ಬಾಲ ನಟನಾಗಿ**

ನಿರ್ದೇಶಕ ವಿ. ಸೋಮಶೇಖರ್ ಅವರು ಪುನೀತ್ ಅವರನ್ನು ಆರು ತಿಂಗಳ ಮಗುವಾಗಿದ್ದಾಗ ಪ್ರೇಮದ ಕಾಣಿಕೆ (1976) ಮತ್ತು ಆರತಿ ಚಿತ್ರದಲ್ಲಿ ತೆರೆಯ ಮೇಲೆ ತೋರಿಸಿದರು. ಇದರ ನಂತರ ಪುನೀತ್ ಒಂದು ವರ್ಷದವನಾಗಿದ್ದಾಗ ವಿಜಯ್ ಅವರ ಕೃಷ್ಣಮೂರ್ತಿ ಪುರಾಣಿಕ್ ಅವರ ಕಾದಂಬರಿಯನ್ನು ಆಧರಿಸಿದ ಅದೇ ಹೆಸರಿನ ಸನಾದಿ ಅಪ್ಪಣ್ಣ (1977) ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ತಾಯಿಗೆ ತಕ್ಕ ಮಗ (1978) ಮತ್ತೆ ವಿ. ಸೋಮಶೇಖರ್ ನಿರ್ದೇಶಿಸಿದ ಚಿತ್ರ ಮತ್ತು ಅವರ ತಂದೆ ನಟಿಸಿದ ಚಿತ್ರ. ಎರಡು ವರ್ಷಗಳ ನಂತರ ನಿರ್ದೇಶಕ ದೊರೆ–ಭಗವಾನ್ ಪುನೀತ್ ಅವರನ್ನು ವಸಂತ ಗೀತ (1980) ನಲ್ಲಿ ಶ್ಯಾಮ್ ಪಾತ್ರದಲ್ಲಿ ಹಾಕಿದರು. ಇದರ ನಂತರ ಕೆ. ಎಸ್. ಎಲ್. ಸ್ವಾಮಿಯವರ ಪೌರಾಣಿಕ ನಾಟಕ ಭೂಮಿಗೆ ಬಂದ ಭಗವಂತ (1981, ಭಗವಂತ ಕೃಷ್ಣನಾಗಿ ಕಾಣಿಸಿಕೊಂಡರು) ಮತ್ತು ಬಿ. ಎಸ್. ರಂಗ ಅವರ ಭಾಗ್ಯವಂತ (1982) ಚಿತ್ರದಲ್ಲಿ ಅವರು ಟಿ. ಜಿ. ಲಿಂಗಪ್ಪ ಸಂಯೋಜಿಸಿದ ತಮ್ಮ ಮೊದಲ ಜನಪ್ರಿಯ ಗೀತೆಬಾನ ದಾರಿಯಲ್ಲಿ ಸೂರ್ಯ ವನ್ನು ಧ್ವನಿಮುದ್ರಿಸಿದರು. ಅದೇ ವರ್ಷ ಅವರು ತಮ್ಮ ತಂದೆಯೊಂದಿಗೆ ಎರಡು ಜನಪ್ರಿಯ ಚಿತ್ರಗಳಲ್ಲಿ (ಚಲಿಸುವ ಮೋಡಗಳು ಮತ್ತು ಹೊಸ ಬೆಳಕು) ಕಾಣಿಸಿಕೊಂಡರು. ಚಲಿಸುವ ಮೋಡಗಳು ಮತ್ತು ಹೊಸ ಬೆಳಕು ಚಿತ್ರಕ್ಕಾಗಿ ಅವರು ತಮ್ಮ ಮೊದಲ ಅತ್ಯುತ್ತಮ ಬಾಲ ಕಲಾವಿದ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು(ಪುರುಷ) ಪಡೆದರು. ಅವರು ಎರಡು ಪೌರಾಣಿಕ ಚಲನಚಿತ್ರಗಳಲ್ಲಿ ಕಾಣಿಸಿಕೊಂಡರು: ಭಕ್ತ ಪ್ರಹ್ಲಾದ: ಮುಖ್ಯಪಾತ್ರವಾದ ಪ್ರಹ್ಲಾದನಾಗಿ ಮತ್ತು ಎರಡು ನಕ್ಷತ್ರಗಳು ಚಿತ್ರಕ್ಕಾಗಿ ತಮ್ಮ ಎರಡನೇ ಅತ್ಯುತ್ತಮ ಬಾಲ ಕಲಾವಿದ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು(ಪುರುಷ) ಪಡೆದರು.

1984ರಲ್ಲಿ ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಥ್ರಿಲ್ಲರ್ ಯಾರಿವನು ಚಿತ್ರದಲ್ಲಿ ನಟಿಸಿದರು ಮತ್ತು ರಾಜನ್–ನಾಗೇಂದ್ರ ಬರೆದ ಕಣ್ಣಿಗೆ ಕಾಣುವ ಹಾಡನ್ನು ಹಾಡಿದರು. ಬಾಲನಟನಾಗಿ ಅವರಿಗೆ ದೊಡ್ಡ ಬ್ರೇಕ್ ಕೊಟ್ಟ ಎನ್. ಲಕ್ಷ್ಮೀನಾರಾಯಣ ನಿರ್ದೇಶಿಸಿದ ಮತ್ತು ಶೆರ್ಲಿ ಎಲ್. ಅರೋರಾ ಅವರ ವಾಟ್ ತೆನ್, ರಾಮನ್? ಕಾದಂಬರಿ ಆಧಾರಿತ 1985 ರ ನಾಟಕ ಬೆಟ್ಟದ ಹೂವಿನಲ್ಲಿ ಮುಗ್ಧ ರಾಮು ಪಾತ್ರಕ್ಕಾಗಿ ಪುನೀತ್ ಅವರು 33

ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಬಾಲ ಕಲಾವಿದ ಪ್ರಶಸ್ತಿಯನ್ನು ಪಡೆದರು. ಅವರ ಹದಿಹರೆಯದ ಆರಂಭದಲ್ಲಿ ಅವರು ಶಿವ ಮೆಚ್ಚಿದ ಕಣ್ಣಪ್ಪ (1988) ನಲ್ಲಿ ತನ್ನ ಹಿರಿಯ ಸಹೋದರ ಶಿವರಾಜ್‌ಕುಮಾರ್ (ನಟ)ನೊಂದಿಗೆ ಯುವ ಕಣ್ಣಪ್ಪನಾಗಿ ಕಾಣಿಸಿಕೊಂಡರು. ಪುನೀತ್ ಅವರು ಬಾಲನಟನಾಗಿ ಕೊನೆಯ ಪಾತ್ರವು ಪರಶುರಾಮ್ (1989) ಚಿತ್ರದಲ್ಲಿ ಅವರ ತಂದೆಯೊಂದಿಗೆ ಆಗಿತ್ತು.

**ನಾಯಕನಾಗಿ ಪದಾರ್ಪಣೆ ಮತ್ತು ಮಹತ್ವದ ತಿರುವು**

ಏಪ್ರಿಲ್ 2002 ರಲ್ಲಿ ಪುನೀತ್ ಅವರು ಗುರುಕಿರಣ್ ಸಂಗೀತದ ಪುರಿ ಜಗನ್ನಾಥ್ ನಿರ್ದೇಶನದ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣದ ಮೊದಲ ಚಲನಚಿತ್ರ ಅಪ್ಪು ಮೂಲಕ ಚಲನಚಿತ್ರಕ್ಕೆ ಪ್ರಮುಖ ಪಾತ್ರದಲ್ಲಿ ಪಾದಾರ್ಪಣೆ ಮಾಡಿದರು. ಅದು ನಟಿ ರಕ್ಷಿತಾ ಅವರ ಮೊದಲ ಚಲನಚಿತ್ರ ಕೂಡ ಆಗಿತ್ತು. ಇದರಲ್ಲಿ ಅವರು ಕಾಲೇಜು ಹುಡುಗನ ಪಾತ್ರವನ್ನು ನಿರ್ವಹಿಸಿದ್ದರು ಮತ್ತು ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಯಶಸ್ವಿಯಾಯಿತು ಮತ್ತು ವಿಮರ್ಶಕರು ಅವರ ನೃತ್ಯ ಕೌಶಲ್ಯವನ್ನು ಶ್ಲಾಘಿಸಿದರು. ಈ ಸಿನಿಮಾದಲ್ಲಿ ಪುನೀತ್ ಅವರು ಉಪೇಂದ್ರ ಸಾಹಿತ್ಯದ ಮತ್ತು ಗುರುಕಿರಣ್ ಸಂಗೀತದ ತಾಲಿಬಾನ್ ಅಲ್ಲಾ ಅಲ್ಲ ಹಾಡನ್ನು ಹಾಡಿದ್ದಾರೆ. ಚಿತ್ರದ ಯಶಸ್ಸು ತೆಲುಗುನಲ್ಲಿ (ಈಡಿಯಟ್ (2003)) ಮತ್ತು ತಮಿಳಿನಲ್ಲಿ (ದಮ್ (2003)) ರೀಮೇಕ್‌ಗಳನ್ನು ಹುಟ್ಟುಹಾಕಿತು.

ಪುನೀತ್ ನಂತರ ದಿನೇಶ್ ಬಾಬು ಅವರ ಅಭಿ (2003) ನಲ್ಲಿ ತಾಯಿಗೆ ತಕ್ಕ ಮಗ ಹಾಗೂ ಕಾಲೇಜು ಹುಡುಗನಾಗಿ ಕಾಣಿಸಿಕೊಂಡರು. ಇದು ನೈಜ ಕಥೆಯನ್ನು ಆಧರಿಸಿದ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಿಸಿದ ಚಿತ್ರ ಪುನೀತ್ ಅವರು ನಟಿ ರಮ್ಯಾ ಅವರೊಂದಿಗೆ ನಟಿಸಿದ್ದಾರೆ. ಇದು ನಟಿ ರಮ್ಯಾ ಅವರ ಮೊದಲ ಚಿತ್ರ.

ಮೆಹರ್ ರಮೇಶ್ ಅವರ ವೀರ ಕನ್ನಡಿಗ ಪುನೀತ್ ಅವರ 2004 ರಲ್ಲಿ ಬಿಡುಗಡೆ ಆದ ಮೊದಲ ಚಿತ್ರ. ಪುರಿ ಜಗನ್ನಾಥ್ ಬರೆದಿರುವ ಈ ಚಿತ್ರವನ್ನು ಏಕಕಾಲದಲ್ಲಿ ತೆಲುಗಿನಲ್ಲಿ ಆಂಧ್ರವಾಲಾ ಎಂಬ ಹೆಸರಿನಲ್ಲಿ ನಿರ್ಮಿಸಲಾಯಿತು ಇದರಲ್ಲಿ ಎನ್. ಟಿ. ರಾಮರಾವ್ ಜೂನಿಯರ್ ರವರು ಪ್ರಮುಖ ಪಾತ್ರದಲ್ಲಿ ಇದ್ದರು. ಈ ಚಿತ್ರದಲ್ಲಿ ಚೊಚ್ಚಲ ನಟಿ ಅನಿತಾ ಜೋಡಿಯಾಗಿದ್ದರು. ಈ ಚಿತ್ರ ಅವರ ನೃತ್ಯ ಮತ್ತು ಸಾಹಸ ಕೌಶಲ್ಯಗಳನ್ನು ಪ್ರದರ್ಶಿಸಿತು. ಚಿತ್ರದ ಹಿಂಸಾಚಾರ ಮತ್ತು ಕಳಪೆ ಕಥಾವಸ್ತು ಬಗ್ಗೆ ಟೀಕಿಸಿದರೂ ಅದು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಯಿತು. ಪುನೀತ್ ನಂತರ ಎಸ್. ನಾರಾಯಣ್ ಅವರ ಕೌಟುಂಬಿಕ ನಾಟಕ ಮೌರ್ಯದಲ್ಲಿ ನಟಿಸಿದರು. ಇದು ರವಿತೇಜ ನಟಿಸಿದ ಮತ್ತು ಪುರಿ ಜಗನ್ನಾಥ್ ಬರೆದ ತೆಲುಗಿನ ಅಮ್ಮಾ ನನ್ನ ಓ ತಮಿಳ ಅಮ್ಮಾಯಿಯ ರಿಮೇಕ್. ಈ ಚಿತ್ರ ಅವರನ್ನು ನಟನಾಗಿ ಖ್ಯಾತಿಯನ್ನು ಹೆಚ್ಚಿಸಿತು.

ಅವರು 2005 ರಲ್ಲಿ ಎರಡು ಚಲನಚಿತ್ರಗಳನ್ನು ಬಿಡುಗಡೆ ಮಾಡಿದರು. ಮಹೇಶ್ ಬಾಬು ಅವರ ಆಕಾಶ್ ಪುನೀತ್ ಮತ್ತು ರಮ್ಯಾ ಅವರನ್ನು (ಅಭಿಯಿಂದ) ಮತ್ತೆ ಜೊತೆ ಸೇರಿಸಿತು ಮತ್ತು ಅವರು ವೀರ ಶಂಕರ್ ಅವರ ಸಾಹಸ ಚಿತ್ರ ನಮ್ಮ ಬಸವದಲ್ಲಿ ಗೌರಿ ಮುಂಜಾಲ್ ಅವರೊಂದಿಗೆ ಕಾಣಿಸಿಕೊಂಡರು. ಅವರು ಎರಡೂ ಚಿತ್ರಗಳಲ್ಲಿ ಹಾಡುಗಳನ್ನು ರೆಕಾರ್ಡ್ ಮಾಡಿದ್ದಾರೆ. ಅಜಯ್ ಮೆಹರ್ ರಮೇಶ್ ನಿರ್ದೇಶನದ ಮತ್ತು ರಾಕ್‌ಲೈನ್ ವೆಂಕಟೇಶ್ ನಿರ್ಮಿಸಿದ 2006 ರಲ್ಲಿ ಬಿಡುಗಡೆಯಾದ ಪುನೀತ್ ಅವರ ಏಕೈಕ ಚಿತ್ರ ಇದು 2003 ರ ತೆಲುಗು ಒಕ್ಕಡು ಚಿತ್ರದ ರಿಮೇಕ್ ಅವರು ಈ ಚಿತ್ರದಲ್ಲಿ ವೃತ್ತಿಪರ ಕಬಡ್ಡಿ ಆಟಗಾರನ ಪಾತ್ರವನ್ನು ನಿರ್ವಹಿಸಿದರು. ಅವರು ಈ ಚಿತ್ರದಲ್ಲಿ ತಮ್ಮ ಚಿಕ್ಕಪ್ಪನಿಂದ (ಪ್ರಕಾಶ್ ರಾಜ್ ನಿರ್ವಹಿಸಿದ) ಅಪಾಯದಲ್ಲಿದ

ಹುಡುಗಿಯನ್ನು ರಕ್ಷಿಸುತ್ತಾರೆ. ಈ ಚಿತ್ರಗಳ ಪರಿಣಾಮವಾಗಿ ಪುನೀತ್ ಅವರನ್ನು ಸ್ಯಾಂಡಲ್‌ವುಡ್‌ನ ಪವರ್‌ಸ್ಟಾರ್ ಎಂದು ಕರೆಯಲಾಯಿತು.

ಅರಸು ಪುನೀತ್ ಅವರ ನಿರ್ಮಾಣದ ಮಹೇಶ್ ಬಾಬು ನಿರ್ದೇಶಿಸಿದ 2007ರಲ್ಲಿ ಬಿಡುಗಡೆಯಾದ ಮೊದಲ ಚಿತ್ರ ಇದರಲ್ಲಿ ಅವರು ಹೊರದೇಶದಿಂದ ಬಂದ ಉದ್ಯಮಿಯಾಗಿ ನಟಿಸಿದರು. ಈ ಚಿತ್ರದಲ್ಲಿ ಅವರು ಪ್ರೀತಿಸುವ ಮಹಿಳೆಗಾಗಿ ತಮ್ಮ ಸಂಪತ್ತನ್ನು ತ್ಯಜಿಸುತ್ತಾರೆ. ಅವರ ಅಭಿನಯಕ್ಕಾಗಿ ಅವರು ತಮ್ಮ ಮೊದಲ ಫಿಲ್ಮ್‌ಫೇರ್ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದರು. ಆ ವರ್ಷ ಪುನೀತ್ ಅವರ ಬಿಡುಗಡೆಯಾದ ಇನ್ನೊಂದು ಚಿತ್ರ ಪ್ರಕಾಶ್‌ರ ಸಾಂಪ್ರದಾಯಿಕ ಕೌಟುಂಬಿಕ ಮೌಲ್ಯಗಳ ಚಿತ್ರ ಮಿಲನ. ನಟಿ ಪಾರ್ವತಿ (ನಟಿ) ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಈ ಚಿತ್ರದಲ್ಲಿ ಅವರು ಆಕಾಶ್ ಎಂಬ ರೇಡಿಯೋ ಜಾಕಿಯಾಗಿ ನಟಿಸಿದ್ದಾರೆ. ಈ ಚಿತ್ರಕ್ಕಾಗಿ ಅವರು ತಮ್ಮ ಮೊದಲ ಅತ್ಯುತ್ತಮ ನಟ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದರು.

**ಪುನೀತ್‌ರವರ ಇತರೆ ಚಲನಚಿತ್ರಗಳು**

ಪುನೀತ್ 2008 ರಲ್ಲಿ ಎರಡು ಚಲನಚಿತ್ರಗಳನ್ನು ಬಿಡುಗಡೆ ಮಾಡಿದರು: ಡಿ. ರಾಜೇಂದ್ರ ಬಾಬು ಅವರ ಬಿಂದಾಸ್ ಮತ್ತು ಪ್ರಕಾಶ್ ಅವರ ವಂಶಿ. 2009ರಲ್ಲಿ ಬಿಡುಗಡೆ ಆದ ಮೊದಲ ಚಿತ್ರ ರಾಜ್ – ದಿ ಶೋಮ್ಯಾನ್ (ನಿರ್ದೇಶನ ಪ್ರೇಮ್) ಟೀಕೆಗೆ ಒಳಗಾಗಿದ್ದರೂ ಪುನೀತ್ ಅವರ ಅಭಿನಯವನ್ನು ಪ್ರಶಂಸಿಸಲಾಯಿತು. ಪ್ರಿಯಾಮಣಿ ಜೊತೆಗಿನ ಅವರ ಇನ್ನೊಂದು ಚಿತ್ರ ರಾಮ್ ತೆಲುಗು ಹಿಟ್ ರೆಡಿ ಚಿತ್ರದ ರಿಮೇಕ್ ಆಗಿತ್ತು.

ಪುನೀತ್ 2010ರಲ್ಲಿ ಒಂದರ ಹಿಂದೊಂದು ಹಿಟ್‌ಗಳೊಂದಿಗೆ ಜನಮನಕ್ಕೆ ಮರಳಿದರು. ಮೊದಲನೆ ಚಿತ್ರ ಜಾಕೋಬ್ ವರ್ಗೀಸ್ ಅವರ ರಾಜಕೀಯ ಥ್ರಿಲ್ಲರ್ ಪೃಥ್ವಿ, ಇದರಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಬಳ್ಳಾರಿ ಜಿಲ್ಲೆಯ ಅಧಿಕಾರಿಯಾಗಿ ನಟಿಸಿದ್ದಾರೆ. ಅವರ ಮುಂದಿನ ಬಿಡುಗಡೆಯು ದುನಿಯಾ ಸೂರಿ ನಿರ್ದೇಶಿಸಿದ ಸಾಹಸ ಚಿತ್ರ ಜಾಕಿ, ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಯಿತು. 2011 ರಲ್ಲಿ ಪುನೀತ್ ಅವರು ಕೆ. ಮಾದೇಶ್ ಅವರ ಹುಡುಗರು ತಮಿಳಿನಲ್ಲಿ ನಾಡೋಡಿಗಳು ನ ರಿಮೇಕ್ ನಲ್ಲಿ ನಟಿಸಿದರು. ಅವರ ಅಭಿನಯಕ್ಕಾಗಿ ಅವರು ತಮ್ಮ ಎರಡನೇ ಫಿಲ್ಮ್‌ಫೇರ್ ಮತ್ತು ಮೊದಲ ಸೈಮಾ (ಎಸ್,ಐ,ಐ,ಎಮ್, ಎ) ಅತ್ಯುತ್ತಮ ನಟ ಪ್ರಶಸ್ತಿಗಳನ್ನು ಪಡೆದರು. ಪುನೀತ್ ಅವರ ಮುಂದಿನ ಚಿತ್ರ ಯೋಗರಾಜ್ ಭಟ್ ಅವರ ಪರಮಾತ್ಮ. ಪುನೀತ್ ಅವರ ಪಾತ್ರವು ಈ ಚಿತ್ರದಲ್ಲಿ ಪ್ರೀತಿಯನ್ನು ಹುಡುಕುತ್ತದೆ.

ಅವರು ಮತ್ತೆ 2012 ರಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಿಸಿದ ಆಕ್ಷನ್ ಚಿತ್ರ ಅಣ್ಣಾ ಬಾಂಡ್‌ನಲ್ಲಿ ಸೂರಿ ಅವರೊಂದಿಗೆ ಕೆಲಸ ಮಾಡಿದರು. ಅವರ ಅಭಿನಯಕ್ಕಾಗಿ ಅವರು ಸುವರ್ಣ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದರು ಮತ್ತು ಐಫಾ (ಐ,ಐ,ಎಫ್,ಎ) ಪ್ರಶಸ್ತಿಗೆ ನಾಮನಿರ್ದೇಶನಗೊಂಡರು. ಪುನೀತ್ ಅವರ ಮುಂದಿನ ಚಿತ್ರ ಸಮುತಿರಕನಿ ನಿರ್ದೇಶನದ ಯಾರೇ ಕೂಗಾಡಲಿ ಇದು ತಮಿಳಿನ ಪೊರಾಲಿಯ ರಿಮೇಕ್.

2014 ರಲ್ಲಿ ಪುನೀತ್ ಎರಿಕಾ ಫೆರ್ನಾಂಡಿಸ್ ಅವರೊಂದಿಗೆ ಜಯಂತ್ ಸಿ. ಪರಂಜಿ ಅವರ ನಿನ್ನಿಂದಲೇ ಚಿತ್ರದಲ್ಲಿ ನಟಿಸಿದರು. ಅವರು ಈ ಚಿತ್ರದಲ್ಲಿ ನ್ಯೂಯಾರ್ಕ್ ಮೂಲದ ನ್ಯೂಯಾರ್ಕ್ ಸಾಹಸ ಉತ್ಸಾಹಿಯಾಗಿ ಅವರ ಅಭಿನಯವು ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟಿತ್ತು. ಚಿತ್ರವು ಗಲ್ಲಾಪೆಟ್ಟಿಗೆಯಲ್ಲಿ ವಿಫಲವಾಯಿತು. ಪುನೀತ್ ಅವರ ಮುಂದಿನ ಚಿತ್ರ ಕೆ. ಮಾದೇಶ್ ಅವರ ಪವರ್ ಇದು ತೆಲುಗಿನ ದೂಕುಡು ಚಿತ್ರದ ರಿಮೇಕ್ ಆಗಿದೆ.

ಈ ಚಿತ್ರದಲ್ಲಿ ಅವರು ಮೊದಲ ಬಾರಿಗೆ ತ್ರಿಶಾ ಜೊತೆ ಕಾಣಿಸಿಕೊಂಡಿದ್ದರು. ಅವರು ಈ ಚಿತ್ರದಲ್ಲಿ ಕಠಿಣ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದರು. ಈ ಚಿತ್ರ ಆರು ದಿನಗಳಲ್ಲಿ ದಾಖಲೆಯ ₹22 ಕೋಟಿ (₹220 ಮಿಲಿಯನ್) ಗಳಿಸಿ ಬಾಕ್ಸ್ ಆಫೀಸ್ ಹಿಟ್ ಆಯಿತು. 2015 ರಲ್ಲಿ, ಅವರು ಬಿ. ಎಮ್. ಗಿರಿರಾಜ್ ಅವರ ಮೈತ್ರಿ ಚಿತ್ರದಲ್ಲಿ ಪುನೀತ್ ನಟ ಮತ್ತು ಕನ್ನಡದ ಕೋಟ್ಯಧಿಪತಿಯ ನಿರೂಪಕರಾಗಿ ನಟಿಸಿದ್ದರು ಇದರಲ್ಲಿ ಮೋಹನ್ ಲಾಲ್ ಮತ್ತು ಭಾವನಾ ಕೂಡ ನಟಿಸಿದ್ದಾರೆ. ಆ ವರ್ಷ ಬಿಡುಗಡೆ ಆದ ಇನ್ನೊಂದು ಚಿತ್ರ ಅದಾ ಶರ್ಮಾ ಮತ್ತು ಅಂಜಲಿ ಜೊತೆ ನಟಿಸಿರುವ ಪವನ್ ಒಡೆಯರ್ ಅವರ ಸಾಹಸ ಚಿತ್ರ ರಣ ವಿಕ್ರಮ ಕೂಡ ಬಾಕ್ಸ್ ಆಫೀಸ್ ಹಿಟ್ ಆಗಿ ಮತ್ತೆ ಫಿಲಂ ಫೇರ್ ಸೈಮಾ ಪ್ರಶಸ್ತಿಗಳನ್ನು ಮುಡಿಗೇರಿಸಿತು.

ಮಾರ್ಚ್ 2016 ರಲ್ಲಿ ಪುನೀತ್ ಎಂ. ಸರವಣನ್ ಅವರ ಚಕ್ರವ್ಯೂಹ ಮತ್ತು ದುನಿಯಾ ಸೂರಿ ಅವರ ದೊಡ್ಮನೆ ಹುಡ್ಗ ಚಿತ್ರಗಳಿಗೆ ಕೆಲಸ ಮಾಡಿದರು. 2017 ರಲ್ಲಿ ಅವರು ಸಂತೋಷ್ ಆನಂದ್ ರಾಮ್ ಅವರ ರಾಜಕುಮಾರ ಚಿತ್ರದಲ್ಲಿ ಕಾಣಿಸಿಕೊಂಡರು ಇದು ಬಾಕ್ಸ್ ಆಫೀಸ್‌ನಲ್ಲಿ ಎಲ್ಲಾ ದಾಖಲೆಗಳನ್ನು ಮುರಿದು ಮುಂಗಾರು ಮಳೆಯ ಹಿಂದಿನ ದಾಖಲೆಯನ್ನು ಹಿಂದಿಕ್ಕಿ ಸಾರ್ವಕಾಲಿಕ ಅತಿ ಹೆಚ್ಚು ಗಳಿಕೆ ಮಾಡಿದ ಕನ್ನಡ ಭಾಷೆಯ ಚಲನಚಿತ್ರವಾಯಿತು. ಹರ್ಷರವರ ಅಂಜನಿ ಪುತ್ರದಲ್ಲಿ ರಶ್ಮಿಕಾ ಮಂದಣ್ಣ ಪುನೀತ್ ಅವರ ಜೊತೆ ನಟಿಸಿದರು. ಇದು ತಮಿಳಿನ ಪೂಜಾಯ್ ಚಿತ್ರದ ರೀಮೇಕ್. ಅನುಪ್ ಭಂಡಾರಿ ನಿರ್ದೇಶನದ ರಾಜರಥ ಚಿತ್ರದಲ್ಲಿ ಪುನೀತ್ ರಾಜ್ ಕುಮಾರ್ ನಿರೂಪಕನ ಪಾತ್ರದಲ್ಲಿ ನಟಿಸಿದ್ದಾರೆ. 2019 ರಲ್ಲಿ ಅವರ ಚಲನಚಿತ್ರ ನಟಸಾರ್ವಭೌಮ ಬಿಡುಗಡೆಯಾಯಿತು ಮತ್ತು ವಾಣಿಜ್ಯವಾಗಿ ಯಶಸ್ಸನ್ನು ಸಹ ಗಳಿಸಿತು. ಇತ್ತೀಚಿನ ಯುವರತ್ನ ಮತ್ತು ಜೇಮ್ಸ್ ಕೂಡ ಭರ್ಜರಿ ಗಳಿಕೆ ಮಾಡಿದವು.

**ಪುನೀತ್ ರವರ ಇತರೆ ಕೆಲಸಗಳು**

ಮೈಸೂರಿನ ಶಕ್ತಿಧಾಮ ಆಶ್ರಮದಲ್ಲಿ ಪುನೀತ್ ತನ್ನ ತಾಯಿಯೊಂದಿಗೆ ಪರೋಪಕಾರದಲ್ಲಿ ತೊಡಗಿಸಿಕೊಂಡಿದ್ದರು ಮತ್ತು ಬೆಂಗಳೂರು ರಾಯಲ್ಸ್, ಪ್ರೀಮಿಯರ್ ಫುಟ್‌ಬಾಲ್ ತಂಡವನ್ನು ಹೊಂದಿದ್ದರು.

**ಹಿನ್ನೆಲೆ ಗಾಯಕನಾಗಿ ಪುನೀತ್**

ಪುನೀತ್ ತನ್ನ ತಂದೆಯಂತೆಯೇ ವೃತ್ತಿಪರ ಗಾಯನದಲ್ಲಿ ಉತ್ತಮ ಸಾಧನೆ ಮಾಡಿದ ಕೆಲವೇ ಕೆಲವು ನಟರಲ್ಲಿ ಒಬ್ಬರು. ಅವರು ಅಪ್ಪುವಿನಲ್ಲಿ ಒಬ್ಬರೇ ಹಾಡಿದರು ಮತ್ತು ವಂಶಿ ಚಿತ್ರದಲ್ಲಿ ಜೊತೆ ಜೊತೆಯಲ್ಲಿ ಗೀತೆಯನ್ನು ಹಾಡಿದರು. ಅವರು ಜಾಕಿಯಲ್ಲಿ ವೇಗದ ಹಾಡನ್ನು ಹಾಡಿದರು ಮತ್ತು ಅವರ ಸಹೋದರ ಶಿವರಾಜ್‌ಕುಮಾರ್ (ನಟ) ಅವರ ಲವ ಕುಶ ಮತ್ತು ಮೈಲಾರಿ ಚಿತ್ರಗಳಲ್ಲಿ ಹಾಡಿದರು. ಬಿ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿರುವ ಅಕಿರಾ ಚಿತ್ರಕ್ಕಾಗಿ ಪುನೀತ್ ರಾಜ್ ಕುಮಾರ್ ಅವರು ಕಣ್ಣ ಸನ್ನೆ ಇಂದಲೇನೆ ಹಾಡನ್ನು ಹಾಡಿದ್ದಾರೆ. ಅವರ ಹೋಮ್–ಪ್ರೊಡಕ್ಷನ್ಸ್ ಹೊರತುಪಡಿಸಿ ಇತರ ಹಾಡುಗಳಿಗೆ ಅವರ ಸಂಭಾವನೆ ಸೇವಾ ಕಾರ್ಯಗಳಿಗೆ ಹೋಗುತ್ತದೆ ಎಂದು ಅವರು ಬಹಿರಂಗಪಡಿಸಿದ್ದಾರೆ.

**ಕಿರುತೆರೆಯಲ್ಲಿ ಪುನೀತ್**

2012 ರಲ್ಲಿ ಪುನೀತ್ ಕನ್ನಡದ ಕೋಟ್ಯಾಧಿಪತಿಯ ಮೊದಲ ಸೀಸನ್ ಅನ್ನು ಆಯೋಜಿಸಿದರು. ಇದು ಬ್ರಿಟಿಷ್ ಶೋ ಹೂ ವಾಂಟ್ಸ್ ಟು ಬಿ ಎ ಮಿಲಿಯನೇರ್? ನ ಕನ್ನಡ ಆವೃತ್ತಿ. ಇದರ ಮೊದಲ ಸೀಸನ್ ಯಶಸ್ವಿಯಾಯಿತು ಮತ್ತು ಎರಡನೇ ಸೀಸನ್ ಗೆ ನಾಂದಿ ಹಾಡಿತು. ಸುವರ್ಣ ವಾಹಿನಿಯು ಉದಯ ಟಿವಿಯನ್ನು 19 ವರ್ಷಗಳಲ್ಲಿ ಮೊದಲ ಬಾರಿಗೆ ಮೊದಲ ಸ್ಥಾನದಿಂದ ಕೆಳಗಿಳಿಸಲು ಎರಡನೇ ಸೀಸನ್‌ನ

ಯಶಸ್ಸನ್ನು ಪ್ರಮುಖ ಕಾರಣವಾಗಿತ್ತು ಎಂದು ಹೇಳಲಾಗುತ್ತದೆ. ಅವರು ರಮೇಶ್ ಅರವಿಂದ್ ಬದಲಿಗೆ ನಾಲ್ಕನೇ ಸೀಸನ್ ಅನ್ನು ಮತ್ತೊಮ್ಮೆ ಆಯೋಜಿಸಿದರು. ಅವರು ಕಲರ್ಸ್ ಕನ್ನಡದ ರಿಯಾಲಿಟಿ ಶೋ ಫ್ಯಾಮಿಲಿ ಪವರ್‌ನ ನಿರೂಪಕ ಸಹ ಆಗಿದ್ದರು. ಉದಯ ಟಿವಿಯಲ್ಲಿ ನೇತ್ರಾವತಿ ಧಾರಾವಾಹಿಯನ್ನು ನಿರ್ಮಿಸುತ್ತಿದ್ದರು

**ಜಾಹಿರಾತುಗಳಲ್ಲಿ ಪುನೀತ್**

ಪುನೀತ್ ಅವರು ಕರ್ನಾಟಕ ಹಾಲು ಒಕ್ಕೂಟದ ನಂದಿನಿ ಹಾಲಿನ ಉತ್ಪನ್ನಗಳ ಬ್ರಾಂಡ್ ರಾಯಭಾರಿ ಆಗಿದ್ದರು. ಎಲ್ ಇಡಿ ಬಲ್ಬ್ ಯೋಜನೆ, 7 ಅಪ್ (ಪೆಪ್ಸಿಕೋ), ಎಫ್–ಸ್ಕ್ವೇರ್, ಡಿಕ್ಸಿ ಸ್ಕಾಟ್, ಮಲಬಾರ್ ಗೋಲ್ಡ್, ಗೋಲ್ಡ್ ವಿನ್ನರ್, ಜಿಯೋಕ್ಸ್ ಮೊಬೈಲ್, ಪೋಥಿಸ್, ಫ್ಲಿಪ್‌ಕಾರ್ಟ್ ಮತ್ತು ಮಣಪ್ಪುರಂ, ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಬ್ರಾಂಡ್ ರಾಯಭಾರಿ ಆಗಿದ್ದರು.

**ಪಿ ಅರ್ ಕೆ ಆಡಿಯೋ ಸ್ಥಾಪನೆ**

ಪುನೀತ್ ಸಂಗೀತ ಲೇಬಲ್ ಪಿ. ಆರ್ .ಕೆ ಆಡಿಯೊದ ಸ್ಥಾಪಕರು ಮತ್ತು ಮಾಲೀಕರಾಗಿದ್ದರು. ಪಿ ಅರ್ ಕೆ ಆಡಿಯೋ ಯೂ ಟ್ಯೂಬ್ ನಲ್ಲಿ ಅಕ್ಟೋಬರ್ 2021ರಂದು ತನ್ನ 1.13 ಮಿಲಿಯನ್ ಚಂದಾದಾರರನ್ನು ಹೊಂದಿದೆ.

**ನಿಧನ ಮತ್ತು ನಂತರದ ಪರಿಣಾಮ**

ಹಠಾತ್ತಾಗಿ ಕಾಣಿಸಿಕೊಂಡ ಎದೆನೋವು ಮತ್ತು ತೀವ್ರ ಹೃದಯಾಘಾತದಿಂದಾಗಿ 29 ಅಕ್ಟೋಬರ್ 2021 ರಂದು ಬೆಂಗಳೂರಿನ ವಿಕ್ರಮ ಆಸ್ಪತ್ರೆಯಲ್ಲಿ ನಿಧನರಾದರು. ಡಾ. ರಾಜ್‌ಕುಮಾರ್ ಅವರ ಇಡೀ ಕುಟುಂಬ ನೇತ್ರದಾನ ಮಾಡುವುದಕ್ಕೆ ಹಲವು ವರ್ಷಗಳ ಹಿಂದೆಯೇ ಸಹಿ ಮಾಡಿದ್ದರು. ಅಣ್ಣಾವ್ರು ಕೂಡ ನೇತ್ರದಾನ ಮಾಡಿ ಇಬ್ಬರಿಗೆ ಬೆಳಕಾಗಿ ಹೋದರು. ಹಾಗೆಯೇ ಪುನೀತ್ ಅವರು ಕೂಡ ನೇತ್ರದಾನ ಮಾಡಿ ನಾಲ್ವರಿಗೆ ಬೆಳಕಾಗಿದ್ದಾರೆ. ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಇಟ್ಟು 31 ಅಕ್ಟೋಬರ್ ಭಾನುವಾರದಂದು ಕಂಠೀರವ ಸ್ಟುಡಿಯೋದ ಡಾ. ರಾಜ್ ಸ್ಮಾರಕದ ಆವರಣದಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. ಕುಟುಂಬದವರು ಮಾತ್ರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಕಂಠೀರವ ಸ್ಟುಡಿಯೋ ಹೊರಭಾಗದ ರಸ್ತೆಗಳಲ್ಲಿ 20 ಲಕ್ಷಕ್ಕೂ ಅಧಿಕ ಅಭಿಮಾನಿಗಳು ಕಣ್ಣೀರಿಡುತ್ತಾ ನೆಚ್ಚಿನ ನಟನಿಗೆ ಕಂಬನಿಯ ವಿದಾಯ ಹೇಳಿದರು.

**ದಿ. ಪುನೀತ್ ರಾಜ್ ಕುಮಾರ್ ರವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ**

ಸಹಸ್ರಾರು ಅಭಿಮಾನಿಗಳ ಸಮ್ಮುಖದಲ್ಲಿ, ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ, ಗಣ್ಯರ ಸಮ್ಮುಖದಲ್ಲಿ ದಿ. ಪುನೀತ್ ರಾಜ್ ಕುಮಾರ್ ಅವರಿಗೆ 2022, ನವೆಂಬರ್ 1ರಂದು ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಳೆಯನ್ನೂ ಲೆಕ್ಕಿಸದೇ ಸಹಸ್ರಾರು ಮಂದಿ ಅಭಿಮಾನಿಗಳು ತಮ್ಮ ನೆಚ್ಚಿನ ನಟನಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಿದ್ದನ್ನು ಕಣ್ತುಂಬಿಕೊಂಡರು. ಕಾರ್ಯಕ್ರಮದಲ್ಲಿ ಡಾ. ಸುಧಾಮೂರ್ತಿ ಪುನೀತ್ ರಾಜ್ ಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜ್ ಕುಮಾರ್ ಅವರಿಗೆ ಪ್ರಶಸ್ತಿ ನೀಡುವ ಮೂಲಕ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಮುಖ್ಯ ಅಥಿತಿಯಾಗಿ ಆಗಮಿಸಿ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ನಟ ರಜನಿಕಾಂತ್, ಅಪ್ಪು ಸಾಧಾರಣ ವ್ಯಕ್ತಿಯಲ್ಲ, ಆತ ಅಪಾರವಾದದ್ದನ್ನು ಸಾಧಿಸಿದ್ದಾರೆ. ಕಲಿಯುಗಕ್ಕೆ ಪುನೀತ್ ದೇವರ ಮಗು, ನಚಿಕೆತ, ಮಾರ್ಕಾಂಡೇಯರ ಸಾಲಿಗೆ ಸೇರುವವರು ಅವರು. ಎನ್.ಟಿ.ಅರ್, ಎಂ.ಜಿ.ಆರ್, ಶಿವಾಜಿಗಣೇಶನ್, ರಾಜ್ ಕುಮಾರ್ ಅವರು 50 ವರ್ಷದಲ್ಲಿ ಸಾಧಿಸಿದ್ದನ್ನು ಅಪ್ಪು 20 ವರ್ಷಗಳಲ್ಲಿ ಸಾಧಿಸಿದ್ದರು. ಅಪ್ಪು ಯಾವಾಗಲೂ ನಮ್ಮೊಂದಿಗೇ ಇರ್ತಾರೆ. ಕೇವಲ ನಟನೆಯಿಂದಷ್ಟೇ ಜನರನ್ನು ಗೆಲ್ಲಲು ಸಾಧ್ಯವಿಲ್ಲ. ಆದರ್ಶಗಳ ಮೂಲಕ ಗೆಲ್ಲಬಹುದು ಅದು ನಮ್ಮ ಅಪ್ಪು ಮಾಡಿದ್ದಾರೆ ಎಂದು ಬಣ್ಣಿಸಿದ್ದಾರೆ. ಇದೇ ವೇಳೆ 1979 ರಲ್ಲಿ ಶಬರಿ ಮಲೆ ಯಾತ್ರೆ ವೇಳೆ ತಾವು ಪುನೀತ್ ರಾಜ್‌ಕುಮಾರ್ ಅವರನ್ನು ಮೊದಲ ಬಾರಿ ನೋಡಿದ್ದನ್ನು ರಜನಿಕಾಂತ್ ಸ್ಮರಿಸಿಕೊಂಡರು, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜ್ಯೂ. ಎನ್ ಟಿಆರ್, ಒಬ್ಬ ವ್ಯಕ್ತಿಗೆ ಉಪನಾಮ ಎಂಬುದು ಪರಂಪರೆಯಿಂದ ಬರುತ್ತದೆ ಆದರೆ ವ್ಯಕ್ತಿತ್ವ ಸ್ವಂತ ಸಂಪಾದನೆಯಾಗಿರುತ್ತದೆ. ಸ್ವಂತ ವ್ಯಕ್ತಿತ್ವದಿಂದ ನಗುವಿನಿಂದಲೇ ಒಂದು ರಾಜ್ಯ ಗೆದ್ದ ರಾಜ ಪುನೀತ್ ರಾಜ್ ಕುಮಾರ್, ಅವರು ಎಲ್ಲಕ್ಕೂ ಮಿಗಿಲಾಗಿ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದರು. ಪುನೀತ್ ನಗುವಿನ ಒಡೆಯ, ಅವರ ವ್ಯಕ್ತಿತ್ವದಿಂದ ಅಭಿಮಾನಿಗಳನ್ನು ಪಡೆದಿದ್ದರು, ಕರ್ನಾಟಕ ರತ್ನದ ಅರ್ಥವೇ ಪುನೀತ್ ರಾಜ್ ಕುಮಾರ್ ಅವರಾಗಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೆಮ್ಮೆಯ ಗೆಳೆಯನಾಗಿ ನಿಂತಿದ್ದೇನೆ, ಎಂದು ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದದರು.

ಇಂತಹ ಕೋಟ್ಯಾನು ಕೋಟಿ ಅಭಿಮಾನಿಗಳಿಗೆ ಪ್ರೇರಣೆಯಾಗಿದ್ದ ಪುನೀತ್ ರಾಜ್‌ಕುಮಾರ್‌ರವರು ತಮ್ಮ ನಟನೆ, ಸಮಾಜ ಸೇವೆ ಹಾಗೂ ಜನಾನುರಾಗದ ಮೂಲಕ ನಮ್ಮೆಲ್ಲರ ಆದರ್ಶಪ್ರಾಯರಾಗಿ ಕಣ್ಮನ ಸೆಳೆಯುತ್ತಾರೆ.

***

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು - ನಡೆದ ಸ್ಥಳ ಮತ್ತು ಅಧ್ಯಕ್ಷರ ಪಟ್ಟಿ

– ಮೌಲಾಲಿ ಟಿ. ಕೆ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

| **ಕ್ರ.ಸಂ –** | **ನಡೆದ ವರ್ಷ –** | **ಸ್ಥಳ –** | **ಅಧ್ಯಕ್ಷತೆ ವಹಿಸಿದವರು** |
|---|---|---|---|
| 1. | 1915 – | ಬೆಂಗಳೂರು – | ಎಚ್. ವಿ. ನಂಜುಂಡಯ್ಯ |
| 2. | 1916 – | ಬೆಂಗಳೂರು – | ಎಚ್. ವಿ. ನಂಜುಂಡಯ್ಯ |
| 3. | 1917 – | ಮೈಸೂರು – | ಎಚ್. ವಿ. ನಂಜುಂಡಯ್ಯ |
| 4. | 1918 – | ಧಾರವಾಡ – | ಆರ್. ನರಸಿಂಹಾಚಾರ್ |
| 5. | 1919 – | ಹಾಸನ – | ಕರ್ಪೂರ ಶ್ರೀನಿವಾಸರಾವ್ |
| 6. | 1920 – | ಹೊಸಪೇಟೆ – | ರೊದ್ದ ಶ್ರೀನಿವಾಸರಾವ್ |
| 7. | 1921 – | ಚಿಕ್ಕಮಗಳೂರು – | ಕೆ. ಪಿ. ಪುಟ್ಟಣ್ಣ ಶೆಟ್ಟಿ |
| 8. | 1922 – | ದಾವಣಗೆರೆ – | ಎಂ. ವೆಂಕಟಕೃಷ್ಣಯ್ಯ |
| 9. | 1923 – | ಬಿಜಾಪುರ – | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ |

| | | | |
|---|---|---|---|
| 10. | 1924 – | ಕೋಲಾರ – | ಹೊಸಕೋಟೆ ಕೃಷ್ಣಶಾಸ್ತ್ರಿ |
| 11. | 1925 – | ಬೆಳಗಾವಿ – | ಬೆನಗಲ್ ರಾಮರಾವ್ |
| 12. | 1926 – | ಬಳ್ಳಾರಿ – | ಫ. ಗು. ಹಳಕಟ್ಟಿ |
| 13. | 1927 – | ಮಂಗಳೂರು – | ಆರ್. ತಾತಾಚಾರ್ಯ |
| 14. | 1928 – | ಕಲಬುರ್ಗಿ – | ಬಿ ಎಂ ಶ್ರೀ |
| 15. | 1929 – | ಬೆಳಗಾವಿ – | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| 16. | 1930 – | ಮೈಸೂರು – | ಆಲೂರು ವೆಂಕಟರಾಯರು |
| 17. | 1931 – | ಕಾರವಾರ – | ಮುಳಿಯ ತಿಮ್ಮಪ್ಪಯ್ಯ |
| 18. | 1932 – | ಮಡಿಕೇರಿ – | ಡಿ ವಿ ಜಿ |
| 19. | 1933 – | ಹುಬ್ಬಳ್ಳಿ – | ವೈ. ನಾಗೇಶ ಶಾಸ್ತ್ರಿ |
| 20. | 1934 – | ರಾಯಚೂರು – | ಪಂಜೆ ಮಂಗೇಶರಾಯರು |
| 21. | 1935 – | ಮುಂಬಯಿ – | ಎನ್.ಎಸ್.ಸುಬ್ಬರಾವ್ |
| 22. | 1937 – | ಜಮಖಂಡಿ – | ಬೆಳ್ಳಾವೆ ವೆಂಕಟನಾರಣಪ್ಪ |
| 23. | 1938 – | ಬಳ್ಳಾರಿ – | ರಂಗನಾಥ ದಿವಾಕರ |
| 24. | 1939 – | ಬೆಳಗಾವಿ – | ಮುದವೀಡು ಕೃಷ್ಣರಾಯರು |
| 25. | 1940 – | ಧಾರವಾಡ – | ವೈ. ಚಂದ್ರಶೇಖರ ಶಾಸ್ತ್ರಿ |
| 26. | 1941 – | ಹೈದರಾಬಾದ್ – | ಎ. ಆರ್. ಕೃಷ್ಣಶಾಸ್ತ್ರಿ |
| 27. | 1943 – | ಶಿವಮೊಗ್ಗ – | ದ. ರಾ. ಬೇಂದ್ರೆ |
| 28. | 1944 – | ರಬಕವಿ – | ಎಸ್.ಎಸ್.ಬಸವನಾಳ |
| 29. | 1945 – | ಮದರಾಸು – | ಟಿ ಪಿ ಕೈಲಾಸಂ |
| 30. | 1947 – | ಹರಪನಹಳ್ಳಿ – | ಸಿ. ಕೆ. ವೆಂಕಟರಾಮಯ್ಯ |
| 31. | 1948 – | ಕಾಸರಗೋಡು – | ತಿ. ತಾ. ಶರ್ಮ |
| 32. | 1949 – | ಕಲಬುರ್ಗಿ – | ಉತ್ತಂಗಿ ಚನ್ನಪ್ಪ |
| 33. | 1950 – | ಸೊಲ್ಲಾಪುರ – | ಎಮ್. ಆರ್. ಶ್ರೀನಿವಾಸಮೂರ್ತಿ |
| 34. | 1951 – | ಮುಂಬಯಿ – | ಗೋವಿಂದ ಪೈ |
| 35. | 1952 – | ಬೇಲೂರು – | ಎಸ್. ಸಿ. ನಂದೀಮಠ |
| 36. | 1954 – | ಕುಮಟಾ – | ವಿ. ಸೀತಾರಾಮಯ್ಯ |
| 37. | 1955 – | ಮೈಸೂರು – | ಶಿವರಾಮ ಕಾರಂತ |
| 38. | 1956 – | ರಾಯಚೂರು – | ಶ್ರೀರಂಗ |

| | | | |
|---|---|---|---|
| 39. | 1957 – | ಧಾರವಾಡ – | ಕುವೆಂಪು |
| 40. | 1958 – | ಬಳ್ಳಾರಿ – | ವಿ. ಕೆ. ಗೋಕಾಕ |
| 41. | 1959 – | ಬೀದರ – | ಡಿ. ಎಲ್. ನರಸಿಂಹಾಚಾರ್ |
| 42. | 1960 – | ಮಣಿಪಾಲ – | ಅ. ನ. ಕೃಷ್ಣರಾಯ |
| 43. | 1961 – | ಗದಗ – | ಕೆ. ಜಿ. ಕುಂದಣಗಾರ |
| 44. | 1963 – | ಸಿದ್ದಗಂಗಾ – | ರಂ. ಶ್ರೀ. ಮುಗಳಿ |
| 45. | 1965 – | ಕಾರವಾರ – | ಕಡೆಂಗೋಡ್ಲು ಶಂಕರಭಟ್ಟ |
| 46. | 1967 – | ಶ್ರವಣಬೆಳಗೊಳ – | ಆ. ನೇ. ಉಪಾಧ್ಯೆ |
| 47. | 1970 – | ಬೆಂಗಳೂರು – | ದೇ. ಜವರೆಗೌಡ |
| 48. | 1974 – | ಮಂಡ್ಯ – | ಜಯದೇವಿತಾಯಿ ಲಿಗಾಡೆ |
| 49. | 1976 – | ಶಿವಮೊಗ್ಗ – | ಎಸ್. ವಿ. ರಂಗಣ್ಣ |
| 50. | 1978 – | ದೆಹಲಿ – | ಜಿ. ಪಿ. ರಾಜರತ್ನಂ |
| 51. | 1979 – | ಧರ್ಮಸ್ಥಳ – | ಗೋಪಾಲಕೃಷ್ಣ ಅಡಿಗ |
| 52. | 1980 – | ಬೆಳಗಾವಿ – | ಬಸವರಾಜ ಕಟ್ಟೀಮನಿ |
| 53. | 1981 – | ಚಿಕ್ಕಮಗಳೂರು – | ಪು. ತಿ. ನರಸಿಂಹಾಚಾರ್ |
| 54. | 1981 – | ಮಡಿಕೇರಿ – | ಶಂ. ಬಾ. ಜೋಶಿ |
| 55. | 1982 – | ಶಿರಸಿ – | ಗೊರೂರು ರಾಮಸ್ವಾಮಿ ಐಯಂಗಾರ್ |
| 56. | 1984 – | ಕೈವಾರ – | ಎ. ಎನ್. ಮೂರ್ತಿರಾವ್ |
| 57. | 1985 – | ಬೀದರ್ – | ಹಾ. ಮಾ. ನಾಯಕ |
| 58. | 1987 – | ಕಲಬುರ್ಗಿ – | ಸಿದ್ದಯ್ಯ ಪುರಾಣಿಕ |
| 59. | 1990 – | ಹುಬ್ಬಳ್ಳಿ – | ಆರ್. ಸಿ. ಹಿರೇಮಠ |
| 60. | 1991 – | ಮೈಸೂರು – | ಕೆ. ಎಸ್. ನರಸಿಂಹಸ್ವಾಮಿ |
| 61. | 1992 – | ದಾವಣಗೆರೆ – | ಜಿ. ಎಸ್. ಶಿವರುದ್ರಪ್ಪ |
| 62. | 1993 – | ಕೊಪ್ಪಳ – | ಸಿಂಪಿ ಲಿಂಗಣ್ಣ |
| 63. | 1994 – | ಮಂಡ್ಯ – | ಚದುರಂಗ |
| 64. | 1995 – | ಮುಧೋಳ – | ಎಚ್. ಎಲ್. ನಾಗೇಗೌಡ |
| 65. | 1996 – | ಹಾಸನ – | ಚನ್ನವೀರ ಕಣವಿ |
| 66. | 1997 – | ಮಂಗಳೂರು – | ಕಯ್ಯಾರ ಕಿಞ್ಞಣ್ಣ ರೈ |
| 67. | 1999 – | ಕನಕಪುರ – | ಎಸ್. ಎಲ್. ಭೈರಪ್ಪ |

| | | | |
|---|---|---|---|
| 68. | 2000 – | ಬಾಗಲಕೋಟೆ – | ಶಾಂತಾದೇವಿ ಮಾಳವಾಡ |
| 69. | 2002 – | ತುಮಕೂರು – | ಯು. ಆರ್. ಅನಂತಮೂರ್ತಿ |
| 70. | 2003 – | ಬೆಳಗಾಂ – | ಪಾಟೀಲ ಪುಟ್ಟಪ್ಪ |
| 71. | 2004– | ಮೂಡುಬಿದಿರೆ – | ಕಮಲಾ ಹಂಪನಾ |
| 72. | 2006 – | ಬೀದರ್ – | ಶಾಂತರಸ ಹೆಂಬೆರಳು |
| 73. | 2007 – | ಶಿವಮೊಗ್ಗ – | ನಿಸಾರ್ ಅಹಮ್ಮದ್ |
| 74. | 2008 – | ಉಡುಪಿ – | ಎಲ್. ಎಸ್. ಶೇಷಗಿರಿ ರಾವ್ |
| 75. | 2009 – | ಚಿತ್ರದುರ್ಗ – | ಎಲ್. ಬಸವರಾಜು |
| 76. | 2010 – | ಗದಗ – | ಡಾ. ಗೀತಾ ನಾಗಭೂಷಣ |
| 77. | 2011 – | ಬೆಂಗಳೂರು – | ಜಿ. ವೆಂಕಟಸುಬ್ಬಯ್ಯ |
| 78. | 2012 – | ಗಂಗಾವತಿ – | ಸಿ. ಪಿ ಕೃಷ್ಣಕುಮಾರ್ |
| 79. | 2013 – | ವಿಜಾಪುರ – | ಕೋ. ಚನ್ನಬಸಪ್ಪ |
| 80. | 2014 – | ಕೊಡಗು – | ನಾ ಡಿಸೋಜ |
| 81. | 2015 – | ಶ್ರವಣಬೆಳಗೊಳ – | ಡಾ. ಸಿದ್ದಲಿಂಗಯ್ಯ |
| 82. | 2016 – | ರಾಯಚೂರು – | ಬರಗೂರು ರಾಮಚಂದ್ರಪ್ಪ |
| 83. | 2017 – | ಮೈಸೂರು – | ಚಂದ್ರಶೇಖರ ಪಾಟೀಲ |
| 84. | 2019 – | ಧಾರವಾಡ – | ಚಂದ್ರಶೇಖರ ಕಂಬಾರ |
| 85. | 2020 – | ಕಲಬುರಗಿ – | ಎಚ್. ಎಸ್. ವೆಂಕಟೇಶಮೂರ್ತಿ |
| 86. | 2022 – | ಹಾವೇರಿ – | ದೊಡ್ಡ ರಂಗೇಗೌಡರು |

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ಪ್ರತಿಯಾಗಿ ಏನನ್ನೂ ಬಯಸಬೇಡಿ. ಆದರೆ ನೀವು ಹೆಚ್ಚು ಕೊಟ್ಟಷ್ಟೂ ನಿಮಗೆ ಹೆಚ್ಚು ಬರುತ್ತದೆ."

"ಮನಸ್ಸನ್ನು ಶಕ್ತಿಯುತವೂ, ಶಿಸ್ತುಬದ್ದವೂ ಆಗಿಸುವುದರಲ್ಲಿಯೇ ಜ್ಞಾನದ ಮೌಲ್ಯವಿರುವುದು."

"ಉನ್ನತ ಆಲೋಚನೆಗಳಿಂದ, ಅತ್ಯುನ್ನತ ಆದರ್ಶಗಳಿಂದ ನಿಮ್ಮ ಮಿದುಳನ್ನು ತುಂಬಿ; ಅವುಗಳನ್ನು ಹಗಲಿರುಳೂ ನಿಮ್ಮ ಮುಂದಿರಿಸಿಕೊಳ್ಳಿ. ಇದರಿಂದ ಮಹತಕಾರ್ಯ ಉದ್ಭವಿಸುತ್ತದೆ."

## ಮಹಿಳಾ ಸಬಲೀಕರಣಕ್ಕೆ ಸರ್ಕಾರ ಮತ್ತು ಸಮಾಜದ ಪಾತ್ರ

– ಪ್ರಿಯಾಂಕ ಬಿ ಎನ್., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

**"ಪಕ್ಷಿಗೆ ಹೇಗೆ ಒಂದೇ ರೆಕ್ಕೆಯಿಂದ ಹಾರುವುದು ಅಸಾಧ್ಯವಾಗಿರುತ್ತದೆಯೋ ಹಾಗೆ ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳಲಾರದೆ ಜಗತ್ತಿನ ಕಲ್ಯಾಣದ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿರುತ್ತದೆ"**. ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

ಪುರುಷ ಪ್ರಧಾನವಾದ ಈ ಸಮಾಜವು ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ ಮತ್ತು ಸ್ವಯಂ ಆಡಳಿತವನ್ನು ನಿರಾಕರಿಸುತ್ತಾ ಬಂದಿದೆ. ಈ ಲಿಂಗ ತಾರತಮ್ಯವು ಮಾನವೀಯ ಮುಖವನ್ನು ವಿಕಾರಗೊಳಿಸಿದೆ. ಈ ತಾರತಮ್ಯವು ಹೆಣ್ಣು ಮಗುವಿನ ಜನನಕ್ಕೆ ಮುಂಚೆ ಪ್ರಾರಂಭವಾಗಿ ಅದು ಅವಳ ಹೆಣ್ಣುತನದ ಜೀವನಗುಂಟ ಉಳಿದುಬಿಡುತ್ತದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಮತ್ತು ಮಹಿಳೆಯರಿಗೆ ಉನ್ನತ ಸ್ಥಾನ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಭಾರತದಲ್ಲಿ ಮಹಿಳೆಯರು ಒಟ್ಟು ಜನಸಂಖ್ಯೆಯ ಶೇಕಡಾ 50 ರಷ್ಟನ್ನು ಪ್ರತಿನಿಧಿಸುತ್ತಾರೆ. ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ ವೈಶಿಷ್ಟ್ಯಪೂರ್ಣವಾಗಿ ಇರುವಳು. ಸ್ನೇಹ, ಸಹನಶೀಲತೆ, ಮಮತೆ ಮುಂತಾದ ಸದ್ಗುಣಗಳ ಖನಿಯಾಗಿರುವ ಮನೆಯ ಸರ್ವತೋಮುಖ ಏಳಿಗೆಗಾಗಿ ಪರಿಶ್ರಮ ಪಡುತ್ತಾ ಆರ್ಥಿಕವಾಗಿ ಪುರುಷನ ಸಮಾನವಾಗಿ ದುಡಿಯುತ್ತಿದ್ದಾರೆ. ಈ ರೀತಿ ಮಹಿಳೆಯರ ಮಹತ್ವವನ್ನು ಅರಿತು ಏನೋ ನಮ್ಮ ಪೂರ್ವಜರು ಮಾತೃ ಸ್ಥಾನಕ್ಕೆ ಅತ್ಯಂತ ಗೌರವವನ್ನು ತೋರಿದ್ದಾರೆ. ನಮ್ಮ ರಾಷ್ಟ್ರೀಯತೆಯನ್ನು ಮಾತೆಗೆ ಹೋಲಿಸಿ ಭಾರತಮಾತೆ ಎಂದು ಕರೆಯಲಾಗುತ್ತದೆ ಭಾರತವು ಕೃಷಿ ಪ್ರಧಾನ ದೇಶವಾಗಿದ್ದುದರಿಂದ ಭೂಮಿಯೇ ಜೀವನಾಧಾರಕ್ಕೆ ಪ್ರಮುಖ ಮೂಲವಾಗಿದೆ. ಇದನ್ನು ಕೂಡ ಭೂತಾಯಿ ಎಂಬ ರೂಪದಲ್ಲಿ ಹೆಣ್ಣಿಗೆ ಹೋಲಿಸಲಾಗಿದೆ. ಮಹಿಳೆಗೆ ಇಷ್ಟೆಲ್ಲಾ ಸ್ಥಾನಮಾನ ಅಧಿಕಾರಗಳನ್ನು ಕೊಟ್ಟಿದ್ದಾಗಿಯೂ ಭಾರತದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯಲ್ಲಿ ನೋಡಿಕೊಳ್ಳಲಾಗುತ್ತಿದೆ. ಅಂತೆಯೇ "ಮಹಿಳೆ ಇಲ್ಲದ ಜೀವನವು ಅಪೂರ್ಣವಿದ್ದಾಗಲು ಕೂಡ ಮಹಿಳೆಯರನ್ನು ಜೀವನದ ಇನ್ನೊಂದು ಅರ್ಧ ಎಂದು ಯಾವಾಗಲೂ ಪರಿಗಣಿಸಿಲ್ಲ" ಎಂದು ಶ್ರೀ ಸಿಮೋನ್ ಡಿ. ವಿಯರ್ ಹೇಳುತ್ತಾರೆ.

ಇತಿಹಾಸವನ್ನು ಅವಲೋಕಿಸಿದಾಗ ಮಹಿಳೆಯರ ಸಬಲೀಕರಣಕ್ಕೆ ಸ್ವಾತಂತ್ರ್ಯಕ್ಕಾಗಿ ನಡೆಸಿದ ಅನೇಕ ಮಹನೀಯರ ಬಗ್ಗೆ ತಿಳಿದು ಬರುತ್ತದೆ. ಅವರಲ್ಲಿ ಪ್ರಮುಖರಾದವರೆಂದರೆ ಬುದ್ಧ, ಆದಿಶಂಕರಾಚಾರ್ಯ, ಬಸವಣ್ಣ, ರಾಜಾರಾಮ್ ಮೋಹನ್ ರಾಯ್, ಈಶ್ವರ್ ಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು ಮುಂತಾದವರು. ಇವರಲ್ಲದೇ ಬ್ರಿಟಿಷ್ ಸರಕಾರವು ಕೂಡ ಮಹಿಳೆಯರ ಸಶಕ್ತಿಕರಣಕ್ಕೆ ಕೆಲವೊಂದು ಕಾನೂನುಗಳನ್ನು ಜಾರಿಗೆ ತಂದಿತು. ಆದರೆ ಮಹಿಳೆಯರನ್ನು ಸಬಲೀಕರಣಗೊಳಿಸಬೇಕು ಎಂಬ ಇಚ್ಚೆ ಬಂದಿದ್ದ ಜನರಿಂದ ಮಾತ್ರ ಮಹಿಳೆಯರ ಸಶಕ್ತಿಕರಣ ಮಾಡಲು ಸಾಧ್ಯವಾಗುವುದಿಲ್ಲ.

### ಇಂದಿನ ಸಮಾಜದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆ.

ಮದುವೆಯೂ ಒಂದು ವ್ಯಾಪಾರವಾಗಿಬಿಟ್ಟಿದೆ ಇದು ವರನಿಗೆ ಲಾಭದಾಯಕವಾದರೆ, ವಧುವಿನ ಕಡೆಯವರಿಗೆ ಖರ್ಚಿನದ್ದಾಗಿರುತ್ತದೆ. ವಧುವು ಅಪಾರ ಪ್ರಮಾಣದಲ್ಲಿ ವರದಕ್ಷಿಣೆ ಕೊಡಬೇಕಾಗುತ್ತದೆ. ವರದಕ್ಷಿಣೆಯ ಹೆಸರಿನಲ್ಲಿ ಸಾವಿರಾರು ಹೆಣ್ಣು ಮಕ್ಕಳನ್ನು ಹಿಂಸಿಸಲಾಗುತ್ತದೆ. ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಮಹಿಳಾ ಹಕ್ಕು ಆಯೋಗ (ಡಬ್ಲ್ಯೂ ಆರ್ ಸಿ.)ದ ವರದಿಯ ಪ್ರಕಾರ ಮಹಿಳೆಯರ ವಿರುದ್ಧ

ಅಪರಾಧಗಳು ಆತಂಕಕಾರಿಯಾಗಿ ಹೆಚ್ಚುತ್ತಿವೆ. ಅತ್ಯಾಚಾರ ಪ್ರಕರಣಗಳು ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪ್ರಾಪ್ತ ಬಾಲಕಿಯರ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಇನ್ನೂ ಅದೆಷ್ಟೋ ಪ್ರಕರಣಗಳು ಸಾಮಾಜಿಕ ಕಳಂಕದ ಹೆದರಿಕೆಯಿಂದಾಗಿ ವರದಿಯಾಗುವುದೇ ಇಲ್ಲ. ಇದಕ್ಕೆ ಬಲಿಯಾದ ಹೆಣ್ಣುಮಕ್ಕಳು ಬಹಳ ವೇದನೆ ಅನುಭವಿಸುತ್ತಾರೆ. ಇವರು ಕಾನೂನಿನ ಅಮಾನವೀಯ ಮತ್ತು ಅಸಭ್ಯ ವಿಚಾರಣೆಗೆ ಅವರ ನೈತಿಕ ಸ್ಥೈರ್ಯವನ್ನು ಕುಗ್ಗಿಸಿ ಬಿಡುತ್ತದೆ. ಆರ್ಥಿಕವಾಗಿ ಹಾಗೂ ಬೌದ್ಧಿಕವಾಗಿ ಉನ್ನತ ಮಟ್ಟದಲ್ಲಿರುವ ಮಹಿಳೆಯರು ಕೂಡ ಅಸಹ್ಯ ವರ್ತನೆಗಳಿಂದ ಹಾಗೂ ಲೈಂಗಿಕ ಶೋಷಣೆಯಿಂದ ಸುರಕ್ಷಿತವಾಗಿಲ್ಲ. ಬಲತ್ಕಾರಕ್ಕೆ ಒಳಗಾದ ಮಹಿಳೆಯ ಬಲತ್ಕಾರಕ್ಕೆ ಒಳಗಾದವಳು ಎಂಬ ಹಣೆಪಟ್ಟಿ ಹಚ್ಚಿಕೊಂಡು ವಿವಿಧ ರೀತಿಯ ಮಾನಸಿಕ ಮತ್ತು ದೈಹಿಕ ಯಾತನೆಗಳನ್ನು ಅನುಭವಿಸುತ್ತಾಳೆ. ಈ ಎಲ್ಲಾ ಶೋಷಣೆಗಳ ವಿರುದ್ಧ ಮಹಿಳೆ ದನಿಯೆತ್ತಬೇಕು ಪ್ರತಿಭಟನೆ ಮಾಡಿ ಹೋರಾಡಬೇಕು ಆರೋಪಿಗಳಿಗೆ ಶಿಕ್ಷೆಯಾಗುವಂತೆ ಕಾನೂನಿನ ಸಹಾಯ ಪಡೆಯಬೇಕು. ಬಾಲ್ಯವಿವಾಹ ಶಿಶುಹತ್ಯೆ ವರದಕ್ಷಿಣೆ ಸಾವುಗಳು ಹೀಗೆ ಹೆಣ್ಣುಮಕ್ಕಳ ಅಶ್ಲೀಲತೆಯ ಪ್ರದರ್ಶನ ಮತ್ತು ಅನೈತಿಕವಾಗಿ ಮಾರಾಟ ಮಾಡುವುದರ ಮೂಲಕ ಹೆಣ್ಣುಮಕ್ಕಳನ್ನು ವ್ಯಾಪಾರಿಕರಣಗೊಳಿಸಲಾಗುತ್ತಿದೆ ಆರ್ಥಿಕವಾಗಿ ಹಿಂದುಳಿದ ಜನಾಂಗದ ಅಪ್ರಾಪ್ತ ಬಾಲಕಿಯರನ್ನು ಮಾರಾಟ ಮಾಡಲಾಗುತ್ತಿದೆ.

**ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯ ಸಬಲೀಕರಣ;**

ಈ ಮೊದಲು ಮಹಿಳೆಯ ಜೀವನವು ಅವಳ ಮನೆಯ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಿತ್ತು. ಮಕ್ಕಳನ್ನು ಹೆರುವುದು ಅವುಗಳ ಲಾಲನೆ, ಪಾಲನೆ ಮಾಡುವುದು ಮತ್ತು ಕುಟುಂಬವನ್ನು ನೋಡಿಕೊಳ್ಳುವುದು ಮಾತ್ರ ಅವಳ ಕೆಲಸವಾಗಿತ್ತು. ಆದರೆ ಈಗ ಕಾಲ ಬದಲಾಗುತ್ತಿದೆ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಮುನ್ನುಗ್ಗುತ್ತಿದ್ದಾರೆ. ಅವರ ಈ ಸಾಧನೆಗೆ ಸಹಾಯಕವಾದ ಶಿಕ್ಷಣ ಮತ್ತು ಮಾಧ್ಯಮಗಳಿಗೆ ಧನ್ಯವಾದಗಳನ್ನು ಅರ್ಪಿಸಲೇಬೇಕು. ಭಾರತೀಯ ಮಹಿಳೆಯು ಹೊಲದಲ್ಲಿ ಕೆಲಸ ಮಾಡುವುದರಿಂದ ಹಿಡಿದು ವಿಮಾನ ನಡೆಸುವ ಮತ್ತು ಮೌಂಟ್ ಎವರೆಸ್ಟ್ ಶಿಖರ ಹತ್ತುವ ಮಟ್ಟಕ್ಕೆ ಬೆಳೆದಿದ್ದಾಳೆ. ಮಹಿಳೆಯರು ಸಂಘಟಿತ, ಅಸಂಘಟಿತ, ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಕೈಗಾರಿಕೆಗಳಲ್ಲಿ ಪ್ರವೇಶಿಸಿ ತಮ್ಮ ಪ್ರತಿಭೆ ಮೆರೆಯುತ್ತಿದ್ದಾರೆ. ಸರ್ಕಾರವು ಹಿಂದುಳಿದ ವರ್ಗದ ಮಹಿಳೆಯರಿಗಾಗಿ ವಿಶೇಷ ಸವಲತ್ತುಗಳನ್ನು ಮತ್ತು ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ.

**ಮಹಿಳಾ ಸಬಲೀಕರಣದಲ್ಲಿ ಸರ್ಕಾರದ ಪಾತ್ರ.**

ಆರನೇ ಪಂಚವಾರ್ಷಿಕ ಯೋಜನೆಯವರೆಗೆ ಮಹಿಳೆಯರಿಗಾಗಿಯೇ ಯಾವುದೇ ಪ್ರತ್ಯೇಕ ಅಭಿವೃದ್ಧಿ ಯೋಜನೆಗಳು ಹಾಕಿಕೊಂಡಿರಲಿಲ್ಲ. ಈ ಯೋಜನೆಯಲ್ಲಿ ಮಹಿಳೆಯರಿಗಾಗಿ ಕೆಲವೊಂದು ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. 1982ರಲ್ಲಿ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಯಿತು. 1987 ರಲ್ಲಿ ಮಹಿಳಾ ತರಬೇತಿ ಮತ್ತು ಉದ್ಯೋಗಕ್ಕೆ ನೆರವು ನೀಡುವ ಯೋಜನೆಯನ್ನು, ಮಹಿಳೆಯರಿಗೆ ಉದ್ಯೋಗ ನೀಡುವ ಗುರಿಯೊಂದಿಗೆ ಜಾರಿಗೆ ತರಲಾಯಿತು. 1988 ರಲ್ಲಿ ರಾಷ್ಟ್ರೀಯ ಮಹಿಳಾ ಸಮೃದ್ಧಿ ಯೋಜನೆ 1995ರಲ್ಲಿ ಇಂದಿರಾ ಮಹಿಳಾ ಯೋಜನೆಯನ್ನು ಮತ್ತು 2001ರಲ್ಲಿ ಸ್ವಯಂಸಿದ್ದ ಯೋಜನೆಗಳನ್ನು ಜಾರಿಗೆ ತರಲಾಯಿತು. ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸುವ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ ಅಡಿಯಲ್ಲಿ ಶೇಕಡಾ 40ರಷ್ಟು ಫಲಾನುಭವಿಗಳು ಮಹಿಳೆಯರಿದ್ದಾರೆ. ಕರ್ನಾಟಕದಲ್ಲಿ ಸ್ತ್ರೀಶಕ್ತಿ ಯೋಜನೆ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಒದಗಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3 ರಷ್ಟು

ಮೀಸಲಾತಿಯನ್ನು ಒದಗಿಸಲಾಗಿದೆ. ಸರ್ಕಾರದ ಈ ಎಲ್ಲ ಕಾರ್ಯಕ್ರಮಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರನ್ನು ಗುರಿಯಾಗಿಸಿಕೊಂಡಿದೆ. 2001ನೇ ವರ್ಷವನ್ನು" ಮಹಿಳಾ ಸಶಕ್ತಿಕರಣ ವರ್ಷ "ಎಂದು ಘೋಷಿಸಲಾಗಿದೆ ಮಹಿಳೆಯರ ಸಶಕ್ತಿಕರಣ ದಲ್ಲಿ ರಾಜಕೀಯ ಪಕ್ಷಗಳಿಗಿಂತ ಸ್ವಯಂಸೇವಾ ಸಂಸ್ಥೆಗಳು ಬಹಳ ಮಹತ್ವದ ಪಾತ್ರ ವಹಿಸಿವೆ.

**ಮಹಿಳಾ ಸಬಲೀಕರಣ ಮಾಡುವುದು ಹೇಗೆ?**

ಮಹಿಳೆಯು ಸುರಕ್ಷತೆ ಮತ್ತು ಉತ್ತಮ ಆರೋಗ್ಯ ಹೊಂದುವುದರ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ, ಬೌದ್ಧಿಕ, ಶೈಕ್ಷಣಿಕ, ಮಾನಸಿಕ ಹಾಗೂ ದೈಹಿಕವಾಗಿ ಸಶಕ್ತಗೊಳ್ಳುವ ಅಗತ್ಯವಿದೆ. ಮಹಿಳೆಯರ ಸುರಕ್ಷತೆಗೋಸ್ಕರ ಹಲವಾರು ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಆದರೆ ಈ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿಲ್ಲ. ಕಾನೂನುಗಳನ್ನು ಯಾವುದೇ ಪಕ್ಷಪಾತವಿಲ್ಲದೆ ಸಮರ್ಪಕವಾಗಿ ಜಾರಿಗೆ ತರುವ ತನಕ ಮಹಿಳೆಯರ ವಿರುದ್ಧದ ಅಪರಾಧಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಅಭಿವೃದ್ಧಿಯಲ್ಲಿ ರಾಜಕೀಯವನ್ನು ಮಾಡಬಾರದು. ಮಹಿಳೆಯರ ವಿರುದ್ಧದ ಸಾವಿರಾರು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿವೆ. ಎಷ್ಟು ಪ್ರಕರಣಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಕೈಬಿಡಲಾಗಿದೆ. ಅನೇಕ ಪ್ರಕರಣಗಳು ದೀರ್ಘಕಾಲ ನಡೆಯುತ್ತಿವೆ. ನಮ್ಮ ಕಾನೂನುಗಳಲ್ಲಿಯ ಕೆಲವೊಂದು ಲೋಪದೋಷಗಳಿಂದ ಆರೋಪಿಗಳು ಪಾರಾಗುತ್ತಿದ್ದಾರೆ. ಈ ಕಾನೂನುಗಳನ್ನು ಸರಿಪಡಿಸಬೇಕಾಗಿದೆ ಮಧ್ಯ ಪೂರ್ವ ಮತ್ತು ಅರಬ್ ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕು. ಮಹಿಳೆಯರಿಗೆ ಹಿಂಸೆ ಕೊಡುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು. ಅತ್ಯಾಚಾರಿಗಳಿಗೆ, ಕೊಲೆಗಡುಕರಿಗೆ ಮರಣ ದಂಡನೆಯನ್ನು ವಿಧಿಸಬೇಕು. ಮಹಿಳೆಯರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸುಲಭವಾಗಿ ದೊರೆಯಬೇಕು ಹಾಗೂ ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಸರಕಾರವು ಮಹಿಳೆಯರಿಗೆ ಉಚಿತ ಪ್ರಾಥಮಿಕ ಕಂಪ್ಯೂಟರ್ ತರಬೇತಿಯನ್ನು ಕೊಡಬೇಕು. ಒಳ್ಳೆಯ ಶಿಕ್ಷಣ ಮತ್ತು ಉತ್ತಮ ಉದ್ಯೋಗವಕಾಶಗಳು ಮಹಿಳೆಯರ ಮನೋಸ್ಥೈರ್ಯವನ್ನು ಹೆಚ್ಚಿಸುತ್ತದೆ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಹೆಣ್ಣು ಮಕ್ಕಳಿಗೆ ಶಿಷ್ಯವೇತನ ಕೊಡಬೇಕು ಮತ್ತು ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು. ಮಹಿಳೆಯರು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆಯನ್ನಿಟ್ಟು ತಮ್ಮ ಸ್ವಂತ ಗುರುತನ್ನು ಗುರುತಿಸಿಕೊಳ್ಳಬೇಕು. ಸಮಾಜವು ಮಹಿಳೆಯನ್ನು ಜೀವನದ ಅರ್ಧ ಎಂದು ಒಪ್ಪಿಕೊಳ್ಳಬೇಕು. ಮಹಿಳೆ ಇಲ್ಲದೆ ಪುರುಷ ಜೀವನವು ಅಪೂರ್ಣ ಎಂಬ ಸತ್ಯವನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಒಟ್ಟಾರೆಯಾಗಿ ಪ್ರಾಚೀನ ಕಾಲದಿಂದಲೂ ಮಹಿಳೆಯರ ಸ್ಥಾನಮಾನ ಕುಂದುತ್ತಾ ಬಂದಿದೆ. ಹಲವಾರು ಯೋಜನೆಗಳನ್ನು ಹಾಕಿಕೊಂಡರು ಸಮಗ್ರವಾದ ಬದಲಾವಣೆಯಾಗಿಲ್ಲ. ಕೆಲವು ಸಾಮಾಜಿಕ ಬದಲಾವಣೆಗಳನ್ನು ತರುವ ಅವಶ್ಯಕತೆ ಇದೆ. ಲಿಂಗ ಸಮಾನತೆಯ ಹೋರಾಟವನ್ನು ಪುರುಷರ ವಿರುದ್ಧದ ಹೋರಾಟ ಎಂದು ಪರಿಗಣಿಸಬಾರದು. ಇದು ಮಹಿಳೆಯರ ಶೋಷಣೆಯ ವಿರುದ್ಧದ ಹೋರಾಟ. ಮಹಿಳೆಯ ಸಬಲೀಕರಣ ಕೇವಲ ಸರಕಾರದ ಹೊಣೆಯಲ್ಲ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಹೊಣೆಯಾಗಿದೆ.

***

## ಪಂಪ ಪ್ರಶಸ್ತಿ ಪುರಸ್ಕೃತರು

– ಮರಿಸ್ವಾಮಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

| ಕ್ರ. ಸಂ | ಹೆಸರು | ವರ್ಷ | ಕೃತಿ/ಸಾಹಿತ್ಯ |
|---|---|---|---|
| 1 | ಕುವೆಂಪು | 1987 | ಶ್ರೀ ರಾಮಾಯಣ ದರ್ಶನಂ |
| 2 | ತೀ. ನಂ. ಶ್ರೀಕಂಠಯ್ಯ | 1988 | ಭಾರತೀಯ ಕಾವ್ಯ ಮೀಮಾಂಸೆ |
| 3 | ಶಿವರಾಮ ಕಾರಂತ | 1989 | ಮೈ ಮನಗಳ ಸುಳಿಯಲ್ಲಿ |
| 4 | ಸಂ. ಶಿ. ಭೂಸನೂರ ಮಠ | 1990 | ಶೂನ್ಯ ಸಂಪಾದನೆಯ ಪರಾಮರ್ಶೆ |
| 5 | ಪು ತಿ ನರಸಿಂಹಾಚಾರ್ | 1991 | ಶ್ರೀ ಹರಿಚರಿತೆ |
| 6 | ಎ. ಎನ್. ಮೂರ್ತಿರಾವ್ | 1992 | ದೇವರು |
| 7 | ಎಂ ಗೋಪಾಲಕೃಷ್ಣ ಅಡಿಗ | 1993 | ಸುವರ್ಣ ಪುತ್ಥಳಿ |
| 8 | ಸೇಡಿಯಾಪು ಕೃಷ್ಣಭಟ್ಟ | 1994 | ವಿಚಾರ ಪ್ರಪಂಚ |
| 9 | ಕೆ.ಎಸ್. ನರಸಿಂಹಸ್ವಾಮಿ | 1995 | ದುಂಡು ಮಲ್ಲಿಗೆ |
| 10 | ಎಂ.ಎಂ.ಕಲಬುರ್ಗಿ | 1996 | ಸಮಗ್ರ ಸಾಹಿತ್ಯ |
| 11 | ಜಿ.ಎಸ್.ಶಿವರುದ್ರಪ್ಪ | 1997 | ಸಮಗ್ರ ಸಾಹಿತ್ಯ |
| 12 | ದೇಜಗೌ | 1998 | ಸಮಗ್ರ ಸಾಹಿತ್ಯ |
| 13 | ಚನ್ನವೀರ ಕಣವಿ | 1999 | ಸಮಗ್ರ ಸಾಹಿತ್ಯ |
| 14 | ಎಲ್. ಬಸವರಾಜು | 2000 | ಸಮಗ್ರ ಸಾಹಿತ್ಯ |
| 15 | ಪೂರ್ಣಚಂದ್ರ ತೇಜಸ್ವಿ | 2001 | ಸಮಗ್ರ ಸಾಹಿತ್ಯ |
| 16 | ಚಿದಾನಂದ ಮೂರ್ತಿ | 2002 | ಸಮಗ್ರ ಸಾಹಿತ್ಯ |
| 17 | ಚಂದ್ರಶೇಖರ ಕಂಬಾರ | 2003 | ಸಮಗ್ರ ಸಾಹಿತ್ಯ |
| 18 | ಎಚ್ ಎಲ್ ನಾಗೇಗೌಡ | 2004 | ಸಮಗ್ರ ಸಾಹಿತ್ಯ |
| 19 | ಎಸ್.ಎಲ್.ಭೈರಪ್ಪ | 2005 | ಸಮಗ್ರ ಸಾಹಿತ್ಯ |
| 20 | ಜಿ.ಎಸ್. ಆಮೂರ | 2006 | ಸಮಗ್ರ ಸಾಹಿತ್ಯ |
| 21 | ಯಶವಂತ ಚಿತ್ತಾಲ | 2007 | ಸಮಗ್ರ ಸಾಹಿತ್ಯ |
| 22 | ಟಿ. ವಿ. ವೆಂಕಟಾಚಲ ಶಾಸ್ತ್ರಿ | 2008 | ಸಮಗ್ರ ಸಾಹಿತ್ಯ |
| 23 | ಚಂಪಾ | 2009 | ಸಮಗ್ರ ಸಾಹಿತ್ಯ |
| 24 | ಜಿ. ಎಚ್. ನಾಯಕ | 2010 | ಸಮಗ್ರ ಸಾಹಿತ್ಯ |
| 25 | ಬರಗೂರು ರಾಮಚಂದ್ರಪ್ಪ | 2011 | ಸಮಗ್ರ ಸಾಹಿತ್ಯ |
| 26 | ಡಾ. ಡಿ. ಎನ್. ಶಂಕರ ಭಟ್ಟ | 2012 | ಸಮಗ್ರ ಸಾಹಿತ್ಯ |
| 27 | ಕಯ್ಯಾರ ಕಿಞ್ಞಣ್ಣ ರೈ | 2013 | ಸಮಗ್ರ ಸಾಹಿತ್ಯ |
| 28 | ಪ್ರೊ. ಜಿ. ವೆಂಕಟಸುಬ್ಬಯ್ಯ | 2014 | ಕನ್ನಡ ನಿಘಂಟು |
| 29 | ಬಿ. ಎ. ಸನದಿ | 2015 | ಸಮಗ್ರ ಸಾಹಿತ್ಯ |
| 30 | ಹಂ. ಪ. ನಾಗರಾಜಯ್ಯ | 2016 | ಸಮಗ್ರ ಸಾಹಿತ್ಯ |
| 31 | ಕೆ.ಎಸ್.ನಿಸಾರ್ ಅಹಮದ್ | 2017 | ಸಮಗ್ರ ಸಾಹಿತ್ಯ |
| 32 | ಷ. ಶೆಟ್ಟರ್ | 2018 | ಸಂಶೋಧನೆ |
| 33. | ಡಾ. ಸಿದ್ದಲಿಂಗಯ್ಯ | 2019 | ಸಮಗ್ರ ಸಾಹಿತ್ಯ |

**ಆಕರ ಗ್ರಂಥ :** ಡಾ. ರವಿ ಹೆಚ್., (೨೦೨೧), ಪಂಪ ಪ್ರಶಸ್ತಿ ಪುರಸ್ಕೃತರು, ನೋಷನ್ ಪ್ರಕಾಶನ.

## ಹಳೆಗನ್ನಡದ ಪ್ರಮುಖ ಕವಿಗಳು

– ಸ್ನೇಹ ಎಸ್., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

**ಪಂಪ :**

• ಕನ್ನಡದ ಆದಿ ಕವಿ ಪಂಪ.

• ಪಂಪನ "ಆದಿಪುರಾಣ" ಕನ್ನಡದ ಮೊದಲ ಕಾವ್ಯವಾಗಿದೆ.

• ಪಂಪನ ತಾಯಿ ಕನ್ನಡನಾಡಿನ ಅಣ್ಣೀಗೇರಿಯ ಜೋಯಿಸ ಸಿಂಘನ ಮಗಳು ಅಬ್ಬಣಬ್ಬೆ.

• ಪಂಪನ ತಂದೆ ಭೀಮಪ್ಪಯ್ಯ ತಮ್ಮ ಜಿನವಲ್ಲಭ.

• ಪಂಪನ ಆಶ್ರಯಧಾತ ಚಾಳುಕ್ಯ ಚಕ್ರವರ್ತಿ ಅರಿಕೇಸರಿ.

**ಪಂಪನ ಎರಡು ಪ್ರಮುಖ ಕೃತಿಗಳು –**

* 'ಆದಿ ಪುರಾಣ': ಇದು ಪಂಪ ಮಹಾಕವಿಯ ಮೊದಲ ಕಾವ್ಯ. ಇದೊಂದು ಧಾರ್ಮಿಕ ಗ್ರಂಥವಾಗಿದೆ. ಇದರ ವಸ್ತು ಜೈನರ ಮೊದಲ ತೀರ್ಥಂಕರ ಆದಿನಾಥ ಮತ್ತು ಮೊದಲ ಚಕ್ರವರ್ತಿ ಭರತನನ್ನು ಕುರಿತು ಬರೆದ ಕೃತಿಯಾಗಿದೆ. ಇದು ಕನ್ನಡದ ಮೊದಲ ಜೈನ ಪುರಾಣವೂ ಆಗಿದೆ. ಕಾವ್ಯಧರ್ಮ ಮತ್ತು ಧರ್ಮದ ಸಾಮರಸ್ಯತೆ ಇದರಲ್ಲಿದೆ.

* 'ವಿಕ್ರಮಾರ್ಜುನ ವಿಜಯ': ಇದು ಸಾಮಾಜಿಕ ಕೃತಿಯಾಗಿದೆ. ಇದು ವ್ಯಾಸ ಮಹರ್ಷಿ ವಿರಚಿತ ಮಹಾಭಾರತದಿಂದ ಅನುವಾದಿಸಲಾಗಿದೆ. ಅರ್ಜುನನ್ನು ಇಲ್ಲಿ ತನ್ನ ಆಶ್ರಯಧಾತ ಅರಿಕೇಸರಿಯೊಂದಿಗೆ ಹೋಲಿಸಿ ವಿಕ್ರಮಾರ್ಜುನ ವಿಜಯ ಕೃತಿಯನ್ನು ರಚಿಸಿದ್ದಾರೆ.

• ಪಂಪ, ಪೊನ್ನ, ರನ್ನರು "ರತ್ನಾತ್ರಯ"ರು ಎಂಬ ಬಿರುದನ್ನು ಹೊಂದಿದ್ದಾರೆ.

**ಪೊನ್ನ :**

• ರತ್ನತ್ರಯರಲ್ಲಿ ಎರಡನೇಯವನು ಪೊನ್ನ.

• ಪಂಪನ ವೆಂಗಿ ಮಂಡಲವೇ ಈತನ ಜನ್ಮ ಸ್ಥಳವಾದಂತೆ ತೋರುತ್ತದೆ.

• ಈತ ರಾಷ್ಟ್ರಕೂಟರ ದೊರೆ ಮೂರನೆ ಕೃಷ್ಣನಲ್ಲಿ ಆಶ್ರಯ ಪಡೆದಿದ್ದನು.

• ಇವನಿಗೆ "ಉಭಯ ಚಕ್ರವರ್ತಿ" "ತಿರುಳ್ಗಳ ಸವಣ" ಎಂಬ ಬಿರುದ್ದುಗಳಿದ್ದವು.

**ಕೃತಿಗಳು :**

* ಶಾಂತಿಪುರಾಣ
* ಭುವನೈಕ್ಯ ರಾಮಾಭ್ಯುದಯ
* ಜಿನಾಕ್ಷರ ಮಾಲೆ

**ರನ್ನ**

• ರತ್ನತ್ರಯರಲ್ಲಿ ಮೂರನೇಯವರೇ ರನ್ನ.

• ಇವನ ಕಾಲ 949

• ಇವರ ತಂದೆ : ಜೀನೇಂದ್ರವಲ್ಲಭ, ತಾಯಿ : ಅಬ್ಬಲಬ್ಬೆ.

• ಈತ ಮುಧೋಳದ ಜೈನ ಕುಟುಂಬಕ್ಕೆ ಸೇರಿದವನು.

• ಇವನು ಮೊದಲು ಚಾವುಂಡರಾಯರಲ್ಲಿ ಆಶ್ರಯ ಪಡೆದಿದ್ದನು. ನಂತರ ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯ ಬಳಿ ಆಶ್ರಯ ಪಡೆದಿದ್ದನು.

• ಈತ ತನ್ನ ಮಗನಿಗೆ ರಾಯ ಎಂದು ಚಾವುಂಡರಾಯ ನೆನಪಿಗಾಗಿ, ಅತ್ತಿಮಬ್ಬೆ ಎಂದು ಮಗಳಿಗೆ ಅತ್ತಿಮಬ್ಬೆ ನೆನಪಿಗಾಗಿ ಹೆಸರಿಟ್ಟನು.

**ಕೃತಿಗಳು :**

* ಗದಾಯುದ್ಧ (ಸಾಹಸ ಭೀಮ ವಿಜಯ)

ಗದಾಯುದ್ದವನ್ನು ತನ್ನ ಆಶ್ರಯಧಾತ ಸತ್ಯಾಶ್ರಯ ಇರುವ ಬಂಡಗನನ್ನು ಭೀಮನೊಂದಿಗೆ ಅಮೀಕರಿಸಿ ಬರೆದಿದ್ದಾನೆ. ಇದು ಸಿಂಹಾವಲೋಕನ ಕ್ರಮದಲ್ಲಿದೆ. ನಾಯಕ ಭೀಮ, ದುರಂತ ನಾಯಕ ಕರ್ಣನಾಗಿದ್ದಾನೆ. ಅಜಿತನಾಥ ಪುರಾಣ (ಅಜಿತ ತೀರ್ಥಂಕರ ಪುರಾಣ ತಿಲಕಂ): ಅಜಿತನಾಥ ಪುರಾಣವನ್ನು ಮಹಾಪುರಾಣದಿಂದ ಅನುವಾದಿಸಲಾಗಿದೆ. ಇದರ ವಸ್ತು ಜೈನರ ಎರಡನೇ ತೀರ್ಥಂಕರ ಅಜಿತನಾಥ ಚಕ್ರವರ್ತಿ ಅಡಗನ ವಿಚಾರವನ್ನು ಹೊಂದಿದೆ.

* ಚಕ್ರೇಶ್ವರ ಚರಿತೆ
* ಪರಶುರಾಮ ಚರಿತ
* ರನ್ನ ಕಂದ

**ಜನ್ನ :**

• ಜನ್ನನ ಕಾಲ 1225

• ಜೈನ ಪರಂಪರೆಗೆ ಸೇರಿದ ಮಾರ್ಗದ ಕವಿ

• ಹೊಯ್ಸಳ ನರಸಿಂಹನಲ್ಲಿ ಕಟಕೋಪಾಧ್ಯಾಯ.

• ಸುಮನೋಬಾಣ ಎಂದು ಪ್ರಸಿದ್ದವಾಗಿದ್ದ ಶಂಕರ ಜನ್ನನ ತಂದೆ, ಗಂಗಾದೇವಿ ತಾಯಿ.

• ಎರಡನೇ ನಾಗವರ್ಮ ಈತನ ಗುರು.

**ಕೃತಿಗಳು :**

*ಯಶೋಧರ ಚರಿತೆ: ಯಶೋಧರ ಚರಿತೆಯನ್ನು 1209 ರಲ್ಲಿ ಬರೆದನು. ವಾದಿರಾಜಕೃತ ಸಂಸ್ಕೃತದ ಯಶೋಧರ ಚರಿತೆಯ ಆಧಾರದ ಮೇಲೆ ರಚನೆಗೊಂಡಿದೆ. ಈ ಕೃತಿ ಸಂಪೂರ್ಣ ಕಂದ ಪದ್ಯದಿಂದ ಕೂಡಿದೆ.

* ಅನಂತನಾಥ ಪುರಾಣ : ಅನಂತನಾಥ ಪುರಾಣವನ್ನು ಸಂಸ್ಕೃತದ ಉತ್ತರ ಪುರಾಣದ ಆಧಾರದ ಮೇಲೆ ರಚಿಸಲಾಗಿದೆ. ಇದು ಜೈನರ 14 ನೇ ತೀರ್ಥಂಕರ ಜೀವನ ಚರಿತ್ರೆಯನ್ನು ಒಳಗೊಂಡಿದೆ.

* ಅನುಭವ ಮುಕುರ
* ಸ್ವರತಂತ್ರ

**ಶಿವಕೋಟ್ಯಾಚಾರ್ಯ :**

• ಶಿವಕೋಟ್ಯಾಚಾರ್ಯರ ಕಾಲವನ್ನು ಕವಿ ಚರಿತಕಾರರು 1180 ಎಂದು ಗುರುತಿಸಿದ್ದಾರೆ.

• ಶಿವಕೋಟ್ಯಾಚಾರ್ಯರು ಬರೆದ **"ವಡ್ಡಾರಾಧನೆ"** ಕನ್ನಡದ ಮೊಟ್ಟಮೊದಲ ಗದ್ಯ ಗ್ರಂಥವಾಗಿದೆ.

• ವಡ್ಡಾರಾಧನೆಯನ್ನು ಪ್ರಾಕೃತ ಗ್ರಂಥ ಭಗವತೀ ಆರಾಧನಾದಿಂದ ಅನುವಾದಿಸಲಾಗಿದೆ.

• ವಡ್ಡಾರಾಧನೆಯಲ್ಲಿ 19 ಕಥೆಗಳಿವೆ.

• ಇದಕ್ಕೆ ಉಪಸರ್ಗ ಕೇವಲಿಗಳ ಕಥೆ ಎಂಬ ಮತ್ತೊಂದು ಹೆಸರಿತ್ತು.

**ದುರ್ಗಸಿಂಹ :**

• ಇವನು ಕರ್ನಾಟಕದ ಕಿಸುನಾಡಿನ ಸೈಯಡಿಯ ಅಗ್ರಹಾರದವನು.

• ಈಶ್ವರಾರ್ಯ ಮತ್ತು ರೇವಕಬ್ಬೆಯರ ಮಗನಾಗಿ ದುರ್ಗಸಿಂಹ ಜನಿಸಿದ.

• ದುರ್ಗಸಿಂಹ ಒಂದನೇ ಜಯಸಿಂಹ ಜಗದೇಕ ಮಲ್ಲನಲ್ಲಿ ಸಂಧಿ ವಿಗ್ರಹಿಯಾಗಿದ್ದನು.

• ಸುಮಾರು 1031 ಈತನ ಗ್ರಂಥ ರಚನಾ ಕಾಲ.

• ವಸುಭಾಗಭಟ್ಟ ಮತ್ತು ಇತರರ ಪಂಚತಂತ್ರಗಳನ್ನು ಆಧಾರವಾಗಿಟ್ಟುಕೊಂಡು ದುರ್ಗಸಿಂಹ ಕನ್ನಡದಲ್ಲಿ "ಪಂಚತಂತ್ರ" ಕೃತಿಯನ್ನು ರಚಿಸಿದ್ದಾನೆ. ಇದೊಂದು ಚಂಪೂ ಗ್ರಂಥವಾಗಿದೆ.

**ಚಾವುಂಡರಾಯ :**

• ಗಂಗರ ಅರಸ ನಾಲ್ವಡಿ ರಾಚಮಲ್ಲನಲ್ಲಿ ಮಂತ್ರಿಯಾಗಿದ್ದನು.

• ಇವನು ತನ್ನ ಶೌರ್ಯಗಳಿಂದ ಸಮರ ಪರಶುರಾಮ, ವೀರಮಾರ್ತಾಂಡ, ಪ್ರತಿಪಕ್ಷ ರಾಕ್ಷಸ ಎಂಬ ಬಿರುದುಗಳನ್ನು ಹೊಂದಿದ್ದನು.

• ಗೋಮಟೇಶ್ವರ ಮೂರ್ತಿಯನ್ನು ಕೆತ್ತಿಸಿದ ಕೀರ್ತಿ ಇವನದಾಗಿದೆ. ಆದ್ದರಿಂದ ಇವನಿಗೆ "ಗೋಮ್ಮಟರಾಯ" ಎಂಬ ಬಿರುದು ಇತ್ತು.

**ಕೃತಿಗಳು :**

*ಚಾವುಂಡರಾಯ ಪುರಾಣ

ಚಾವುಂಡರಾಯ ಪುರಾಣಕ್ಕೆ ಕವಿ ಪರಮೇಷ್ಠಿಯ ವಾಗಾರ್ಥ ಸಂಗ್ರಹದ ಪ್ರೇರಣೆಯಿದೆ. ಈ ಕೃತಿಗೆ ತ್ರಿಷಷ್ಠ ಲಕ್ಷಣ ಮಹಾಪುರಾಣ ಎಂಬ ಹೆಸರು ಇದೆ.

**1ನೇ ನಾಗವರ್ಮ :**

• ಈತ ಸುಮಾರು 10 ನೆ ಶತಮಾನದ ಅಂತ್ಯದಲ್ಲಿದ್ದನು.

• ಈತನ ಊರು ವೆಂಗಿಪಳುವು ಈತ ಜೈನ ಬ್ರಾಹ್ಮಣ.

**ಕೃತಿಗಳು :**

* ಛಂಧೋಬುದ್ದಿ :

ಛಂಧೋಬುದ್ದಿ ಇದು ಕನ್ನಡದ ಮೊದಲ ಛಂಧೋಗ್ರಂಥ. ಈ ಕೃತಿಯಲ್ಲಿ ಅಕ್ಕರ, ಗೀತಿಕೆ, ಏಳೇ ತ್ರಿಪದಿ ಉತ್ಸಾಹ, ಷಟ್ಪದಿ ಅಕ್ಕರಿಕೆಗಳನ್ನು ಕನ್ನಡದ ಛಂಧೋಜಾತಿ ಎಂದಿದ್ದಾನೆ.

*ಕಾದಂಬರಿ : ಕಾದಂಬರಿ ಇವನ ಮತ್ತೊಂದು ಕೃತಿಯಾಗಿದೆ. ಬಾಣ ಕವಿ ಸಂಸ್ಕೃತದಲ್ಲಿ ಬರೆದಿರುವ ಕಾದಂಬರಿಯನ್ನು ನಾಗವರ್ಮ ಅನುವಾದಿಸಿದ್ದಾನೆ. ಆ ಮೂಲಕ ಕನ್ನಡದ ಮೊಟ್ಟಮೊದಲ ಅನುವಾದಿತ ಕೃತಿಯಾಗಿದೆ. ಕಾದಂಬರಿ ಕಾವ್ಯದ ನಾಯಕಿಯ ಹೆಸರೂ ಕಾದಂಬರಿ ಎಂದೇ.

**ನಾಗಚಂದ್ರ :**

• ನಾಗಚಂದ್ರ 11 ನೇ ಶತಮಾನದ ಕೊನೆ 12 ನೇ ಶತಮಾನದ ಆರಂಭದಲ್ಲಿ ಬದುಕಿದ್ದನು.

**ಕೃತಿಗಳು :**

* ರಾಮಚಂದ್ರ ಚರಿತ ಪುರಾಣ: ರಾಮಚಂದ್ರ ಚರಿತ ಪುರಾಣ ಇದು ಕನ್ನಡದ ಮೊಟ್ಟಮೊದಲ ಜೈನ ರಾಮಾಯಣವಾಗಿದೆ. ಪ್ರಾಕೃತಕವಿ ವಿಮಲಸೂರಿಯ ಪಲುಮಚರಿಯ ಕೃತಿಯನ್ನು ಅನುಕರಿಸಿ ಬರೆದಿದ್ದಾನೆ. ಇದು ಧಾರ್ಮಿಕ ಕೃತಿಯಾಗಿದೆ.

* ಮಲ್ಲಿನಾಥ ಪುರಾಣ : ಮಲ್ಲಿನಾಥ ಪುರಾಣದ ವಸ್ತು ಜೈನರ 19ನೇ ತೀರ್ಥಂಕರ ಮಲ್ಲಿನಾಥನನ್ನು ಕುರಿತಾಗಿದೆ. ಇದು ಕೂಡ ಧಾರ್ಮಿಕ ಕೃತಿಯಾಗಿದೆ.

**ಶಾಂತಿನಾಥ :**

- ಕ್ರಿ.ಶ 1068 ಇವನ ಕಾಲ.
- ಇವನು ಚಾಲುಕ್ಯ ಚಕ್ರವರ್ತಿ ಭುವನೈಕ್ಯ ಮಲ್ಲಿಚಾಸಾಯಿಸ ದೇವನಾದ ಲಕ್ಷಣ ರಾಜನಲ್ಲಿ ಮಂತ್ರಿಯಾಗಿದ್ದನು.
- ಈತನ ಏಕೈಕ ಗ್ರಂಥ "ಸುಕುಮಾರ ಚರಿತೆ".

**ನಯಸೇನ :**

- ಕ್ರಿ.ಶ 1112 ರ ಕಾಲಾವಧಿಯಲ್ಲಿ ಮುಳಗುಂದದಲ್ಲಿದ್ದ ಜೈನ ಕವಿ ನಯಸೇನನಾಗಿದ್ದಾನೆ.
- ಈತನ ಕೃತಿ "ಧರ್ಮಾಮೃತ". ಇದು ಜನತೆಗಾಗಿ ಬರೆದ ಮೊದಲ ಜೈನ ಪುರಾಣವಾಗಿದೆ. ಜಾನಪದ ಕತೆಗಾರನ ವಿಡಂಬನ ಹಾಸ್ಯ ಜನಜೀವನ ಪ್ರಜ್ಞೆ ಇದರಲ್ಲಿ ಅಗಾಧವಾಗಿದೆ.
- ಜನತೆಯ ಕವಿಗಳೆಂದು ಹೆಸರಾದ ಕನ್ನಡದ ಕವಿಗಳಲ್ಲಿ ನಯಸೇನ ಮೊದಲ ಸ್ಥಾನದಲ್ಲಿ ನಿಲ್ಲುತ್ತಾನೆ.

**ಬ್ರಹ್ಮಶಿವ :**

- ಇವನ ಕಾಲ 1100
- ಇವನು ಜೈನ ಕವಿಯಾಗಿದ್ದನು.
- ಇವನ ಗುರು ವೀರನಂದಿ ಆಚಾರಸಾರ.

**ಕೃತಿಗಳು :**

*ಸಮಯ ಪರೀಕ್ಷೆ : ತಾತ್ವಿಕ ಪದ್ಯ ಗ್ರಂಥವಾಗಿದೆ. ಕಂದ ವೃತ್ತದಲ್ಲಿ ಕೇವಲ ಪದ್ಯರೂಪದಲ್ಲಿರುವ ಕೃತಿಯಾಗಿದೆ.
* ತ್ರೈಲೋಕ್ಯ ಚೂಡಾಮಣಿ : ಇದರಲ್ಲಿ 36 ಸ್ತೋತ್ರಗಳಿವೆ. ಇದಕ್ಕೆ ಛತೀಸರತ್ನಮಾಲಾ ಎಂಬ ಮತ್ತೊಂದು ಹೆಸರಿದೆ.

**2 ನೇ ನಾಗವರ್ಮ :**

- ಇವರ ಕಾಲ– 1042
- ಇವರ ಗುರು ವೀರಭಟ್ಟಾರಕ.
- 2 ನೇ ನಾಗವರ್ಮ ಕನ್ನಡದಲ್ಲಿ ವ್ಯಾಕರಣ ಬರೆದ ಮೊದಲಿಗನಾಗಿದ್ದಾನೆ.

**ಕೃತಿಗಳು:**

* ಕವ್ಯಾವಲೋಕನ: ಇದೊಂದು ಅಲಂಕಾರ ಗ್ರಂಥವಾಗಿದ್ದು. ಸೂತ್ರಗಳು ಕಂದ ಪದ್ಯದಲ್ಲಿದೆ.
* ವರ್ಧಮಾನ ಪುರಾಣ: ಇದಕ್ಕೆ ಮಹಾವೀರಚರಿತೆ ಎಂಬ ಮತ್ತೊಂದು ಹೆಸರಿದೆ.
* ಕರ್ನಾಟಕ ಭಾಷಾಭೂಷಣ: ಇದು ಕನ್ನಡದ ಮೊದಲ ವ್ಯಾಕರಣ ಗ್ರಂಥವಾಗಿದೆ.
* ಅಭಿಧಾನ ವಸ್ತುಕೋಶ: ಇದರಲ್ಲಿ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ವಿವರಿಸಲಾಗಿದೆ.

***

## ಕನ್ನಡ ಭಾಷೆ ಮತ್ತು ಸಾಹಿತ್ಯ ಚರಿತ್ರೆ (ನೆನಪಿನಲ್ಲಿಡಬೇಕಾದ ಪ್ರಮುಖ ಅಂಶಗಳು)

– ಬಸವರಾಜ ಗುಡಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

- ಕನ್ನಡ ಭಾಷೆಯ ಪ್ರಪ್ರಥಮ ಕೃತಿ – ಕವಿರಾಜಮಾರ್ಗ
- ಕನ್ನಡ ಭಾಷೆಯ ಮೊಟ್ಟ ಮೊದಲ ಲಿಖಿತ ದಾಖಲೆ – ಸಿಂಹಕಟಾಂಜನ ಶಾಸನ/ ಹಲ್ಮಿಡಿ ಶಾಸನ
- ಕನ್ನಡ ಭಾಷೆಯ ಪ್ರಪ್ರಥಮ ಗದ್ಯ ಕೃತಿ – ವಡ್ಡಾರಾಧನೆ
- ಕನ್ನಡ ಭಾಷೆಗಿರುವ ಪ್ರಾಚೀನತೆ – ಸುಮಾರು 3000 ಸಾವಿರ ವರ್ಷಗಳು
- ಕನ್ನಡ ಭಾಷೆಯು ಯಾವ ಭಾಷಾ ವರ್ಗಕ್ಕೆ ಸೇರುತ್ತದೆ – ದ್ರಾವಿಡ
- ಕನ್ನಡ ಭಾಷೆಯ ಆದಿಕವಿ – ಪಂಪ
- ಕನ್ನಡ ಸಾಹಿತ್ಯದ ರತ್ನತ್ರಯರೆಂದರೆ – ಪಂಪ, ಪೊನ್ನ, ರನ್ನ
- ಕವಿರಾಜಮಾರ್ಗದ ಕರ್ತೃ – ಶ್ರೀವಿಜಯ
- ಪಂಪ ರಚಿಸಿರುವ ಕಾವ್ಯಗಳು – ವಿಕ್ರಮಾರ್ಜುನ ವಿಜಯ, ಆದಿಪುರಾಣ
- ಪೊನ್ನನು ರಚಿಸಿದ ಕೃತಿಗಳು – ಶಾಂತಿ ಪುರಾಣ, ಜಿನಾಕ್ಷರ ಮಾಲೆ, ಭುವನೈಕ್ಯ ರಾಮಾಭ್ಯುದಯ
- ಕನ್ನಡ ಸಾಹಿತ್ಯದಲ್ಲಿ ದೊರಕಿರುವ ಪ್ರಪ್ರಥಮ ನಾಟ್ಯ ಪ್ರಧಾನ ಕಾವ್ಯ– ಗದಾಯುದ್ಧ
- ಪಂಪನ ಆಶ್ರಯದಾತ – ಚಾಲುಕ್ಯ ಅರಿಕೇಸರಿ
- ಪೊನ್ನನ ಆಶ್ರಯದಾತ – ರಾಷ್ಟ್ರಕೂಟ 3ನೇ ಕೃಷ್ಣ
- ರನ್ನನು ಯಾರ ಆಸ್ಥಾನದಲ್ಲಿದ್ದನು – ಚಾಲುಕ್ಯ ತೈಲಪ
- ಸಾಹಸಭೀಮ ವಿಜಯಕ್ಕಿರುವ ಮತ್ತೊಂದು ಹೆಸರು – ಗದಾಯುದ್ಧ
- ಹಳೆಗನ್ನಡ ಯುಗವನ್ನು ----- ಯುಗವೆಂತಲೂ ಕರೆಯಬಹುದು – ಚಂಪೂ
- ಪ್ರಪ್ರಥಮ ವಚನಕಾರನೆಂದು ಗುರ್ತಿಸಲ್ಪಡುವವರು – ದೇವರ ದಾಸಿಮಯ್ಯ
- 'ರಗಳೆ' ಎಂಬುದು – ಛಂದಸ್ಸು
- ಸರ್ವಜ್ಞ ರಚಿಸಿದ್ದು – ತ್ರಿಪದಿ
- ಪಂಚತಂತ್ರದ ಕರ್ತೃ – ದುರ್ಗಸಿಂಹ
- ಕವಿರಾಜಮಾರ್ಗವು – ಅಲಂಕಾರ ಕೃತಿ
- ಮಲ್ಲಿನಾಥ ಪುರಾಣದ ಕರ್ತೃ – ನಾಗಚಂದ್ರ
- ಸಾಹಸಭೀಮ ವಿಜಯ ಕ್ಕಿರುವ ಮತ್ತೊಂದು ಹೆಸರು – ಗದಾಯುದ್ಧ
- ಬಸವಣ್ಣ ಯಾರ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು – ಕಲಚೂರಿಬಿಜ್ಜಳ
- ಅಭಿನವ ಪಂಪ ನೆಂದು ಖ್ಯಾತಿವೆತ್ತವನು – ನಾಗಚಂದ್ರ
- 'ಛಂದೋಂಬುದಿ' ಕರ್ತೃ– ನಾಗವರ್ಮ 1

- 'ರಾಮಚಂದ್ರ ಚರಿತ ಪುರಾಣದ ಕರ್ತೃ – ನಾಗಚಂದ್ರ
- ಬಸವಣ್ಣನವರ ಅಂಕಿತ ನಾಮ – ಕೂಡಲಸಂಗಮದೇವ
- ರಾಘವಾಂಕನ ಗುರುವಾಗಿದ್ದವರು – ಹರಿಹರ
- ರಗಳೆಯ ಕವಿ ಎಂದು ಪ್ರಸಿದ್ಧನಾದವನು – ಹರಿಹರ
- ಹರಿಹರ ರಚಿಸಿದ ಚಂಪೂ ಕಾವ್ಯ – ಗಿರಿಜಾ ಕಲ್ಯಾಣ
- 'ಚಂಪೂ' ಎಂದರೆ – ಗದ್ಯ ಪದ್ಯ ಮಿಶ್ರಿತ ಕಾವ್ಯ
- 'ಷಟ್ಪದಿ ಬ್ರಹ್ಮ' ಎಂದು ಖ್ಯಾತನಾದವನು – ರಾಘವಾಂಕ
- ರಾಘವಾಂಕನ ಪ್ರಥಮ ಕೃತಿ – ಹರಿಶ್ಚಂದ್ರ ಕಾವ್ಯ
- ಪಂಪನು ತನ್ನ ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ಅಪಾರವಾಗಿ ಮೆಚ್ಚಿಕೊಂಡು ಹೊಗಳಿದ ಪಾತ್ರ – ಕರ್ಣ
- ಬಸವಣ್ಣನವರ ಮುಖ್ಯ ಗುರಿ – ಸಾಮಾಜಿಕ ಆಂದೋಲನ
- ಕುಮಾರವ್ಯಾಸ ಎಂಬುದು ಯಾರ ಕಾವ್ಯನಾಮ – ನಾರಾಣಪ್ಪ
- ಜನ್ನನು ರಚಿಸಿದ ಕೃತಿಗಳು – ಯಶೋಧರ ಚರಿತೆ, ಅನಂತನಾಥ ಪುರಾಣ, ಸ್ಮರತಂತ್ರ
- 'ಸರಸ ಸಾಹಿತ್ಯದ ವರದೇವತೆ' ಎಂದು ಹೊಗಳಿಸಿಕೊಂಡ ಕವಿಯತ್ರಿ – ಸಂಚಿಹೊನ್ನಮ್ಮ
- 'ಯೋಗಭೋಗ ಸಮನ್ವಯ ಕವಿ' ಎಂದು ಖ್ಯಾತಿವೆತ್ತವನು – ರತ್ನಾಕರವರ್ಣಿ
- ರಾಮನಾಥ ಚರಿತಕ್ಕಿರುವ ಮತ್ತೊಂದು ಹೆಸರು – ಕುಮಾರರಾಮನ ಸಾಂಗತ್ಯ
- ಜನ್ನನ ಗುರು– ನಾಗವರ್ಮ–2
- ಸಾಂಗತ್ಯ ಎಂಬುದು – 4 ಸಾಲಿನ ಪದ್ಯ
- ರಾಘವಾಂಕನನ್ನು 'ಷಟ್ಪದಿ ಬ್ರಹ್ಮ' ಎಂದು ಕರೆಯಲು ಕಾರಣ – ಇಡೀ ಕಾವ್ಯವನ್ನು ಷಟ್ಪದಿಯಲ್ಲಿ ಬರೆದು ಭದ್ರ ಬುನಾದಿ ಹಾಕಿದ್ದರಿಂದ.
- ಯಶೋಧರ ಚರಿತವು – ಕಂದವೃತ್ತದಲ್ಲಿದೆ
- ಜೈಮಿನಿ ಭಾರತವು – ಸಂಸ್ಕೃತ ವ್ಯಾಸ ಭಾರತ ಕೃತಿಯನ್ನಾಧರಿಸಿದೆ
- ಉಪಮಾಲೋಲ ಎಂದು ಖ್ಯಾತನಾದವನು – ಲಕ್ಷ್ಮೀಶ
- ಜೈಮಿನಿ ಭಾರತ ಕೃತಿಯ ಕಥಾನಾಯಕ – ಕೃಷ್ಣ
- ಕನಕದಾಸರ ಅಂಕಿತನಾಮ – ಕಾಗಿನೆಲೆಯಾದಿಕೇಶವ
- ದಾಸ ಸಾಹಿತ್ಯದ ಅಶ್ವಿನೀ ದೇವತೆಗಳೆಂದರೆ – ಕನಕದಾಸರು, ಪುರಂದರದಾಸರು
- 'ಕೃಷ್ಣಚರಿತೆ' ಎಂಬುದು – ಮೊಹನ ತರಂಗಿಣಿಯ ಮತ್ತೊಂದು ಹೆಸರು

***

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ

– ರೇಣುಕಾ ಡಿ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಜ್ಞಾನಪೀಠ ಪ್ರಶಸ್ತಿ ಭಾರತದ ಸಾಹಿತಿಗಳಿಗೆ ಸಲ್ಲುವ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ. ಈ ಪ್ರಶಸ್ತಿಯು ಭಾರತದ ಸಂವಿಧಾನದ ಎಂಟನೆ ಅನುಚ್ಛೇದದಲ್ಲಿ ಉಲ್ಲೇಖವಾಗಿರುವ ಭಾಷೆಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಯನ್ನು ಅಥವಾ ಸಮಗ್ರ ಸಾಹಿತ್ಯದ ಕೊಡುಗೆಯನ್ನು ನೀಡಿದ ಭಾರತೀಯ ನಾಗರಿಕನಿಗೆ ಲಭಿಸುವುದು. ಸಾಹು ಜೈನ್ ಪರಿವಾರದವರು, ಈ ಪ್ರಶಸ್ತಿಯನ್ನು ಮೇ 22, 1961 ರಲ್ಲಿ ಸ್ಥಾಪಿಸಿದರು. ಈ ಪ್ರಶಸ್ತಿಯನ್ನು ಪ್ರಪ್ರಥಮವಾಗಿ 1965ರಲ್ಲಿ ಮಲೆಯಾಳಂ ಲೇಖಕ ಜಿ. ಶಂಕರ ಕುರುಪರಿಗೆ ಪ್ರದಾನ ಮಾಡಲಾಯಿತು. ವಿಜೇತರಿಗೆ ಪ್ರಶಸ್ತಿ ಫಲಕ, 11 ಲಕ್ಷ ರೂಪಾಯಿ ಚೆಕ್ ಹಾಗೂ ವಾಗ್ದೇವಿಯ ಕಂಚಿನ ವಿಗ್ರಹವನ್ನು ನೀಡಿ ಗೌರವಿಸಲಾಗುವುದು.

ಈ ಪ್ರಶಸ್ತಿಯನ್ನು ಸರಕಾರ ನೀಡುತ್ತದೆ ಎಂಬ ತಪ್ಪು ಕಲ್ಪನೆಯೂ ವ್ಯಾಪಕವಾಗಿದೆ. ವಾಸ್ತವದಲ್ಲಿ ಈ ಪ್ರಶಸ್ತಿಯನ್ನು ನೀಡುವವರು ಜ್ಞಾನಪೀಠ ಟ್ರಸ್ಟ್. ಟೈಂಸ್ ಆಫ್ ಇಂಡಿಯಾದ ಒಡೆತನವನ್ನು ಹೊಂದಿರುವ ಜೈನ್ ಕುಟುಂಬ ಜ್ಞಾನಪೀಠ ಟ್ರಸ್ಟ್ ನ ಸ್ಥಾಪಕರು. ಈಗಲೂ ಅದರ ಸದಸ್ಯರಲ್ಲಿ ಹೆಚ್ಚಿನವರು ಈ ಕುಟುಂಬಕ್ಕೆ ಸೇರಿದ್ದಾರೆ.

1982 ರಿಂದ, ಈ ಪ್ರಶಸ್ತಿಯನ್ನು ಭಾರತೀಯ ಸಾಹಿತ್ಯಕ್ಕೆ ಸಮಗ್ರ ಕೊಡುಗೆಯನ್ನು ನೀಡಿದ ಲೇಖಕರಿಗೆ ಸಂದಾಯವಾಗುತ್ತಿದೆ. ಈವರೆಗೆ ಹಿಂದಿ ಸಾಹಿತಿಗಳು ಹತ್ತು ಪ್ರಶಸ್ತಿಗಳನ್ನು ಪಡೆದು ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆಯನ್ನಾಗಿ ಮಾಡಿದ್ದಾರೆ. ಕನ್ನಡ ಭಾಷೆಯು ಎಂಟು ಪ್ರಶಸ್ತಿಯನ್ನು ಪಡೆದು ಎರಡನೆ ಸ್ಥಾನದಲ್ಲಿದೆ. 1982ರಿಂದ ಒಂದು ಕೃತಿಯ ಬದಲಿಗೆ ಸಮಗ್ರ ಸಾಹಿತ್ಯದ ಕೊಡುಗೆಯನ್ನು ಗಮನಿಸಿ ನೀಡಲಾಗುತ್ತಿದೆ.

### ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ

1965 : ಜಿ. ಶಂಕರ ಕುರುಪ್ – ಮಲಯಾಳಂ – ಓಡಕ್ಕುಳಲ್

1966 : ತಾರಾಶಂಕರ ಬಂದೋಪಾಧ್ಯಾಯ – ಬೆಂಗಾಲಿ – ಗಣದೇವತಾ

1967 : ಉಮಾಶಂಕರ್ ಜೋಶಿ – ಗುಜರಾತಿ – ನಿಶಿತಾ

1967 : ಕುವೆಂಪು – ಕನ್ನಡ – ಶ್ರೀ ರಾಮಾಯಣ ದರ್ಶನಂ

1968 : ಸುಮಿತ್ರಾನಂದನ ಪಂತ್ – ಹಿಂದಿ – ಚಿದಂಬರಾ

1969 : ಫಿರಾಕ್ ಗೋರಕ್ ಪುರಿ – ಉರ್ದು – ಗುಲ್–ಎ–ನಗ್ಮಾ

1970 : ವಿಶ್ವನಾಥ ಸತ್ಯನಾರಾಯಣ – ತೆಲುಗು – ರಾಮಾಯಣ ಕಲ್ಪವೃಕ್ಷಮು

1971 : ಬಿಷ್ಣು ಡೆ – ಬೆಂಗಾಲಿ – ಸ್ಮೃತಿ ಸತ್ತಾ ಭವಿಷ್ಯತ್

1972 : ರಾಮ್‌ಧಾರಿ ಸಿಂಗ್ ದಿನಕರ್ – ಹಿಂದಿ – ಊರ್ವಶಿ

1973 : ದ. ರಾ. ಬೇಂದ್ರೆ – ಕನ್ನಡ – ನಾಕುತಂತಿ

1973 : ಗೋಪಿನಾಥ ಮೊಹಾಂತಿ – ಒಡಿಯಾ – ಮತಿಮತಾಲ್

1974 : ವಿ. ಎಸ್. ಖಾಂಡೇಕರ್ – ಮರಾಠಿ – ಯಯಾತಿ

1975 : ಪಿ. ವಿ. ಅಖಿಲನ್ – ತಮಿಳು – ಚಿತ್ರಪ್ಪಾವೈ
1976 : ಆಶಾಪೂರ್ಣ ದೇವಿ – ಬೆಂಗಾಲಿ – ಪ್ರಥಮ್ ಪ್ರತಿಶ್ರುತಿ
1977 : ಕೆ. ಶಿವರಾಮ ಕಾರಂತ – ಕನ್ನಡ – ಮೂಕಜ್ಜಿಯ ಕನಸುಗಳು
1978 : ಸಚ್ಚಿದಾನಂದ ವಾತ್ಸಾಯನ – ಹಿಂದಿ – ಕಿತ್ನೀ ನಾವೋಂ ಮೇಂ ಕಿತ್ನೀ ಬಾರ್
1979 : ಬೀರೇಂದ್ರ ಕುಮಾರ್ ಭಟ್ಟಾಚಾರ್ಯ – ಅಸ್ಸಾಮಿ – ಮೃತ್ಯುಂಜಯ್
1980 : ಎಸ್. ಕೆ. ಪೊಟ್ಟೆಕ್ಕಾಟ್ – ಮಲಯಾಳಂ – ಒರು ದೇಸದಿಂಟೆ ಕಥಾ
1981 : ಅಮೃತಾ ಪ್ರೀತಮ್ – ಪಂಜಾಬಿ – ಕಾಗಜ್ ತೆ ಕ್ಯಾನ್ವಾಸ್
1982 : ಮಹಾದೇವಿ ವರ್ಮಾ – ಹಿಂದಿ – ಸಮಗ್ರ ಸಾಹಿತ್ಯ
1983 : ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಕನ್ನಡ – ಚಿಕ್ಕವೀರ ರಾಜೇಂದ್ರ
1984 : ತಕಳಿ ಶಿವಶಂಕರ ಪಿಳ್ಳೈ – ಮಲಯಾಳಂ – ಸಮಗ್ರ ಸಾಹಿತ್ಯ
1985 : ಪನ್ನಾಲಾಲ್ ಪಟೇಲ್ – ಗುಜರಾತಿ – ಸಮಗ್ರ ಸಾಹಿತ್ಯ
1986 : ಸಚ್ಚಿದಾನಂದ ರಾವುತರಾಯ್ – ಒಡಿಯಾ – ಸಮಗ್ರ ಸಾಹಿತ್ಯ
1987 : ವಿ. ವಿ. ಶಿರ್ವಾಡ್ಕರ್ – ಮರಾಠಿ – ಸಮಗ್ರ ಸಾಹಿತ್ಯ
1988 : ಸಿ. ನಾರಾಯಣ ರೆಡ್ಡಿ – ತೆಲುಗು – ಸಮಗ್ರ ಸಾಹಿತ್ಯ
1989 : ಕುರ್ರಾತುಲೈನ್ ಹೈದರ್ – ಉರ್ದು – ಸಮಗ್ರ ಸಾಹಿತ್ಯ
1990 : ವಿ. ಕೃ. ಗೋಕಾಕ – ಕನ್ನಡ – ಸಮಗ್ರ ಸಾಹಿತ್ಯ
1991 : ಸುಭಾಷ್ ಮುಖ್ಯೋಪಾಧ್ಯಾಯ – ಬೆಂಗಾಲಿ – ಸಮಗ್ರ ಸಾಹಿತ್ಯ
1992 : ನರೇಶ್ ಮೆಹ್ತಾ – ಹಿಂದಿ – ಸಮಗ್ರ ಸಾಹಿತ್ಯ
1993 : ಸೀತಾಕಾಂತ್ ಮಹಾಪಾತ್ರ – ಒಡಿಯಾ – ಸಮಗ್ರ ಸಾಹಿತ್ಯ
1994 : ಯು. ಆರ್. ಅನಂತಮೂರ್ತಿ – ಕನ್ನಡ – ಸಮಗ್ರ ಸಾಹಿತ್ಯ
1995 : ಎಂ. ಟಿ. ವಾಸುದೇವನ್ ನಾಯರ್ – ಮಲಯಾಳಂ – ಸಮಗ್ರ ಸಾಹಿತ್ಯ
1996 : ಮಹಾಶ್ವೇತಾ ದೇವಿ – ಬೆಂಗಾಲಿ – ಸಮಗ್ರ ಸಾಹಿತ್ಯ
1997 : ಅಲಿ ಸರ್ದಾರ್ ಜಾಫ್ರಿ – ಉರ್ದು – ಸಮಗ್ರ ಸಾಹಿತ್ಯ
1998 : ಗಿರೀಶ್ ಕಾರ್ನಾಡ್ – ಕನ್ನಡ – ಸಮಗ್ರ ಸಾಹಿತ್ಯ
1999 : ನಿರ್ಮಲ್ ವರ್ಮ – ಹಿಂದಿ – ಸಮಗ್ರ ಸಾಹಿತ್ಯ
1999 : ಗುರುದಯಾಳ್ ಸಿಂಗ್ – ಪಂಜಾಬಿ – ಸಮಗ್ರ ಸಾಹಿತ್ಯ
2000 : ಇಂದಿರಾ ಗೋಸ್ವಾಮಿ – ಅಸ್ಸಾಮಿ – ಸಮಗ್ರ ಸಾಹಿತ್ಯ
2001 : ರಾಜೇಂದ್ರ ಕೆ. ಶಾ – ಗುಜರಾತಿ – ಸಮಗ್ರ ಸಾಹಿತ್ಯ
2002 : ಡಿ. ಜಯಕಾಂತನ್ – ತಮಿಳು – ಸಮಗ್ರ ಸಾಹಿತ್ಯ

2003 : ವಿಂದಾ ಕರಂದೀಕರ್ – ಮರಾಠಿ – ಸಮಗ್ರ ಸಾಹಿತ್ಯ
2004 : ರೆಹಮಾನ್ ರಾಹಿ – ಕಾಶ್ಮೀರಿ – ಸಮಗ್ರ ಸಾಹಿತ್ಯ
2005 : ರವೀಂದ್ರ ಕೇಳೇಕರ್ – ಕೊಂಕಣಿ – ಸಮಗ್ರ ಸಾಹಿತ್ಯ
2006 : ಸತ್ಯವ್ರತ ಶಾಸ್ತ್ರಿ – ಸಂಸ್ಕೃತ – ಸಮಗ್ರ ಸಾಹಿತ್ಯ
2007 : ಒ. ಎನ್. ವಿ. ಕುರುಪ್ – ಮಲಯಾಳಂ – ಸಮಗ್ರ ಸಾಹಿತ್ಯ
2008 : ಅಖ್ಲಾಕ್ ಮೊಹಮ್ಮದ್ ಖಾನ್ ಶಹರ್ಯಾರ್ – ಉರ್ದು – ಸಮಗ್ರ ಸಾಹಿತ್ಯ
2009 : ಅಮರ್ ಕಾಂತ್ – ಹಿಂದಿ – ಸಮಗ್ರ ಸಾಹಿತ್ಯ
2009 : ಶ್ರೀ ಲಾಲ್ ಶುಕ್ಲ – ಹಿಂದಿ – ಸಮಗ್ರ ಸಾಹಿತ್ಯ
2010 : ಚಂದ್ರಶೇಖರ ಕಂಬಾರ – ಕನ್ನಡ – ಸಮಗ್ರ ಸಾಹಿತ್ಯ
2011 : ಪ್ರತಿಭಾ ರೇ – ಒಡಿಯಾ – ಸಮಗ್ರ ಸಾಹಿತ್ಯ
2012 : ರಾವೂರಿ ಭರದ್ವಾಜ – ತೆಲುಗು – ಸಮಗ್ರ ಸಾಹಿತ್ಯ
2013 : ಕೇದಾರನಾಥ್ ಸಿಂಗ್ – ಹಿಂದಿ – ಸಮಗ್ರ ಸಾಹಿತ್ಯ
2014 : ಭಾಲಚಂದ್ರ ನೇಮಾಡೆ – ಮರಾಠಿ – ಸಮಗ್ರ ಸಾಹಿತ್ಯ
2015 : ರಘುವೀರ್ ಚೌಧರಿ – ಗುಜರಾತಿ – ಸಮಗ್ರ ಸಾಹಿತ್ಯ
2016 : ಶಂಖ ಘೋಷ್ – ಬೆಂಗಾಲಿ – ಸಮಗ್ರ ಸಾಹಿತ್ಯ
2017 : ಕೃಷ್ಣಾ ಸೋಬ್ತಿ – ಹಿಂದಿ – ಸಮಗ್ರ ಸಾಹಿತ್ಯ
2018 : ಅಮಿತಾವ್ ಘೋಷ್ – ಇಂಗ್ಲಿಷ್ – ಸಮಗ್ರ ಸಾಹಿತ್ಯ
2019 : ಅಕ್ಕಿತಂ ಅಚ್ಯುತನ್ ನಂಬೂದಿರಿ – ಮಲಯಾಳಂ – ಸಮಗ್ರ ಸಾಹಿತ್ಯ
2020 : ನೀಲಮಣಿ ಫೂಕನ್ – ಅಸ್ಸಾಮಿ – ಸಮಗ್ರ ಸಾಹಿತ್ಯ
2021 : ದಾಮೋದರ ಮೌಜೋ – ಕೊಂಕಣಿ – ಸಮಗ್ರ ಸಾಹಿತ್ಯ

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರು:**

**ಕುವೆಂಪು:**

ಕನ್ನಡಕ್ಕೆ ಮೊಟ್ಟಮೊದಲು ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು ಕೆ.ವಿ. ಪುಟ್ಟಪ್ಪನವರು. ಇವರು 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರು. ಇವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಇವರ "ಶ್ರೀ ರಾಮಾಯಣ ದರ್ಶನಂ" ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ 1968 ರಲ್ಲಿ 'ಜ್ಞಾನಪೀಠ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು. ಕುವೆಂಪುರವರು ಜಲಗಾರ, ಸ್ಮಶಾನಕುರುಕ್ಷೇತ್ರ, ಶೂದ್ರತಪಸ್ವಿ, ಬೆರಳ್‌ಗೆ ಕೊರಳ್, ಅವರು ರಚಿಸಿದ ಜನಪ್ರಿಯ ನಾಟಕಗಳು. ಪಾಂಚಜನ್ಯ, ಪಕ್ಷಿಕಾಶಿ, ನವಿಲು, ಮುಂತಾದುವುಗಳು ಅವರ ಕವನ ಸಂಕಲನಗಳು. ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಗಳನ್ನೂ ಸಹ ರಚಿಸಿದ್ದಾರೆ. 'ನೆನಪಿನ ದೋಣಿ' ಇವರ ಆತ್ಮಕಥೆ.

**ದ. ರಾ. ಬೇಂದ್ರೆ:**

ಅಂಬಿಕಾತನಯ ದತ್ತ ಎಂಬ ಕಾವ್ಯನಾಮ ಹೊಂದಿದ್ದ ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ. ಬೇಂದ್ರೆ)ಯವರು ಧಾರವಾಡದಲ್ಲಿ 1886ರ ಜನವರಿ 31ರಂದು ಜನಿಸಿದರು. "ನಾಕುತಂತಿ" ವರಕವಿ ದ. ರಾ. ಬೇಂದ್ರೆಯವರ ಕವನ ಸಂಕಲನ. ಇದಕ್ಕಾಗಿ ಬೇಂದ್ರೆಯವರಿಗೆ 1973ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರಕಿತು. ಅಂಬಿಕಾತನಯ ದತ್ತರ ಪ್ರಮುಖ ಕೃತಿಗಳೆಂದರೆ ಕೃಷ್ಣಕುಮಾರಿ, ಗರಿ, ನಾಕುತಂತಿ, ಸಖಿಗೀತ, ನಾದಲೀಲೆ, ಉಯ್ಯಾಲೆ, ಅರಳುಮರಳು, ನಾಕುತಂತಿ, ಬಾ ಹತ್ತಿರ, ಸೂರ್ಯಪಾನ, ಮೂರ್ತಿ ಮತ್ತು ಕಾಮಕಸ್ತೂರಿ, ಹೃದಯ ಸಮುದ್ರ, ಮುಕ್ತ ಕಂಠ, ಸಂಚಯ, ಉತ್ತರಾಯಣ ಮುಂತಾದ ಕವನ ಸಂಗ್ರಹಗಳು. ಬಾಲಬೋಧೆ, ಪರಾಕಿ, ಕಾವ್ಯ ವೈಖರಿ ಮುಂತಾದ 20ಕ್ಕೂ ಅಧಿಕ ಗದ್ಯ ಬರಹ ಸಂಗ್ರಹಗಳು. ಸಾಹಿತ್ಯವಿಮರ್ಶೆ, ಸಾಹಿತ್ಯ ಸಂಶೋಧನೆ, ವಿಚಾರ ಮಂಜರಿ, ಮುಂತಾದ ಹಲವು ಸಾಹಿತ್ಯ ಗ್ರಂಥಗಳನ್ನು ರಚಿಸಿದ್ದಾರೆ.

**ಶಿವರಾಮ ಕಾರಂತ:**

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಸಮೀಪದ ಕೋಟದಲ್ಲಿ 1902 ಅಕ್ಟೋಬರ್ 10 ರಂದು ಜನಿಸಿದ್ದ ಶಿವರಾಮ ಕಾರಂತರು, ಪ್ರೌಢಶಿಕ್ಷಣವನ್ನಷ್ಟೇ ಪಡೆದಿದ್ದರು. ಇವರ 'ಮೂಕಜ್ಜಿ ಕನಸುಗಳು' ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು ಶ್ರೇಷ್ಠ ಕಾದಂಬರಿಕಾರ, ಕಲಾವಿದ, ಅಲೆಮಾರಿ, ಪತ್ರಕರ್ತ, ಪರಿಸರವಾದಿ, ಸಿನಿಮಾ ನಿರ್ಮಾಪಕರಾಗಿ, ನೃತ್ಯಪಟುವಾಗಿ, ಛಾಯಾಗ್ರಾಹಕರಾಗಿ ಹೀಗೆ ಸಾಹಿತ್ಯ–ಸಂಸ್ಕೃತಿಯ ಹತ್ತು ಹಲವು ಪ್ರಕಾರಗಳಲ್ಲಿ ಕೈಯಾಡಿಸಿ, ನಡೆದಾಡುವ ವಿಶ್ವಕೋಶ ಎಂದೇ ಖ್ಯಾತಿಗಳಿಸಿದ್ದರು.

**ಮಾಸ್ತಿ ವೆಂಕಟೇಶ ಅಯ್ಯಂಗಾರ:**

ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರಲ್ಲೊಬ್ಬರಾದ 'ಸಣ್ಣಕಥೆಗಳ ಜನಕ' ಎಂದೇ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಸುಪ್ರಸಿದ್ಧರಾಗಿದ್ದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಂತೂ 'ಮಾಸ್ತಿ ಕನ್ನಡದ ಆಸ್ತಿ' ಎಂಬ ನುಡಿಗಟ್ಟಿಗೆ ಪಾತ್ರರಾಗಿದ್ದರು. ಇವರಿಗೆ ಮೈಸೂರು ಅರಸರು 'ರಾಜಸೇವಾಸಕ್ತ' ಎಂಬ ಬಿರುದನ್ನು ನೀಡಿದರು. ಮಾಸ್ತಿಯವರ ಪ್ರಮುಖ ಕೃತಿಗಳಲ್ಲೊಂದು 'ಚಿಕ್ಕವೀರ ರಾಜೇಂದ್ರ' ಕಾದಂಬರಿ. ಇನ್ನೊಂದು 'ಚೆನ್ನಬಸವ ನಾಯಕ', ರಾಜವಂಶಗಳ ಉನ್ನತಿ ಅವನತಿಗಳು ಇವುಗಳ ಕಾಥಾವಸ್ತು. ಮಾಸ್ತಿಯವರ ಇತರ ಕೃತಿಗಳೆಂದರೆ ಶೇಷಮ್ಮ, ಸುಬ್ಬಣ್ಣ ಮುಂತಾದ ದೊಡ್ಡ ಕಥೆಗಳು. ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು, ಸುನೀತಾ, ಬಿನ್ನಹ, ತಾವರೆ, ಮಲಾರ, ಚೆಲುವು, ಸಂಕ್ರಾಂತಿ, ಮಾನವ ಇತ್ಯಾದಿ ಕಾವ್ಯಪ್ರಕಾರದ ಕೃತಿಗಳು.

**ಡಾ. ವಿ. ಕೃ. ಗೋಕಾಕ್:**

ಕನ್ನಡ ಸಾಹಿತ್ಯಲೋಕದ ದಿಗ್ಗಜರಲ್ಲಿ ಡಾ. ವಿ. ಕೃ. ಗೋಕಾಕ್ ಒಬ್ಬರು. ಇವರು ಸಾಹಿತ್ಯ ಕ್ಷೇತ್ರದಲ್ಲಿಯಂತೆಯೇ ಭಾಷಾ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದವರು. ವಿನಾಯಕ ಕೃಷ್ಣ ಗೋಕಾಕ್ ಅವರು ವಿ. ಕೃ. ಗೋಕಾಕ್ ಎಂದೇ ಸುಪರಿಚಿತರಾಗಿದ್ದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಡಾ. ವಿ. ಕೃ. ಗೋಕಾಕರಿಗೆ ಭಾರತದ ಶ್ರೇಷ್ಠತಮ ಸಾಹಿತ್ಯ ಪ್ರಶಸ್ತಿಯಾದ ಜ್ಞಾನಪೀಠ (1990)

ಲಭಿಸಲು ಕಾರಣವಾದ ಕೃತಿ 'ಭಾರತ ಸಿಂಧುರಶ್ಮಿ' ಎಂಬ ಮಹಾಕಾವ್ಯ. ಈ ಮಹಾಕಾವ್ಯವು ಎರಡು ಸಂಪುಟಗಳಲ್ಲಿದ್ದು, 12 ಖಂಡಗಳನ್ನು ಹೊಂದಿದೆ.

**ಡಾ. ಯು. ಆರ್. ಅನಂತಮೂರ್ತಿ:**

ಕನ್ನಡಕ್ಕೆ ಆರನೆಯ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು ಡಾ. ಯು.ಆರ್. ಅನಂತಮೂರ್ತಿಯವರು. ಅನಂತಮೂರ್ತಿಯವರು ಸಣ್ಣಕತೆಗಾರರಾಗಿ ಹಾಗೂ ಕಾದಂಬರಿಕಾರರಾಗಿ ಪ್ರಸಿದ್ಧರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. 1955ರಲ್ಲಿ 'ಎಂದೆಂದೂ ಮುಗಿಯದ ಕತೆ' ಎಂಬ ಕಥಾಸಂಕಲನದಿಂದ ಅವರ ಸಾಹಿತ್ಯ ಕೃಷಿ ಆರಂಭವಾಯಿತು. ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ, ಐದು ದಶಕಗಳ ಕಥೆಗಳು. ಇವು ಇವರ ಕಥಾಸಂಕಲನಗಳು. ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ, ದಿವ್ಯ, ಇವರ ಕಾದಂಬರಿಗಳು. ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಬೆತ್ತಲೆ ಪೂಜೆ ಯಾಕೆ ಕೂಡದು, ಇವುಗಳು ವಿಮರ್ಶೆಗಳು. ಹದಿನೈದು ಪದ್ಯಗಳು, ಅಜ್ಜನ ಹೆಗಲ ಸುಕ್ಕುಗಳು, ಮಿಥುನ ಇವರ ಕವನಸಂಕಲನಗಳು.

**ಗಿರೀಶ್ ಕಾರ್ನಾಡ:**

ಗಿರೀಶ್ ಕಾರ್ನಾಡರು 1938ರ ಮೇ 19ರಂದು ಮಹಾರಾಷ್ಟ್ರದ ಮಾಥೆರ್ನ ಎಂಬಲ್ಲಿ ಜನಿಸಿದರು. ಗಿರೀಶರ ಮೊದಲನೆ ಕೃತಿ 'ಯಾಯಾತಿ' ಎಂಬ ನಾಟಕ. ಈ ನಾಟಕವು ಇವರಿಗೆ ದೊಡ್ಡಮಟ್ಟದಲ್ಲಿ ಪ್ರಶಂಸೆ ಮತ್ತು ಪ್ರಚಾರವನ್ನು ತಂದುಕೊಟ್ಟಿತು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಹಿಟ್ಟಿನಹುಂಜ ಮತ್ತು ಅಗ್ನಿ ಹಾಗೂ ಮಳೆ ಇವು ಪೌರಣಿಕ ನಾಟಕಗಳಾದರೆ, ತುಘಲಕ್, ತಲೆದಂಡ ಹಾಗೂ ಟೀಪುಸುಲ್ತಾನ್ ನಾಟಕಗಳು ಐತಿಹಾಸಿಕ ಹಿನ್ನಲೆಯುಳ್ಳವು. ಜಾನಪದ ವಸ್ತುಗಳನ್ನು ಒಳಗೊಂಡ ನಾಟಕಗಳು ಹಯವದನ, ನಾಗಮಂಡಲ. ಸಾಮಾಜಿಕ ನಾಟಕ ಅಂಜುಮಲ್ಲಿಗೆ, ಗಿರೀಶ್ ಕಾರ್ನಾಡ್‌ರ ನಾಟಕಗಳು ಇಂಗ್ಲಿಷ್, ಹಿಂದಿ, ಮರಾಠಿ ಹಾಗೂ ಇತರೇ ಭಾರತೀಯ ಭಾಷೆಗಳಲ್ಲಿ ಪ್ರದರ್ಶನಗೊಂಡಿವೆ. ನಾಟಕಗಳ ರಚನೆಯ ಜೊತೆಗೆ ಇವರು ರಂಗಭೂಮಿಯಲ್ಲಿ ಹಾಗೂ ಚಲನಚಿತ್ರ ರಂಗಗಳಲ್ಲಿ ಅಭಿನಯ ಮತ್ತು ನಿರ್ದೇಶಕರಾಗಿ ಜನಪ್ರಿಯರಾಗಿದ್ದಾರೆ.

**ಡಾ. ಚಂದ್ರಶೇಖರ ಕಂಬಾರ:**

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ 2 ಜನವರಿ 1937ರಂದು ಡಾ. ಚಂದ್ರಶೇಖರ ಕಂಬಾರರು ಜನಿಸಿದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಕಂಬಾರರು ರಚಿಸಿರುವ ಪ್ರಮುಖ ಕೃತಿಗಳೆಂದರೆ, ಮುಗುಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು, ಬೆಳ್ಳಿಮೀನು, ಅಕ್ಕುಕ್ಕು ಹಾಡುಗಳೆ, ಚಕೋರಿ ಇವು ಕಾವ್ಯಗಳು. ನಾಟಕಗಳು – ಬೆಂಬತ್ತಿದ ಕಣ್ಣು, ನಾರ್ಸಿಸಸ್, ಜೋಕುಮಾರ ಸ್ವಾಮಿ, ಚಾಳೇಶ, ಕಿಟ್ಟಿಯ ಕತೆ, ಜೈಸಿದ ನಾಯಕ, ಕಾಡು ಕುದುರೆ, ನಾಯೀ ಕತೆ ಮುಂತಾದುವು. ಕಾದಂಬರಿ – ಅಣ್ಣ ತಂಗಿ, ಕರಿಮಾಯಿ, ಜೀಕೆ ಮಾಸ್ತರ ಪ್ರಣಯ ಪ್ರಸಂಗ, ಸಿಂಗಾರೆವ್ವಾ ಮತ್ತು ಅರಮನೆ. ಜಾನಪದ– ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಸಂಗ್ಯಾಬಾಳ್ಯಾ, ಬಣ್ಣಿಸಿ ಹಾಡವ್ವ ನನ ಬಳಗ, ಬಯಲಾಟಗಳು, ಮಾತಡೋ ಲಿಂಗವೇ ಮುಂತಾದವುಗಳು.

***

## ಏಕಾಗ್ರತೆಯ ಮಹತ್ವ

– ಪ್ರೇಮಾ ಬಿ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಒಮ್ಮೆ ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೊ ಪಟ್ಟಣದ ನದಿಯ ತೀರದಲ್ಲಿ ವಿಹರಿಸುತ್ತಿದ್ದರು. ಆಗ ಅವರಿಗೆ ಕೆಲವು ಹುಡುಗರು ಕೋವಿಯನ್ನು ಹಿಡಿದು ನದಿಯಲ್ಲಿ ತೇಲುತ್ತಿರುವ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು ಪ್ರಯತ್ನಿಸುತ್ತಿರುವುದು ಕಂಡಿತು. ಆದರೆ ಅಲೆಗಳಿಂದ ಮೊಟ್ಟೆಯ ಚಿಪ್ಪು ಮೇಲೆ ಕೆಳಗೆ ತಿರುಗುತ್ತಿದ್ದರಿಂದ ಅವರಿಗೆ ಗುರಿಯಿಡಲು ಸಾಧ್ಯವಾಗಲ್ಲಿಲ್ಲ. ಬಹಳಷ್ಟು ಬಾರಿ ಪ್ರಯತ್ನಿಸಿಯೂ ಅವರಿಂದ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು ಸಾಧ್ಯವಾಗಲಿಲ್ಲ.

ಸ್ವಾಮಿ ವಿವೇಕಾನಂದರು ಅವರ ಆಟವನ್ನು ಕುತೂಹಲದಿಂದ ನಿಂತು ನೋಡುತ್ತಿದ್ದರು. ಆಗ ಹುಡುಗರು ಅವರನ್ನು ನೋಡಿ "ಸರ್, ನೀವು ನಮ್ಮನ್ನು ಆಗಿನಿಂದ ನೋಡುತ್ತಿದ್ದೀರಿ, ನೀವು ಒಂದು ಬಾರಿ ಪ್ರಯತ್ನಿಸುವಿರೇ?" ಎಂದು ಕೇಳಿದರು. ಸ್ವಾಮಿ ವಿವೇಕಾನಂದರು ನಗುತ್ತ ತಾನು ಪ್ರಯತ್ನಿಸಲು ಇಚ್ಛಿಸುವುದಾಗಿ ತಿಳಿಸಿದರು. ಸ್ವಾಮಿಗಳು ಬಂದೂಕನ್ನು ಕೈಗೆತ್ತಿಕೊಂಡು ಮೊಟ್ಟೆಯ ಚಿಪ್ಪಿಗೆ ಗುರಿಯಿಟ್ಟು ಅದನ್ನು ಸ್ವಲ್ಪ ಸಮಯ ಏಕಾಗ್ರತೆಯಿಂದ ನೋಡಿದರು. ಅನಂತರ ಅವರು 12 ಬಾರಿ ಗುಂಡು ಹೊಡೆದಾಗ ಪ್ರತಿಬಾರಿಯೂ ಅದು ಒಂದೊಂದು ಮೊಟ್ಟೆಯ ಚಿಪ್ಪಿಗೆ ತಗುಲಿತು!

ಸ್ವಾಮೀಜಿಯ ಕೌಶಲ್ಯವನ್ನು ಕಂಡು ಮಕ್ಕಳು ಅಚ್ಚರಿಗೊಂಡು ಸ್ವಾಮಿ ವಿವೇಕಾನಂದರ ಬಳಿ ಹೋಗಿ 'ನೀವು ಇದನ್ನು ಹೇಗೆ ಮಾಡಿದಿರಿ?' ಎಂದು ಕೇಳಿದರು. ಅದಕ್ಕೆ ವಿವೇಕಾನಂದರು ನಗುತ್ತ 'ನಾನು ಎಂದಿಗೂ ಬಂದೂಕಿನಿಂದ ಗುರಿ ಇಡಲಿಲ್ಲ' ಎಂದು ಹೇಳುತ್ತಾರೆ. ಆಗ ಹುಡುಗರು 'ಹಾಗಿದ್ದರೆ ನೀವು ಇಷ್ಟು ಒಳ್ಳೆಯ ರೀತಿಯಲ್ಲಿ ಹೇಗೆ ಗುರಿ ಇಟ್ಟಿರಿ?' ಎಂದು ಕೇಳುತ್ತಾರೆ. ಅದಕ್ಕೆ ಸ್ವಾಮಿ ವಿವೇಕಾನಂದರು 'ನಿಮಗೆ ಒಂದು ರಹಸ್ಯವನ್ನು ಹೇಳುತ್ತೇನೆ. ನೀವು ಏನೇ ಮಾಡಿದರೂ ಬೇರೆ ಯಾವುದರ ಬಗ್ಗೆಯೂ ಯೋಚಿಸದೇ ನಿಮ್ಮ ಸಂಪೂರ್ಣ ಗಮನವನ್ನು ಅದರ ಮೇಲೆ ಕೇಂದ್ರೀಕರಿಸಿರಿ. ನೀವು ಬಂದೂಕಿನಿಂದ ಗುರಿಯಿಡುತ್ತಿದ್ದಲ್ಲಿ ನಿಮ್ಮ ಮನಸ್ಸನ್ನು ಗುರಿಯ ಮೇಲೆ ಕೇಂದ್ರೀಕರಿಸಿರಿ. ನಿಮ್ಮ ಗುರಿ ತಪ್ಪುವುದಿಲ್ಲ. ಏಕಾಗ್ರತೆಯಿಂದ ಅದ್ಭುತಗಳನ್ನು ಸಾಧಿಸಬಹುದು. ನಾವು ಓದುವಾಗಲೂ ಕೈಯಲ್ಲಿರುವ ಪಾಠದ ಬಗ್ಗೆಯೇ ವಿಚಾರ ಮಾಡಬೇಕು. ಆಗಲೇ ನೀವು ಓದಿರುವ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು.' ಎಂದು ಹೇಳಿದರು.

ನೀತಿ: ಏಕಾಗ್ರತೆ ಅಂದರೆ ಗುರಿಯನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ವಿಚಾರ ಮಾಡದಿರುವುದು. ಸತತ ವಿಚಾರ ಮಾಡುವುದು ಹಾಗೂ ಚಂಚಲತೆಯು ಮನಸ್ಸಿನ ಗುಣಧರ್ಮವಾಗಿರುವುದರಿಂದ ಏಕಾಗ್ರತೆಯನ್ನು ಗಳಿಸುವುದು ಕಷ್ಟಕರವಾಗಿದೆ. ಪ್ರತಿದಿನ ದೇವರ ನಾಮಸ್ಮರಣೆಯನ್ನು ಮಾಡುವುದರಿಂದ ಮನಸ್ಸನ್ನು ಏಕಾಗ್ರತೆಗೊಳಿಸಲು ಸಹಾಯವಾಗುತ್ತದೆ.

***

## ಕನ್ನಡ ನಾಡಿನ ವೀರ ವನಿತೆ ಕೆಳದಿಯ ಚೆನ್ನಮ್ಮ

– ಪದ್ಮಾ ಗಿರಿಯಣ್ಣನವರ ಮತ್ತು
ರಚನಾ ಹೆಚ್ ಎಸ್., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಕೆಳದಿಯ ಚನ್ನಮ್ಮ ಕ್ರಿ.ಶ. 1672 ರಿಂದ ಕ್ರಿ.ಶ. 1697ರವರೆಗೆ ಕೆಳದಿ ಸಂಸ್ಥಾನವನ್ನು ಆಳಿದ ವೀರ ಮಹಿಳೆ. ರಾಣಿ ಚೆನ್ನಮ್ಮ ಛತ್ರಪತಿ ಶಿವಾಜಿಯ ಎರಡನೆಯ ಮಗನಾದ ರಾಜರಾಮನಿಗೆ ನೀಡಿದ ಆಶ್ರಯ ಮತ್ತು ಅದರ ಪರಿಣಾಮವಾಗಿ ಯುದ್ಧಕ್ಕೆ ಬಂದ ಔರಂಗಜೇಬನ ಸೈನ್ಯವನ್ನು ಸೋಲಿಸಿದ್ದು ಅವಳ ಆಳ್ವಿಕೆಯ ಅತ್ಯಂತ ಮಹತ್ವದ ಸಂಗತಿಗಳು. ತನ್ನ ಸ್ಥಿರ ಸಂಕಲ್ಪ, ದೂರದೃಷ್ಟಿ ಹಾಗೂ ಕಲಿತನಗಳಿಂದ ಇಕ್ಕೇರಿ ಸಂಸ್ಥಾನವನ್ನು ವಿಪತ್ತಿನಿಂದ ಪಾರು ಮಾಡಿದಳೆಂದು ಚೆನ್ನಮ್ಮ ಪ್ರಸಿದ್ಧಳಾಗಿದ್ದಾಳೆ.

**ಆಳ್ವಿಕೆ :**

ಚೆನ್ನಮ್ಮನು ಕೋಟಿಪುರದ ಸಿದ್ದಪ್ಪಶೆಟ್ಟರ ಮಗಳು ಹಾಗು ಒಂದನೆಯ ಸೋಮಶೇಖರನಾಯಕನ (1664–1679) ಮಡದಿ. ಲಿಂಗಣ್ಣಕವಿಯ ಕೆಳದಿನೃಪವಿಜಯ ಎಂಬ ಗ್ರಂಥ ಹಾಗೂ ಇತರ ಆಧಾರಗಳಿಂದ ಚೆನ್ನಮ್ಮನ ಆಳ್ವಿಕೆಯ ಮುಖ್ಯ ಘಟನೆಗಳು ತಿಳಿದು ಬರುತ್ತವೆ. ಕೆಳದಿ (ಈಗ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿದೆ)ಯ ರಾಜ ಸೋಮಶೇಖರ ನಾಯಕ ಪ್ರಾರಂಭದಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರೂ ದುರ್ಜನರ ಸಹವಾಸದಿಂದ ದುಶ್ಚಟಗಳಿಗೆ ಬಲಿಯಾಗಿ ಮತಿವಿಕಲನಾಗಿ ಕೊನೆಗೆ 1671ರಲ್ಲಿ ಕೊಲೆಯಾದ. ಅವನಿಗೆ ಮಕ್ಕಳಿರಲಿಲ್ಲ. ಕೆಳದಿ ಸಂಸ್ಥಾನದಲ್ಲಿ ಅರಾಜಕತೆಯುಂಟಾಯಿತು. ನಾಯಕ ಮನೆತನದ ವಿರೋಧಿಗಳು ತಮಗೆ ಬೇಕಾದವನೊಬ್ಬನನ್ನು ನಾಯಕಪಟ್ಟಕ್ಕೆ ತರಲು ಹವಣಿಸಿದರು. ಅಂಥ ದುರ್ಭರ ಸನ್ನಿವೇಶದಲ್ಲಿ ಚೆನ್ನಮ್ಮ ಆಡಳಿತವನ್ನು ವಹಿಸಿಕೊಂಡು ಅಸಾಧಾರಣ ಜಾಣ್ಮೆಯಿಂದ ಸಂಸ್ಥಾನದಲ್ಲಿ ಶಾಂತಿ ಸ್ಥಾಪಿಸಿದಳು.

ಕೆಳದಿಯಲ್ಲುಂಟಾಗಿದ್ದ ದುಃಸ್ಥಿತಿಯನ್ನು ಉಪಯೋಗಿಸಿಕೊಂಡು ಬಿಜಾಪುರದ ಸುಲ್ತಾನ ಮತ್ತು ಇತರ ಪಾಳೆಯಗಾರರು ಕೆಳದಿಯನ್ನು ಕಬಳಿಸಲು ಹೊಂಚು ಹಾಕಿದ್ದರು. ವೈರಿಗಳ ಸಂಚಿನಿಂದಾಗಿ ಚೆನ್ನಮ್ಮ ಒಮ್ಮೆ ರಾಜಧಾನಿಯಿಂದ ತಲೆತಪ್ಪಿಸಿಕೊಳ್ಳಬೇಕಾಯಿತು. ಅವಳು ತನ್ನ ನೆಚ್ಚಿನ ಸಚಿವನಾದ ಗುರು ಬಸಪ್ಪದೇವ ಮತ್ತು ದಂಡನಾಯಕರಾದ ಕೃಷ್ಣಪ್ಪಯ್ಯ ಹಾಗೂ ತಿಮ್ಮರಸಯ್ಯ ಇವರ ಸಹಾಯದಿಂದ ವೈರಿಗಳನ್ನು ಸದೆಬಡಿದು ಸಂಸ್ಥಾನವನ್ನು ವಿಪತ್ತಿನಿಂದ ರಕ್ಷಿಸಿದಳು. ಮೈಸೂರು ಮತ್ತು ಕೆಳದಿಯ ಮಧ್ಯೆ ರಾಜ್ಯ ವಿಸ್ತರಣೆಗಾಗಿ ನಡೆಯುತ್ತಿದ್ದ ಯುದ್ಧಗಳು ರಾಣಿ ಚೆನ್ನಮ್ಮಾಜಿಯ ಕಾಲದಲ್ಲೂ ಮುಂದುವರಿದವು. ಚೆನ್ನಮ್ಮ ಮೈಸೂರಿನ ಒಡೆಯರ ರಾಜ್ಯವಿಸ್ತರಣಾ ಕಾರ್ಯವನ್ನು ಎದುರಿಸಿದಳು. ಆದರೂ ಪರಾಕ್ರಮಿಯಾದ ಚಿಕ್ಕದೇವರಾಜ ಒಡೆಯರ್ 1695ರ ವೇಳೆಗೆ ಕೆಳದಿಯ ಬಲವನ್ನು ಸೋಲಿಸಿ ಅರಕಲಗೂಡು, ಹಾಸನ ಪ್ರದೇಶಗಳನ್ನು ವಶಪಡಿಸಿಕೊಂಡು ಚಿಕ್ಕಮಗಳೂರು ಜಿಲ್ಲೆಯ ಸಕ್ಕರೆಪಟ್ಟಣದವರೆಗೂ ರಾಜ್ಯವನ್ನು ವಿಸ್ತರಿಸಿದ.

**ಔರಂಗಜೇಬನ ಸೈನ್ಯವನ್ನು ಸೋಲಿಸಿದ್ದು :**

ಛತ್ರಪತಿ ಶಿವಾಜಿಯ ನಿಧನದ ನಂತರ ಮರಾಠಾ ರಾಜ್ಯವನ್ನು ಕೈವಶ ಮಾಡಿಕೊಳ್ಳುವ ಉದ್ದೇಶದಿಂದ ಔರಂಗಜೇಬನು ಸಂಭಾಜಿಯನ್ನು 1689 ಮಾರ್ಚ 11ರಂದು ಕೊಲ್ಲಿಸಿದನು. ಶಿವಾಜಿಯ ಎರಡನೆಯ ಮಗ ರಾಜಾರಾಮನು ಸಕಲಬಲ ಸಂಪನ್ನನೂ ಪ್ರಬಲ ಪರಾಕ್ರಮಿಯೂ ಆದ ಮೊಗಲ್ ಬಾದಶಹ ಔರಂಗಜೇಬನ ಸೇನೆಯ ಎದುರು ಹಿಮ್ಮಟ್ಟಿ ಉತ್ತರ ಭಾರತದಲ್ಲಿಯೂ ಆಶ್ರಯ ದೊರೆಯದೆ ಬಂಧನವನ್ನು ತಪ್ಪಿಸಿಕೊಳ್ಳಲು

ದಕ್ಷಿಣಕ್ಕೆ ಓಡಿದನು. ಮೊಗಲ್ ಸೈನ್ಯಗಳು ಅವನನ್ನು ಬೆನ್ನಟ್ಟಿದುವು. ಬೆನ್ನಟ್ಟಿದ ಮೊಗಲ ಸೈನ್ಯವನ್ನು ತಪ್ಪಿಸುತ್ತ ರಾಜಾರಾಮನು ಕೆಳದಿಗೆ ಬಂದು ಚೆನ್ನಮ್ಮನ ಆಶ್ರಯ ಕೋರಿದನು. ಮೊಗಲರ ಅಜೇಯ ಬಲದ ಅರಿವಿದ್ದರೂ ಆಶ್ರಿತ ರಕ್ಷಣೆಯ ಕರ್ತವ್ಯದಿಂದ ರಾಣಿ ವಿಮುಖಳಾಗಲಿಲ್ಲ. ಅವಳು ರಾಜಾರಾಮನನ್ನು ಗೌರವಾದರಗಳಿಂದಲೂ ರಾಜೋಚಿತ ಮರ್ಯಾದೆಯಿಂದಲೂ ಬರಮಾಡಿಕೊಂಡು ಅವನಿಗೆ ಅಭಯಹಸ್ತ ನೀಡಿದಳು. ಇದರಿಂದ ಕುಪಿತನಾದ ಔರಂಗಜೇಬ್ ಕೆಳದಿಯ ವಿರುದ್ಧ ಪಡೆಯೊಂದನ್ನು ಕಳುಹಿಸಿದ. ಚೆನ್ನಮ್ಮನು ರಾಜಾರಾಮನನ್ನು ಸುರಕ್ಷಿತ ಪ್ರದೇಶಕ್ಕೆ ಕಳುಹಿಸಿಕೊಟ್ಟಳು. ಔರಂಗಜೇಬನ ಎರಡನೆಯ ಮಗ ಆಝುಮ್ ಶಹಾನ ನೇತೃತ್ವದ ವಿಶಾಲ ಸೈನ್ಯ ಕೆಳದಿಯನ್ನು ಕೈವಶ ಮಾಡಿಕೊಳ್ಳಲು ಬಂದಿತು.

1690ರಲ್ಲಿ ಕೆಳದಿ ಮತ್ತು ಮೊಗಲ್ ಸೈನ್ಯಗಳ ನಡುವೆ ಯುದ್ಧ ನಡೆಯಿತು. ಕದನದಲ್ಲಿ ಮೊಗಲ್ ಸೇನೆ ಪರಾಭವಗೊಂಡು ಪಲಾಯನ ಮಾಡಿತು. ಮೊಗಲರ ಸೋಲಿನಿಂದ ರಾಣಿ ಚೆನ್ನಮ್ಮಾಜಿಯ ಕೀರ್ತಿ ಇಡೀ ಭಾರತದಲ್ಲಿ ಹಬ್ಬಿತು. ಈ ಸಂಗತಿಯನ್ನು ಕುರಿತ ಜನಪದ ಗೀತೆಗಳು ಇಂದಿಗೂ ಕನ್ನಡನಾಡಿನಲ್ಲಿ ಪ್ರಚಾರದಲ್ಲಿವೆ. ಚನ್ನಮ್ಮ ಮೊಗಲರ ಈ ಪ್ರಚಂಡ ಸೈನ್ಯವನ್ನು ಸೋಲಿಸಿ ಅವರು ರಣರಂಗದಿಂದ ಕಾಲ್ತೆಗೆಯುವಂತೆ ಮಾಡಿದಳು. ಕಣಿವೆಗಳಲ್ಲಿ ವೈರಿಸೈನ್ಯವನ್ನು ಸಿಲುಕಿಸಿ ಔರಂಗಜೇಬನು ಒಪ್ಪಂದಕ್ಕೆ ಬರುವಂತೆ ಮಾಡಿದಳು.

**ದತ್ತು, ಮರಣ :**

ಚೆನ್ನಮ್ಮನಿಗೆ ಸಂತತಿ ಇರಲಿಲ್ಲವಾದ್ದರಿಂದ ಬಸಪ್ಪ ಎಂಬ ಕುಮಾರನನ್ನು ದತ್ತುವಾಗಿ ಸ್ವೀಕರಿಸಿದಳು. ಅವನಿಗೆ ಯುದ್ಧ ಮತ್ತು ಆಡಳಿತದಲ್ಲಿ ಶಿಕ್ಷಣ ಕೊಟ್ಟು 1696ರಲ್ಲಿ ಕೆಳದಿ ಬಸವಭೂಪಾಲನೆಂದು ಹೆಸರಿಟ್ಟು ಆಡಳಿತ ವಹಿಸಿಕೊಟ್ಟಳು. ಎರಡು ವರ್ಷಗಳ ಅನಂತರ 1698ರಲ್ಲಿ ಈಕೆ ಮರಣಹೊಂದಿದಳೆಂದು ತಿಳಿದುಬರುತ್ತದೆ.

**ದಾನ ಧರ್ಮಗಳು :**

ದಕ್ಷ ಆಡಳಿತಗಾರಳಾದ ಚೆನ್ನಮ್ಮ ಮತವಿಚಾರಗಳಲ್ಲಿ ಉದಾರ ನೀತಿ ಹೊಂದಿದ್ದಳು. ಜಂಗಮರಿಗೆ ಮಠಗಳನ್ನು ಕಟ್ಟಿಸಿಕೊಟ್ಟಳು. ತನ್ನ ಪತಿಯ ಹೆಸರಿನಲ್ಲಿ ಅನೇಕ ಅಗ್ರಹಾರಗಳನ್ನು ನಿರ್ಮಿಸಿದಳು. ಒಂದು ಅಗ್ರಹಾರವನ್ನು ತನ್ನ ಸ್ವಂತ ಹೆಸರಿನಿಂದ ಚೆನ್ನಮ್ಮಾಂಬಪುರ ಎಂಬುದಾಗಿ ಕರೆದಳು. ಕೆಳದಿಯ ವೀರಭದ್ರ ದೇವಾಲಯದ ಮುಂದಿನ ಧ್ವಜಸ್ತಂಭವನ್ನು ನೆಡಿಸಿದವಳು ಈಕೆಯೇ. ಮೂಕಾಂಬ ದೇವಾಲಯಕ್ಕೆ ಈಕೆ ವಿಶೇಷ ದಾನ ನೀಡಿದಳು. ತನ್ನ ರಾಜ್ಯದಲ್ಲಿ ಚರ್ಚುಗಳನ್ನು ನಿರ್ಮಿಸಲು ಪೋರ್ಚುಗೀಸರಿಗೆ ಅನುಮತಿ ನೀಡಿದಳು.

ಚನ್ನಮ್ಮ ಅನೇಕ ದಾನ ಧರ್ಮಗಳನ್ನು ಮಾಡಿದ್ದಾಳೆ. ಮಠಗಳನ್ನು, ದೇವಾಲಯಗಳನ್ನು ಸ್ಥಾಪಿಸಿದ್ದಾಳೆ. ಅವುಗಳಲ್ಲಿ ದತ್ತಪೀಠದಲ್ಲಿರುವ ಚಂದ್ರದ್ರೋಣ ಪರ್ವತದ ದೇವಾಲಯವೂ ಒಂದಾಗಿದೆ.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿ**

"ಉನ್ನತ ಆಲೋಚನೆಗಳಿಂದ, ಅತ್ಯುನ್ನತ ಆದರ್ಶಗಳಿಂದ ನಿಮ್ಮ ಮಿದುಳನ್ನು ತುಂಬಿ; ಅವುಗಳನ್ನು ಹಗಲಿರುಳೂ ನಿಮ್ಮ ಮುಂದಿರಿಸಿಕೊಳ್ಳಿ. ಇದರಿಂದ ಮಹತಕಾರ್ಯ ಉದ್ಭವಿಸುತ್ತದೆ."

## ಕನ್ನಡ ಪ್ರಮುಖ ಕವಿಗಳ ಬಿರುದುಗಳು

– ರಂಜಿತಾ ಛಲವಾದಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

- ಪಂಪ – ನಾಡೋಜ
- ರನ್ನ – ಶಕ್ತಿಕವಿ
- ಕುವೆಂಪು – ರಸಋಷಿ, ಕನ್ನಡದ ವರ್ಡ್ಸ್‌ವರ್ತ್
- ಬೇಂದ್ರೆ – ವರಕವಿ
- ರಾಘವಾಂಕ – ರಗಳೆಕವಿ
- ದಿನಕರ ದೇಸಾಯಿ – ಚುಟುಕು ಬ್ರಹ್ಮ
- ಮಾಸ್ತಿ– ಕನ್ನಡದ ಆಸ್ತಿ, ಸಣ್ಣಕತೆಗಳ ಜನಕ
- ಟಿ.ಪಿ. ಕೈಲಾಸಂ – ಕರ್ನಾಟಕ ಪ್ರಹಸನ ಪಿತಾಮಹಾ
- ಶಿವರಾಮ ಕಾರಂತ – ಚಲಿಸುವ ವಿಶ್ವಕೋಶ
- ಪುರಂದರದಾಸರು – ಕರ್ನಾಟಕ ಸಂಗೀತ ಪಿತಾಮಹಾ
- ಫ. ಗುಹಳಕಟ್ಟಿ – ವಚನ ಪಿತಾಮಹಾ
- ಬಿ. ಎಂ ಶ್ರೀಂಕಂಠಯ್ಯ – ಕನ್ನಡದ ಕಣ್ವ
- ಕೆ. ಎಸ್. ನರಸಿಂಹಸ್ವಾಮಿ – ಪ್ರೇಮಕವಿ
- ಬಸವರಾಜ ಕಟ್ಟೀಮನಿ – ಕುಂದರ ನಾಡಿನ ಕಂದ
- ಸಿದ್ದಲಿಂಗಯ್ಯ – ದಲಿತಕವಿ
- ಶಾಂತಕವಿ – ಕನ್ನಡ ದಾಸಯ್ಯ
- ಶಿಶುನಾಳ ಶರೀಫ್ – ಕರ್ನಾಟಕದ ಕಬೀರ
- ಗಳಗನಾಥ – ಕಾದಂಬರಿ ಪಿತಾಮಹಾ
- ಆಲೂರು ವೆಂಕಟರಾಯರು – ಕನ್ನಡ ಕುಲಪುರೊಹಿತ
- ಹರ್ಡೆಕರ್ ಮಂಜಪ್ಪ – ಕರ್ನಾಟಕದ ಗಾಂಧಿ
- ಗಂಗೂಬಾಯಿ ಹಾನಗಲ್ – ಸಂಗೀತ ಗಂಗಾದೇವಿ
- ಪಿ. ಕಾಳಿಂಗ್‌ರಾವ್ – ಕನ್ನಡ ಕೋಗಿಲೆ
- ಗಂಗಾಧರರಾವ್ ದೇಶಪಾಂಡೆ – ಕನ್ನಡದ ಸಿಂಹ
- ಕಂದಗಲ್ ಹನುಮಂತರಾಯ್ – ಕನ್ನಡದ ಷೇಕ್ಸ್‌ಪಿಯರ್
- ಬಸವಪ್ಪಶಾಸ್ತ್ರಿ – ಅಭಿನವ ಕಾಳಿದಾಸ
- ನಾಗಚಂದ್ರ – ಅಭಿನವ ಪಂಪ
- ಶ್ರೀಪಾದರಾಯರು – ಹರಿದಾಸ ಪಿತಾಮಹಾ

- ❖ ಅ. ನ. ಕೃಷ್ಣರಾಯ – ಕಾದಂಬರಿ ಸಾರ್ವಭೌಮ
- ❖ ಸರ್ವಜ್ಞ – ತ್ರಿಪದಿ ಚಕ್ರವರ್ತಿ
- ❖ ಅತ್ತಿಮಬ್ಬೆ – ದಾನಚಿಂತಾಮಣಿ
- ❖ ಡಿ. ಎಲ್ ನರಸಿಂಹಾಚಾರ್ – ಪ್ರಾಕ್ತನ ವಿಮರ್ಶ ವಿಚಕ್ಷಣ
- ❖ ಮುಮ್ಮಡಿ ಕೃಷ್ಣರಾಜ ಒಡೆಯರ್ – ಅಭಿನವ ಭೋಜರಾಜ
- ❖ ಪು. ತಿ. ನ – ಸಂತಕವಿ

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು:**

“ನಿಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಿ ನೀವು ಶುದ್ಧ ಚಾರಿತ್ರ್ಯವನ್ನು ರೂಢಿಸಿಕೊಳ್ಳಬೇಕು. ಕರ್ತವ್ಯವನ್ನು ಮಾಡಿದರೆ ಕರ್ತವ್ಯಭಾರದಿಂದ ಪಾರಾಗುತ್ತೇವೆ.”

ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ರಾಷ್ಟ್ರವೂ ಶ್ರೇಷ್ಠತೆಯನ್ನು ಪಡೆಯಲು ಮೂರು ಸಂಗತಿಗಳು ಅವಶ್ಯಕ:

೧.ಒಳಿತಿನ ಶಕ್ತಿಯಲ್ಲಿ ದೃಢನಂಬಿಕೆ

೨.ಮಾತ್ಸರ್ಯ ಹಾಗೂ ಅಪನಂಬಿಕೆಗಳಿಲ್ಲದಿರುವಿಕೆ

೩.ಒಳ್ಳೆಯವರಾಗಲು, ಒಳಿತನ್ನು ಮಾಡಲು ಪ್ರಯತ್ನಿಸುವವರಿಗೆ ಸಹಾಯ ಮಾಡುವಿಕೆ.

“ನಮಗೆ ನಾವೇ ಕೇಡನ್ನುಂಟುಮಾಡಿಕೊಳ್ಳದಿದ್ದರೆ, ಜಗತ್ತಿನ ಯಾವ ಶಕ್ತಿಯೂ ನಮಗೆ ಕೇಡನ್ನುಂಟುಮಾಡಲಾರದು ಎಂಬುದು ನಿಶ್ಚಯ.”

“ನಮ್ಮ ದುಃಖಗಳಿಗೆಲ್ಲ ನಾವೇ ಜವಾಬ್ಧಾರರು. ಮತ್ತಾರೂ ಅಲ್ಲ. ನಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವವರು ನಾವೇ.”

“ನಿಮಗಾಗಿ ಏನನ್ನೂ ಬಯಸಬೇಡಿ. ಎಲ್ಲವನ್ನೂ ಇತರರಿಗಾಗಿ ಮಾಡಿ. ಭಗವಂತನಲ್ಲೇ ಇರುವುದು ಅವನಲ್ಲೇ ಬಾಳುವುದು, ಚಲಿಸುವುದು ಎಂದರೆ ಇದೇ.”

“ಯಾರ ಸಹಾಯಕ್ಕೂ ಕಾದು ಕುಳಿತುಕೊಳ್ಳಬೇಡಿ. ಎಲ್ಲ ಮಾನವ ಸಹಾಯಕ್ಕಿಂತಲೂ ಭಗವಂತನು ಅನಂತಪಾಲು ಮಿಗಿಲಲ್ಲವೆ?”

“ಇತರರಿಗೆ ತಿಳಿಯದೆ ಅವರನ್ನು ನಿಂದಿಸುವುದು ಮಹಾಪರಾಧ ಎಂಬುದನ್ನು ತಿಳಿಯಿರಿ. ಇದನ್ನು ನೀವು ಸಂಪೂರ್ಣ ತ್ಯಜಿಸಬೇಕು.”

## ಕರ್ನಾಟಕದ / ಕನ್ನಡದ ಮೊದಲುಗಳು

– ಸಂದೀಪ ಕೆ. ಎನ್., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

1. ಪಂಪ ಪ್ರಶಸ್ತಿ ಪಡೆದ ಮೊದಲಿಗರು – ಕುವೆಂಪು
2. ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲಿಗರು – ಕುವೆಂಪು
3. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಕುವೆಂಪು
4. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಕುವೆಂಪು
5. ರಂಗಭೂಮಿ ಸೇವೆಗಾಗಿ ಮ್ಯಾಗ್ಸಸೆ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಕೆ. ವಿ. ಸುಬ್ಬಣ್ಣ
6. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ನಟ – ಡಾ. ರಾಜ್ ಕುಮಾರ್
7. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ರಾಜಕಾರಣಿ – ಎಸ್. ನಿಜಲಿಂಗಪ್ಪ
8. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ವಿಜ್ಞಾನಿ – ಸಿ. ಎನ್. ಆರ್. ರಾವ್
9. ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರು – ಹೆಚ್. ವಿ ನಂಜುಂಡಯ್ಯ
10. ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಅಧ್ಯಕ್ಷ – ಹೆಚ್. ವಿ. ನಂಜುಂಡಯ್ಯ
11. ಕರ್ನಾಟಕದ ಮೊದಲ ಮಹಿಳಾ ರಾಜ್ಯಪಾಲರು – ವಿ. ಎಸ್. ರಮಾದೇವಿ
12. ಕರ್ನಾಟಕದ ಮೊದಲ ರಾಜ್ಯಪಾಲ – ಜಯಚಾಮರಾಜ ಒಡೆಯರ್
13. ಭಾರತದ ಉಪರಾಷ್ಟ್ರಪತಿ ಹುದ್ದೆಗೇರಿದ ಮೊದಲ ಕನ್ನಡಿಗ – ಬಿ. ಡಿ. ಜತ್ತಿ
14. ಪ್ರಧಾನಮಂತ್ರಿ ಹುದ್ದೆಗೇರಿದ ಮೊದಲ ಕನ್ನಡಿಗ – ಹೆಚ್.ಡಿ. ದೇವಗೌಡ
15. ಕನ್ನಡದ ಮೊದಲ ವಚನಗಾರ್ತಿ – ಅಕ್ಕಮಹಾದೇವಿ
16. ಕನ್ನಡದ ಮೊದಲ ವಚನಕಾರ – ಜೇಡರ ದಾಸಿಮಯ್ಯ
17. ಸ್ವತಂತ್ರ ಭಾರತದ ಮೊದಲ ದಂಡನಾಯಕರಾಗಿದ್ದ ಕನ್ನಡಿಗ – ಜನರಲ್ ಕೆ. ಎಂ ಕಾರಿಯಪ್ಪ
18. ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿ – ಚಂದ್ರಶೇಖರ್ ಕಂಬಾರ
19. ಕನ್ನಡದ ಮೊದಲ ರಾಷ್ಟ್ರಕವಿ – ಎಂ. ಗೋವಿಂದ ಪೈ
20. ಕಬೀರ ಸಮ್ಮಾನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಎಂ. ಗೋಪಾಲಕೃಷ್ಣ ಅಡಿಗ
21. ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಸರ್. ಎಂ ವಿಶ್ವೇಶ್ವರಯ್ಯ
22. ರಾಜಾಜಿ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ವಿ. ಕೃ. ಗೋಕಾಕ್
23. ಕನ್ನಡದ ಪ್ರಥಮ ಐತಿಹಾಸಿಕ ನಾಟಕಕಾರ – ಸಂಸ
24. ಕನ್ನಡದ ಮೊದಲ ಪ್ರಾಧ್ಯಾಪಕ – ಟಿ. ಎಸ್. ವೆಂಕಣ್ಣಯ್ಯ
25. ಕನ್ನಡದ ಮೊದಲ ಗ್ರಂಥಸೂಚಿಕಾರ್ತಿ – ಹೆಚ್. ಎಸ್. ಸುಜಾತ
26. ಬೈಬಲನ್ನು ಕನ್ನಡಕ್ಕೆ ತಂದ ಮೊದಲಿಗ – ಜಾನ್ ಹ್ಯಾಂಡ್
27. ಕನ್ನಡದ ಕೆಲಸಕ್ಕೆ ಡಾಕ್ಟರೇಟ್ ಪಡೆದ ಮೊದಲ ವಿದೇಶಿಗ – ಫರ್ಡಿನೆಂಡ್ ಕಿಟೆಲ್
28. ಹೈಕೋರ್ಟಿನ ಮೊದಲ ಮಹಿಳಾ ನ್ಯಾಯಮೂರ್ತಿ – ಮಂಜುಳಾ ಚೆಲ್ಲೂರ್

29. ಕರ್ನಾಟಕದ ಮೊದಲ ಕ್ರಿಕೆಟ್ ಆಟಗಾರ – ಪಿ. ಇ ವಾಲಿಯಾ
30. ಸ್ನಾತಕೋತ್ತರ ಪದವಿ ಪಡೆದ ಮೊದಲ ಕನ್ನಡಿಗ – ಆರ್. ನರಸಿಂಹಾಚಾರ್ಯ
31. ಮಿಸ್ಟರ್ ವರ್ಲ್ಡ್ ಪ್ರಶಸ್ತಿ ವಿಜೇತ ಮೊದಲ ಕನ್ನಡಿಗ – ರೇಮಂಡ್ ಡಿಸೋಜಾ
32. ಪಾಲಿಮೆಂಟ್‌ನಲ್ಲಿ ಕನ್ನಡದಲ್ಲಿ ಮಾತನಾಡಿದ ಮೊದಲ ರಾಜಕಾರಣಿ – ಜೆ. ಎಚ್. ಪಟೇಲ್
33. ಕೇಂದ್ರ ಸರ್ಕಾರದಲ್ಲಿ ರಕ್ಷಣಾ ಸಚಿವರಾಗಿದ್ದ ಮೊದಲ ಕನ್ನಡಿಗ – ಜಾರ್ಜ್ ಫರ್ನಾಂಡಿಸ್
34. ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಮೊದಲ ಕನ್ನಡಿಗ – ರಾಮಕೃಷ್ಣ ಹೆಗಡೆ
35. ಲೋಕಸಭೆಯ ಅಧ್ಯಕ್ಷರಾದ ಮೊದಲ ಕನ್ನಡಿಗ – ಕೆ. ಎಸ್. ಹೆಗ್ಡೆ
36. ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಡಾ. ರಾಜಕುಮಾರ್
37. ಕನ್ನಡದ ಮೊದಲ ನವೋದಯದ ಕವಯಿತ್ರಿ – ಬೆಳಗೆರೆ ಜಾನಕಮ್ಮ
38. ಕನ್ನಡದ ಮೊದಲ ಗಣಿತಶಾಸ್ತ್ರಜ್ಞ – ಮಹಾವೀರಾಚಾರ್ಯ
39. ರಾಷ್ಟ್ರಪತಿಗಳ ಪದಕ ಪಡೆದ ಮೊದಲ ಯಕ್ಷಗಾನ ಕಲಾವಿದ – ಹಾರಾಡಿ ರಾಮಗಾಣಿಗ
40. ಬ್ರಿಟಿಷರ ವಿರುದ್ಧ ಸಿಡಿದೆದ್ದ ಮೊದಲ ಕನ್ನಡತಿ – ಕಿತ್ತೂರ ಚೆನ್ನಮ್ಮ
41. ಸಂಚಾರಿ ನೇತ್ರ ಚಿಕಿತ್ಸಾಲಯ ಆರಂಭಿಸಿದ ಮೊದಲ ಕನ್ನಡಿಗ – ಎಂ. ಸಿ ಮೋದಿ
42. ಮೈಸೂರು ಸಂಸ್ಥಾನದ ಮೊದಲ ದಿವಾನ – ಶ್ರೀಧರಾಚಾರ್ಯ
43. ವಿಶ್ವಸ್ನೂಕರ್ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ಪಂಕಜ್ ಅದ್ವಾನಿ
44. ಕನ್ನಡದಲ್ಲಿ ಮೊದಲ ಕಥೆ ಬಳಸಿದವರು – ಪಂಜೆ ಮಂಗೇಶರಾಯರು
45. ಕನ್ನಡದ ಮೊದಲ ಶಾಸನ – ತಾಳಗುಂದದ ಸಿಂಹ ಕಟಾಂಜನ ಶಾಸನ/ ಹಲ್ಮಿಡಿ ಶಾಸನ
46. ಕನ್ನಡದ ಮೊದಲ ನಾಟಕ – ಸಿಂಗರಾರ್ಯನ ಮಿತ್ರಾವಿಂದ ಗೋವಿಂದ
47. ಕನ್ನಡದ ಮೊದಲ ಲಕ್ಷಣ ಗ್ರಂಥ – ಕವಿರಾಜ ಮಾರ್ಗ
48. ಕನ್ನಡದ ಮೊದಲ ಮುಸ್ಲಿಂ ಕವಿ – ಶಿಶುನಾಳ ಷರೀಫ್ ಸಾಹೇಬರು
49. ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ – ಇಂದಿರಾಬಾಯಿ
50. ಕನ್ನಡದ ಮೊದಲ ಸಾಮಾಜಿಕ ನಾಟಕ – ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ
51. ಕನ್ನಡದಲ್ಲಿ ಮೊದಲ ಬಾರಿಗೆ ಜೀವನಚರಿತ್ರೆ ಬರೆದವರು – ಎಂ. ಎಸ್. ಪುಟ್ಟಣ್ಣ
52. ಕನ್ನಡದ ಮೊದಲ ಛಂಧೋಗ್ರಂಥ – ಛಂದೋಂಬುದಿ
53. ಕನ್ನಡದ ಮೊದಲ ಜ್ಯೋತಿಷಿ ಗ್ರಂಥ – ಜಾತಕತಿಲಕ (ಶ್ರೀಧರಾಚಾರ್ಯ)
54. ಕನ್ನಡದ ಮೊದಲ ಗಣಿತಶಾಸ್ತ್ರ ಕೃತಿ – ವ್ಯವಹಾರಗಣಿತ (ರಾಜಾದಿತ್ಯ)
55. ಹೊಸಗನ್ನಡದ ಮೊದಲ ಮಹಾಕಾವ್ಯ – ಶ್ರೀ ರಾಮಾಯಣ ದರ್ಶನಂ
56. ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕೃತಿ – ಶ್ರೀ ರಾಮಾಯಣ ದರ್ಶನಂ
57. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾದ ಮೊದಲ ಮಹಿಳೆ
 – ಜಯದೇವಿತಾಯಿ ಲಿಗಾಡೆ

58. ಕನ್ನಡದ ಮೊದಲ ಕನ್ನಡ ಇಂಗ್ಲೀಷ್ ನಿಘಂಟಿನ ರಚನೆಕಾರರು – ಆರ್. ಎಫ್. ಕಿಟೆಲ್
59. ಕನ್ನಡದ ಮೊಟ್ಟಮೊದಲ ಕಾವ್ಯಕೃತಿ – ಆದಿಪುರಾಣ
60. ಕನ್ನಡದ ಮೊದಲ ಪತ್ರಿಕೆ – ಮಂಗಳೂರು ಸಮಾಚಾರ್
61. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೊದಲ ಅಧ್ಯಕ್ಷ – ಜಿ. ನಾರಾಯಣ
62. ಮೊದಲ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಸ್ಥಳ – ಬೆಂಗಳೂರು
63. ಕನ್ನಡದ ಮೊದಲ ದಿನಪತ್ರಿಕೆ – ಸೂರ್ಯೋದಯ ಪ್ರಕಾಶಿಕಾ
64. ಕನ್ನಡದ ಮೊದಲ ಗಾದೆಗಳ ಸಂಕಲನ – ಕನ್ನಡದ ಗಾದೆಗಳು
65. ಕನ್ನಡದ ಮೊದಲ ಒಗಟುಗಳ ಸಂಕಲನ– ಮಕ್ಕಳ ಒಡಪುಗಳು
66. ಕನ್ನಡದ ಮೊದಲ ಪ್ರವಾಸ ಕಥೆ – ದಕ್ಷಿಣ ಭಾರತ ಯಾತ್ರೆ
67. ಕನ್ನಡ ಸಾಹಿತ್ಯ ಮೊದಲ ನಿಘಂಟು – ರನ್ನಕಂದ
68. ಕನ್ನಡ ಮೊದಲ ಪ್ರಬಂಧ ಸಂಕಲನ – ಲೋಕರಹಸ್ಯ
69. ಎಪಿಗ್ರಾಫಿಯ ಆಫ್ ಕರ್ನಾಟಕವನ್ನು ಮೊದಲು ಸಂಗ್ರಹಿಸಿದವರು – ಬಿ. ಎಲ್. ರೈಸ್
70. ಕನ್ನಡ ವ್ಯಾಕರಣವನ್ನು ಮೊದಲು ಪ್ರಕಟಿಸಿದವರು – ವಿಲಿಯಂ ಕೇರಿ
71. ಕನ್ನಡದ ಮೊದಲ ವ್ಯಾಕರಣ ಗ್ರಂಥ – ಶಬ್ಧಸ್ಮೃತಿ
72. ಕನ್ನಡದ ಮೊದಲ ಕಾನೂನು ಪತ್ರಿಕೆ – ನ್ಯಾಯಸಂಗ್ರಹ
73. ಕನ್ನಡದ ಮೊದಲ ಮಕ್ಕಳ ಪತ್ರಿಕೆ – ಮಕ್ಕಳ ಪುಸ್ತಕ
74. ಕನ್ನಡದ ಮೊದಲ ಹಾಸ್ಯಲೇಖಕಿ – ಟಿ. ಸುನಂದಮ್ಮ
75. ಕನ್ನಡದ ಮೊದಲ ಗದ್ಯ ನಿಘಂಟು – ಕರ್ನಾಟಕ ಶಬ್ದಸಾರ
76. ಕನ್ನಡದ ಮೊದಲ ಆಯುರ್ವೇದ ಗ್ರಂಥ – ಕರ್ನಾಟಕ ಕಲ್ಯಾಣಕಾರಕ
77. ಕನ್ನಡದ ಮೊದಲ ಸಾಂಗತ್ಯ ಗ್ರಂಥ – ಸೊಬಗಿನ ಸೋನೆ
78. ಕನ್ನಡದ ಮೊದಲ ಶತಕ ಕೃತಿ – ಚಂದ್ರಚೂಡಾಮಣಿ ಶತಕ
79. ಕನ್ನಡದ ಮೊದಲ ಭಾಷಾಂತರಿತ ಕಾದಂಬರಿ – ಬಂಕಿಮಚಂದ್ರರ "ಭ್ರಾಂತಿ ವಿಲಾಸ' (ಅನುವಾದ ಬಿ. ವೆಂಕಟಾಚಾರ್ಯ)
80. ಕನ್ನಡದ ಪ್ರಥಮ ಕೀರ್ತನಕಾರ – ನರಹರಿ ತೀರ್ಥ
81. ಕನ್ನಡದ ಮೊತ್ತ ಮೊದಲ ಐತಿಹಾಸಿಕ ಕಾದಂಬರಿ – ಸೂರ್ಯಕಾಂತ
82. ಕನ್ನಡದ ಇತಿಹಾಸಕ್ಕೆ ಸಂಬಂಧಿಸಿದ ಮೊದಲ ಕಾದಂಬರಿ – ಕುಮಿದಿನಿ (ಗಳಗನಾಥ)
83. ಕನ್ನಡದಲ್ಲಿ ಪ್ರಗಾಥ ಶಬ್ದರೂಪ ಮೊದಲು ಬಳಸಿದ್ದು – ಬಿ. ಎಂ. ಶ್ರೀ
84. ಕನ್ನಡದಲ್ಲಿ ಮೊದಲ ಬಾರಿಗೆ ಅಭಿನಂದನಾ ಗ್ರಂಥ ಸಮರ್ಪಣೆ – ಬಿ. ಎಂ. ಶ್ರೀ (ಸಂಭಾವನೆ)
85. ಹೊಸಗನ್ನಡ ಸಾಹಿತ್ಯದ ಮೊದಲ ಪ್ರೇಮಗೀತೆಗಳ ಸಂಕಲನಕಾರ – ತೀ. ನಂ. ಶ್ರೀ
86. ಕೇಂದ್ರ ಸಾಹಿತ್ಯ ಅಕಾಡೆಮಿಯ ಮೊದಲ ಚುನಾಯಿತ ಅಧ್ಯಕ್ಷರಾದ ಕನ್ನಡಿಗ – ಯು. ಆರ್. ಅನಂತಮೂರ್ತಿ
87. ಕನ್ನಡದ ಮೊದಲ ವ್ಯಾಕರಣ ಗ್ರಂಥ – ಶಬ್ಧಮಣಿದರ್ಪಣಂ

88. ಕನ್ನಡದ ಮೊದಲ ತಾಂತ್ರಿಕ ಪದಕೋಶ – ಔದ್ಯಮಿಕ ನಿಘಂಟು
89. ಹಿಂದಿಯಲ್ಲಿ ಪ್ರಕಟವಾದ ಮತ್ತು ಪ್ರದರ್ಶನಗೊಂಡ ಕನ್ನಡ ಮೊದಲ ನಾಟಕ
– ಕೇಳು ಜನಮೇಜಯ
90. ಕನ್ನಡದ ಮೊದಲ ನವ್ಯ ಕಾದಂಬರಿ – ಮುಕ್ತಿ (ಶಾಂತಿನಾಥ ದೇಸಾಯಿ)
91. ಕನ್ನಡದಲ್ಲಿ ರಚಿತಗೊಂಡ ಮೊದಲ ರಗಳೆ – ಮಂದಾನಿಲ
92. ಕನ್ನಡದ ಮೊದಲ ವಿಮರ್ಶಾಕೃತಿ – ಕವಿಚಕ್ರವರ್ತಿ ರನ್ನ
93. ಕನ್ನಡದ ಮೊದಲ ಪಾಕಶಾಸ್ತ್ರ ಕಾವ್ಯ – ಸೂಪಶಾಸ್ತ್ರ (3ನೇ ಮಂಗರಸ)
94. 'ಅಂಕಣ' ಬರಹ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ
– ಹಾ. ಮಾ. ನಾಯಕ
95. ಕಾಳಿದಾಸ್ ಸಮ್ಮಾನ್ ಪ್ರಶಸ್ತಿಯನ್ನು ಮೊದಲು ಪಡೆದ ಹಿಂದುಸ್ತಾನಿ ಸಂಗೀತಕಾರ
– ಮಲ್ಲಿಕಾರ್ಜುನ ಮನ್ಸೂರ್
96. ಕನ್ನಡ ದಾಸ ಸಾಹಿತ್ಯ ಪರಂಪರೆಯ ಮೊದಲ ಕೀರ್ತನಕಾರ – ನರಹರಿತೀರ್ಥ
97. ಶಾಕುಂತಲ ನಾಟಕವನ್ನು ಕನ್ನಡಕ್ಕೆ ಮೊದಲು ಸಂಗ್ರಹಿಸಿ ಪ್ರಕಟಿಸಿದವರು – ಬಸವಪ್ಪಶಾಸ್ತ್ರಿ
98. ಕನ್ನಡದ ಮೊದಲ ಹಾಸ್ಯ ಪತ್ರಿಕೆ – ವಿಕಟ ಪ್ರತಾಪ
99. ಕನ್ನಡದ ಮೊದಲ ಕಾದಂಬರಿಗಾರ್ತಿ – ತಿರುಮಲಾಂಬ
100. ಕನ್ನಡದ ಮೊದಲ ವರ್ಣ ಚಲನಚಿತ್ರ – ಅಮರಶಿಲ್ಪಿ ಜಕಣಾಚಾರಿ
101. ರಾಷ್ಟ್ರಪ್ರಶಸ್ತಿ ವಿಜೇತ ಮೊದಲ ಕನ್ನಡ ಗಾಯಕ – ಶಿವಮೊಗ್ಗ ಸುಬ್ಬಣ್ಣ
102. ಕರ್ನಾಟಕದಲ್ಲಿ ಸ್ಥಾಪನೆಯಾದ ಮೊದಲ ವಿಶ್ವವಿದ್ಯಾಲಯ
– ಮೈಸೂರು ವಿಶ್ವವಿದ್ಯಾಲಯ (1916)
103. ದಾದಾಸಹೇಬ್ ಪಾಲ್ಕೆ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ವಿ. ಶಾಂತಾರಾಂ
104. ಕರ್ನಾಟಕದಲ್ಲಿ ತಯಾರಾದ ಮೊದಲ ಮೂಕಚಿತ್ರ – ಮೃಚ್ಛಕಟಿಕ
105. ಭಾರತ ಸುಪ್ರಿಮ್‌ಕೋರ್ಟ್‌ನ ಮುಖ್ಯನ್ಯಾಯಾಧೀಶರಾಗಿದ್ದ ಮೊದಲ ಕನ್ನಡಿಗ
– ಇ. ಎಸ್. ವೆಂಕಟರಾಮಯ್ಯ
106. ವಿಶ್ವ ಆಹಾರ ಸಂಸ್ಥೆಯ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ – ದೇವಂಗಿ ಪ್ರಫುಲ್ಲಚಂದ್ರ
107. ಕನ್ನಡದ ಮೊದಲ ಬೆರಳಚ್ಚು ಯಂತ್ರವನ್ನು ಸಿದ್ದಪಡಿಸಿದ ಕನ್ನಡಿಗ – ಅನಂತ ಸುಬ್ಬರಾವ್
108. ಕರ್ನಾಟಕದ ಪ್ರಥಮ ಸಂಚಾರಿ ಗ್ರಂಥಾಲಯ – ಕುವೆಂಪು ಸಂಚಾರಿ ಗ್ರಂಥಾಲಯ
109. ಕರ್ನಾಟಕದಿಂದ ಆಯ್ಕೆಗೊಂಡ ಮೊದಲ ಲೋಕಸಭಾ ಉಪಾಧ್ಯಕ್ಷರು
– ಎಸ್. ಮಲ್ಲಿಕಾರ್ಜುನಯ್ಯ
110. ಕನ್ನಡದ ಮೊದಲ ಕವಿ ಚರಿತೆಕಾರ – ಆರ್. ನರಸಿಂಹಾಚಾರ್ಯ
111. ಮೊದಲ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು – ಪ್ರೊ. ಎಲ್. ಎಸ್. ಶೇಷಗಿರಿರಾವ್
112. ಅತ್ತಿಮಬ್ಬೆ ಪ್ರಶಸ್ತಿ ಪಡೆದ ಮೊತ್ತಮೊದಲ ಕನ್ನಡತಿ – ಶ್ರೀಮತಿ ಸುನಂದಮ್ಮ

113. ಕನ್ನಡ ವೈದ್ಯ ಪದಕೋಶ ಮೊದಲ ರಚನೆಕಾರ – ಡಾ. ಡಿ. ಎಸ್. ಶಿವಪ್ಪ
114. ಪ್ರಥಮ ರಾಜ್ಯಪಾಲರಾದ ಮೊದಲ ಕನ್ನಡಿಗ – ಬಿ. ರಾಚಯ್ಯ
115. ಕರ್ನಾಟಕದ ಪ್ರಥಮ ಮುಖ್ಯಮಂತ್ರಿ – ಕೆ. ಸಿ ರೆಡ್ಡಿ
116. ಜಗತ್ತಿನ ಅತಿ ಎತ್ತರವಾದ ಕನ್ನಡನಾಡಿನ ಏಕಶಿಲಾಮೂರ್ತಿ
 – ಗೋಮಟೇಶ್ವರ ವಿಗ್ರಹ (ಶ್ರವಣ ಬೆಳಗೊಳ)
117. ವಿಶ್ವಸುಂದರಿ ಪ್ರಶಸ್ತಿ ಪಡೆದ ಮೊದಲ ಕನ್ನಡತಿ – ಐಶ್ವರ್ಯ ರೈ
118. ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಕನ್ನಡದ ಪ್ರಸಾರದ ಉಪಗ್ರಹ ಚಾನಲ್
 – ಚಂದನ (2000 ಏಪ್ರಿಲ್ 5)
119. ಕನ್ನಡದ ಮೊದಲ ವಾರಪತ್ರಿಕೆ – ಸುಬೋಧ ಪ್ರಕಾಶ (1845 – ಬೆಳಗಾವಿ)
120. ಸಂಪೂರ್ಣ ಸಾಕ್ಷರತೆ ಸಾಧಿಸಿದ ಕರ್ನಾಟಕದ ಮೊದಲ ಜಿಲ್ಲೆ – ದಕ್ಷಿಣ ಕನ್ನಡ
121. ಕರ್ನಾಟಕದ ಮೊದಲ ಬ್ಯಾಂಕ್ – ಚಿತ್ರದುರ್ಗ ಬ್ಯಾಂಕ್ ಲಿಮಿಟೆಡ್
122. ಇಸ್ರೋ ಸಂಸ್ಥೆಯ ನಿರ್ದೇಶಕರಾದ ಪ್ರಥಮ ಕನ್ನಡಿಗ – ಪ್ರೋ. ಯು. ಆರ್ ರಾವ್
123. ಕನ್ನಡದ ಮೊದಲ ಐತಿಹಾಸಿಕ ಚಲನಚಿತ್ರ – ರಣಧೀರ ಕಂಠೀರವ
124. ಅಚ್ಚಕನ್ನಡದ ಮೊಟ್ಟಮೊದಲ ಕರ್ನಾಟಕದ ದೊರೆ – ಕದಂಬರ ಮಯೂರವರ್ಮ
125. ರಾಷ್ಟ್ರವನ್ನು ಪ್ರತಿನಿಧಿಸಿದ ಕರ್ನಾಟಕದ ಮೊದಲ ಕ್ರಿಕೆಟ್ ಆಟಗಾರ – ಪಿ. ಇ. ಪಾಲಿಯಾ

***



## ಜನಪದ ಕಲೆಯಾಗಿ ಕೋಲಾಟ

– ಶ್ವೇತಾ ಎಲ್ ಮತ್ತು
ಮಂಜುಳಾ ಸಿ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಕೋಲಾಟ ಒಂದು ಗಂಡು ಕಲೆ, (ಹೆಣ್ಣು ಮಕ್ಕಳು ಕೋಲಾಡುವುದು ಅಪರೂಪ). ಹಾಡು ಮತ್ತು ಕುಣಿತವು ಬೆರೆತಿರುವಂತಹ ಕಲೆಯಾಗಿರುವುದು. ಗೋಕುಲದಲ್ಲಿ ಶ್ರೀ ಕೃಷ್ಣನ ಜನನವಾದಾಗ ಯಾದವರು ಕೋಲಾಡುವ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದುದು ಮತ್ತು ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲು ಆಟವಾಡಿದುದು ಕೋಲಾಟದ ಪ್ರಾಚೀನವಾದ ಕಲೆಯನ್ನು ತಿಳಿಸುತ್ತದೆ.

### ಕೋಲು ತರುವ ಮತ್ತು ಬಿಡುವ ಆಚರಣೆ

ಗ್ರಾಮದ ಹಬ್ಬಗಳಲ್ಲಿ ಮೊದಲು ಕೋಲು ತರುವ ಮತ್ತು ಹಬ್ಬದ ನಂತರ ಕೋಲು ಬಿಡುವ ಆಚರಣೆಗಳಿವೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಹಳ್ಳಿಯೊಂದರ ಆಚರಣೆ ಹೀಗಿದೆ. ನವರಾತ್ರಿ ಆರಂಭವಾಗುವ ಮೊದಲು ಬರುವ ಮೂಲಾ ನಕ್ಷತ್ರದ ದಿವಸ ಕೊಡಸಿನ ಗಿಡವನ್ನು ಪೂಜೆ ಮಾಡಿ ಎರಡು ಕೋಲುಗಳನ್ನು ಕಡಿಯುತ್ತಾರೆ. ಹೀಗೆ ಮೊದಲು ಕಡಿದ ಕೋಲುಗಳಿಗೆ 'ಗುರುಕೋಲು' ಎಂದು ಹೇಳುತ್ತಾರೆ. ದಶಮಿಯ ದಿವಸ ಕೋಲುಗಳಿಗೆ ಬಣ್ಣ ಹಚ್ಚುತ್ತಾರೆ. ಆ ದಿನ ದೇವಸ್ಥಾನದ ಮುಂದೆ ಕೋಲು ಪೂಜೆ ಮಾಡಿ ಕೋಲಾಟ ಆರಂಭಿಸುತ್ತಾರೆ. ಮಾರನೆಯ ದಿನದಿಂದ ಗ್ರಾಮದೇವತೆಗಳಿಂದ ಸ್ಥಳ ಮತ್ತು 'ದೇವರ ಬನ'ಗಳಿಗೆ ಹೋಗಿ ಕೋಲು ಹುಯ್ಯುತ್ತಾರೆ. ನಂತರ ಗ್ರಾಮದ ಮುಖ್ಯಸ್ಥನ ಮನೆ ಮುಂದೆ ಕೋಲಾಟದ ಪ್ರದರ್ಶನ ನಡೆಯುತ್ತದೆ. ಇವರಿಗೆ ದವಸಧಾನ್ಯಗಳನ್ನು ನೀಡಲಾಗುತ್ತದೆ. ಹೀಗೆ ಸಂಗ್ರಹಿಸಿದಂತಹ ಹಣ, ಅಕ್ಕಿ, ಉಪ್ಪು, ಹುಳಿ, ಮೆಣಸಿನಕಾಯಿಯನ್ನು ಒಂದೆಡೆ ಇಟ್ಟಿದ್ದು ಕಾರ್ತಿಕ ಮಾಸ ಕಳೆದ ಎಳನೇ ದಿವಸಕ್ಕೆ ಬರುವ ಸಂತೆ ಸೃಷ್ಟಿ ಮುಗಿದ ನಂತರ ಒಳ್ಳೆ ದಿವಸ ನೋಡಿ ಸಂಗ್ರಹಿಸಿದ ದವಸ ಧಾನ್ಯಗಳಿಂದ ಊರೊಟ್ಟಿನ ಅಡುಗೆಯ ಜೊತೆಗೆ ಒಣಮೀನಿನ ಆಹಾರವೂ ತಯಾರಾಗುತ್ತದೆ. ಇದನ್ನು ದೇವತೆಗಳಿಗೆ ಎಡೆ ಮಾಡಿದ ನಂತರ, ಮಾಡಿದ ಅಡುಗೆಯನ್ನು ಸಾಮೂಹಿಕವಾಗಿ ಭೋಜನವನ್ನು ಮಾಡುತ್ತಾರೆ. ಆ ದಿನ ಬೆಳಗಿನ ಜಾವದ ತನಕ ಮತ್ತೊಂದು ಬಾರಿ ಎಲ್ಲರ ಮನೆ ಮುಂದೆಯೂ ಕೋಲಾಟದ ಪ್ರದರ್ಶನವು ನಡೆಯುತ್ತದೆ. ನಂತರ ಶರಾವತಿ ಅಣೆಯ ಹಿನ್ನೀರಿಗೆ ಕೋಲು ಬಿಟ್ಟು ಬರಲಾಗುತ್ತದೆ. ಮಲೆನಾಡಿನ ಭಾಗದಲ್ಲಿ ಶ್ರೀಗಂಧ ಕೊಡಸು, ಕಾರಿ, ಬಗಿನೆ, ಅರ್ಚಟಿ, ಗೊರಬಳೆ, ಹೊನ್ನೆ ಮರಗಳನ್ನು ಕೋಲು ಕಡಿಯಲು ಬಳಸಿಕೊಂಡರೆ ಬಯಲು ಸೀಮೆಯಲ್ಲಿ ಕಾರಿ, ಚಂಬಳಿಕೆ, ಕಗ್ಗಲಿ, ಹಾಲೆ, ಜಾಲಿ, ಅಂಕೋಲೆ, ಬ್ಯಾಟೆ, ಕಾಕಿ, ಗಟ್ಟಿ ಬಿದಿರು ಮುಂತಾದ ಮರಗಳಿಂದ ಕೋಲು ಕಡಿಯುತ್ತಾರೆ.

### ವೇಷಭೂಷಣ–ವಾದ್ಯಗಳು

ಬಯಲು ಸೀಮೆಯಲ್ಲಿ ಬಿಳಿಯ ಅಂಗಿ, ಬಣ್ಣದ ಚಡ್ಡಿ, ತಲೆಗೆ ಮತ್ತು ನಡುವಿಗೆ ಬಣ್ಣದ ವಸ್ತ್ರ, ಕಾಲಿಗೆ ಗೆಜ್ಜೆಯನ್ನು ಹಾಕಿರುತ್ತಾರೆ. ಉತ್ತರ ಕರ್ನಾಟಕದಲ್ಲಾದರೆ ಬಿಗಿದು ಕಟ್ಟಿದ ಕಚ್ಚೆ, ತಲೆಗೆ ಟೋಪಿ, ನಡುವಿಗೆ ವಸ್ತ್ರ, ಕಾಲಿಗೆ ಗೆಜ್ಜೆ ಹಾಕಿರುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಕೋಲುಗಳ ಸಪ್ಪಳವೇ ಹಾಡಿಗೆ ಪೂರಕವಾದ ತಾಳವಾಗಿರುತ್ತದೆ. ಆದರೆ ಉತ್ತರ ಕರ್ನಾಟಕದಲ್ಲಿ ಮದ್ದಲೆ, ಡಪ್ಪು, ತಬಲಾ, ಢಕ್ಕೆ, ಕಂಚಿನ ತಾಳಗಳನ್ನು ಬಳಸುವುದುಂಟು.

**ಕೋಲಾಟದ ವೈವಿಧ್ಯ**

ಸುಮಾರು ಹತ್ತರಿಂದ ಹದಿನಾರು ಜನ ಕಲಾವಿದರು ಈ ಕೋಲಾಟದಲ್ಲಿ ಭಾಗವಹಿಸುವರು. ಹೆಜ್ಜೆ ಹಾಕುವ ಮತ್ತು ಅದನ್ನು ಬದಲಿಸುವ ವಿಧಾನವನ್ನು ಅನುಸರಿಸಿ ಹಾಗೂ ಒಂದೆಡೆ ಸೇರುವ, ಬೇರ್ಪಡುವ, ತಿರುಗಿನ ವಿನ್ಯಾಸವನ್ನು ಅನುಸರಿಸಿ ಕೋಲಾಟದ ವಿಧಗಳನ್ನು ಗಮನಿಸಬಹುದಾಗಿದೆ. ಒಂದೊಂದು ಹೆಜ್ಜೆಯಿಂದ ಆರಂಭವಾಗುವ ಕೋಲಾಟವು ಹೆಚ್ಚಾದಂತೆ ಮೂರೆಜ್ಜೆಯ ಪ್ರಮಾಣಕ್ಕೆ ಬಂದಿರುತ್ತದೆ.

**ಕೋಲಾಟದ ವಿಧಗಳು**

1. ಸುತ್ಕೋಲು 2. ದಾಟ್ಕೋಲು 3. ತೂಗುಕೋಲು 4. ಬಿಚ್ಚು ಕೋಲು 5. ಸಾಲು ಕೋಲು 6. ಒಂದಾಳ್ ಸುತ್ತು 7. ಎರಡಾಳ್ ಸುತ್ತು 8. ಮೂರಾಳ್ ಸುತ್ತು 9. ಆಳು ಕಂಡು ಆಳು 10. ಮಲ್ಕಿನ ಕೋಲು 11. ಮುರವಯ್ಯನ ಕೋಲು 12. ಐದು ಚಿಟಗೆನ ಕೋಲು 13. ಎರಡಾಳು ಜಗ್ಗು 14. ಗೀಜಗನ ಕೋಲು 15. ಹುಲಿದನವಿನ ಕೋಲು 16. ಗೀರ್ ಕಡ್ಡಿ ಕೋಲು 17. ಒಂಟಿಕೋಲು 18. ತೆಕ್ಕೋಲು 19. ವಸ್ತ್ರ ಕೋಲು 20. ರಂಗೋಲಿ ಕೋಲು 21. ಧಾಳಂಧುಳಿ 22. ಒನಿಕೆ ಆಟ 24. ಚಕ್ರದಾಟ 25. ಎಡಚಂಟಿಗೆ 26. ಏಳು ಚುಟಿಗಿ 27. ಚೌದಾ ಚುಟುಗಿ 28. ಪಂಚವದನ 29. ಝುಲಾ 30. ತಾಳಕುಟ್ಟಿಗೆ 31. ತಿಪ್ಪರಿ 32. ಒಂಟಿ ಕಡ್ಡಿ 33. ಆರ್ಕಡ್ಡಿ 34. ಕಾಳ್ಗಡ್ಡಿ 35. ತಟ್ಕಡ್ಡಿ 36. ಓನಾಟು 37. ಏಳು ಚುಟುಕಿ 38. ಒಂಬತ್ತು ಚುಟಕಿ 39. ಮೇರಿ ಕೋಲು 40. ಗೋಪಿನ ಕೋಲು 41. ಚಿತ್ತಾರ ಗೊಂಬೆ ಕೋಲು 42. ಚಂಡಾಡುವ ಕೋಲು 43. ಉಯ್ಯಾಲೆ ಕೋಲು 44. ದಂಡೆ ಕೋಲು 45. ಸೋಬಾನೆ ಕೋಲು 46. ಹರುಗೋಲು 47. ಚಕ್ಕೆ ಕೋಲು 48. ಅಲವಣಿ ಕೋಲು 49. ಉದ್ರಿ ಕೋಲು 50. ಚಿನ್ನಾಡಿ ಕೋಲು ಗಣೇಶ ಸ್ತುತಿಯೊಂದಿಗೆ ಆರಂಭವಾಗುವ ಕೋಲಾಟವು ನಂತರ ಎಲ್ಲರೂ ಸುತ್ತಲೂ ನಿಂತು ಮಧ್ಯೆ ಕೋಲುಗಳನ್ನಿಟ್ಟು ಕೈಮುಗಿದು, ಕೋಲಾಟ ಕಲಿಸಿದ ಗುರುವಿಗೆ ನಮಸ್ಕಾರ ಮಾಡಿ ಕೋಲನ್ನು ಮುಟ್ಟುತ್ತಾರೆ. ಕೋಲುಗಳ ಸಪ್ಪಳವು ನಿಧಾನಗತಿಯಲ್ಲಿ ಆರಂಭವಾಗುವುದು.

**ಕೋಲಾಟದ ವಿವಿಧ ಗತಿಗಳು**

ಒಬ್ಬನ ಕೋಲಿಗೆ ಮತ್ತೊಬ್ಬನ ಕೋಲನ್ನು ತಾಕಿಸುವ ಮೂಲಕ ಆರಂಭವಾಗುವ ಕೋಲಾಟ ಒಬ್ಬನಿಗೆ ಮತ್ತೊಬ್ಬ ಸುತ್ತು ಹೊಡೆಯುತ್ತಾ ಆಡುವುದು, ಗುಂಪಿನಲ್ಲಿಯೇ ಚದುರಿದಂತೆ ನಿಂತು ಹೊರಗಿನವರು ಒಳಗೂ, ಒಳಗಿನವನು ಹೊರಗೂ ಕೋಲನ್ನು ಕೊಡುವುದು, ಹೀಗೆ ಆಡುತ್ತಾ ಕುಳಿತು ಕೋಲು ಕೊಡುವುದು, ಎರಡು ಗುಂಪು ಎದುರುಬದುರು ನಿಂತು ಕೋಲು ಕೊಡುವುದು, ಇತ್ಯಾದಿಯಾಗಿ ವಿವಿಧ ಗತಿಯಲ್ಲಿ ಕೋಲಾಟವು ನಡೆಯುತ್ತದೆ. ಇವುಗಳಲ್ಲಿ ಮುಖ್ಯವಾದ ಕೆಲವು ಬಗೆಗಳನ್ನು ಗಮನಿಸಬಹುದಾಗಿದೆ.

**ಕೊರವಂಜಿ ಕೋಲಾಟ**

ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುವಂತಹ ಕಲೆಯಾಗಿದೆ. ಮೈಸೂರು, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗದ ಕಡೆಗಳಲ್ಲಿ ಕಾಣಬಹುದಾಗಿದೆ. ಹಾಡು ಮತ್ತು ಕುಣಿತದೊಂದಿಗೆ ಸಂಭಾಷಣೆಯು ಈ ಕಲೆಯಲ್ಲಿ ಸೇರಿಕೊಂಡಿರುವುದು. ಕೃಷ್ಣ ಕಥೆಯಲ್ಲಿ ಸತ್ಯಭಾಮ ಸ್ವರ್ಗದಲ್ಲಿದ್ದ ಪಾರಿಜಾತ ಗಿಡವನ್ನು ಭೂಲೋಕಕ್ಕೆ ತರಿಸಿದ ಚಂಡಿ ಕಥೆ ಜನಜನಿತವಾಗಿದೆ. ಚಂಡಿ ಎನಿಸಿದ ಸತ್ಯಭಾಮಳನ್ನು ಮುಖ್ಯ ಪಾತ್ರವಾಗಿಟ್ಟುಕೊಂಡು ಅವಳಿಗಾಗಿ ಕೃಷ್ಣ ಬೇಸ್ತು ಬೀಳುವುದನ್ನು ತಮ್ಮದೇ ಆದ ರೀತಿಯಲ್ಲಿ ನಿರೂಪಿಸುವ ಕ್ರಮವು ಈ ಕಲೆಯಲ್ಲಿರುವುದು. ಹಳ್ಳಿಗಳಲ್ಲಿ ಕಣಿ ಹೇಳುವವರು ಗಂಡಸಾದರೆ ಕೊರಮ ಎಂತಲೂ, ಹೆಂಗಸಾದರೆ ಕೊರಮಿ ಎಂತಲೂ ಕರೆಯುತ್ತಾರೆ. ಕೊರವಂಜಿಗೆ ಕರಿಪಟ್ಟಿಯ ರವಿಕೆ, ಮೊಣಕಾಲಿನವರಿಗೆ

ಕಂಬಿಸೀರೆ, 'ಬಾಳೆಕಾಯಿ' ಎನ್ನುವ ಸೊಂಟದ ಗಂಟಿಗೆ ಒಂದು ಪುಡಿಚೀಲ, ಹಣೆಗೆ ಅಗಲವಾದ ಕುಂಕುಮ, ದವಡೆಯಲ್ಲಿ ಎಲೆ ಅಡಿಕೆ ತಲೆಯ ಎಡಭಾಗಕ್ಕೆ ಏಡಿಗಂಟು, ಕಂಕುಳಲ್ಲಿ ಅಥವಾ ತಲೆಯ ಮೇಲೆ ಬೇವಿನ ಸೊಪ್ಪು ಹೆಡಿಗೆ, ಕಾಲಿಗೆ ಗೆಜ್ಜೆ, ಬಲಗೈಯಲ್ಲಿ ಕಣಿ ಕೋಲು ಹಿಡಿದು ಕಣಿ ಹೇಳುವ ಕೊರಮಿಯನ್ನು ಸೃಷ್ಟಿಸುತ್ತಾರೆ. ಕೊರಮ ಸಾಮಾನ್ಯವಾಗಿ ಒಂದು ನಿಲುವಂಗಿ, ಸೊಂಟಕ್ಕೆ ಕಟ್ಟಿದ ವಸ್ತ್ರ ಏರುಗಟ್ಟಿದ ಪಂಚೆ, ಹಣೆಯಲ್ಲಿ ಗೀರುನಾಮ, ತಲೆಗೆ ಸುತ್ತಿದ ಒಂದು ವಸ್ತ್ರ, ಕಾಲಿಗೆ ಗೆಜ್ಜೆ, ಕೈಯಲ್ಲಿ ಒಂದು ಬಿದಿರಿನ ದೊಣ್ಣೆ ಹಿಡಿದಿರುತ್ತಾನೆ. ಸಾಮಾನ್ಯವಾಗಿ ಕೋಲಾಟದ ವಿವಿಧ ಆಟಗಳು ಮುಗಿದ ಮೇಲೆಯೇ ಕೊರವಂಜಿ ಕೋಲು ಕಟ್ಟುವುದು. ಅದರ ಮುಖ್ಯ ಕಥೆ ಹೀಗೆ ಸಾಗುತ್ತದೆ. ಪ್ರಾರಂಭದಲ್ಲಿ ಎರಡು ಸಾಲಿನಲ್ಲಿ ಕುಳಿತ ಕೋಲಾಟಗಾರರು 'ತಾಳಗಟುಕ' ಹಾಕುತ್ತಾರೆ.

ಆಟದ ಓಣಿಯಲ್ಲಿ ಕೊರವಂಜಿ ಕಣಿ ಹೇಳುವವಳಂತೆ ಬರುತ್ತಾಳೆ. ಇವಳ ಕಣಿ ಹಾಡಿನ ರೂಪಕ್ಕೆ ತಿರುಗುತ್ತದೆ. ಕಣಿಯನ್ನು ಕೇಳಿ ಎದುರಾದ ಕೊರಮ ಇವಳನ್ನು ಕುರಿತು ತನಗೆ ಮತ್ತು ಊರಿಗೆ ಕಣಿ ಹೇಳಲು ಕೇಳುತ್ತಾನೆ. ಹಾಗೇ ಇವಳ ಪರಿಚಯವು ಆಗುತ್ತದೆ. ಆವೂರು ಈವೂರು ತಿರುಗಿ ಮೈಸೂರಿನ ಮಹಿಷಾಸುರನನ್ನು ನೋಡಿ ಬಂದವಳ ಮಾತಿಗೆ, ವೈಯ್ಯಾರಕ್ಕೆ, ಬೆಡಗಿಗೆ ಮನಸೋತು ಕೊರಮ ಇವಳ ಕೈ ಹಿಡಿಯಲು ಬಯಸುತ್ತಾನೆ. ಇವರಿಬ್ಬರ ಸಂಭಾಷಣೆಯು ಹಾಡಿನ ರೂಪದಲ್ಲಿ ಸಾಗುತ್ತದೆ. ಕೊರವಂಜಿ ಕೊರಮನ ಮಾತಿಗೆ ಒಪ್ಪಿ ತನ್ನ ಅಪ್ಪನನ್ನು ನಂಬಿಸಲು ಮುಂದಾಗುತ್ತಾಳೆ. ಬುಡುಬುಡಿಕೆ ವೇಷಧಾರಿಯಾಗಿ ಅಪ್ಪನ ಮುಂದೆ ನಿಂತು. "ನಿನ್ನ ಮನೆ ಉದ್ಧಾರವಾಗಬೇಕಾದರೆ, ನಿನ್ನ ಮಗಳನ್ನು ಇದೇ ಊರಿನ ಕೊರಮನಿಗೆ ಕೊಟ್ಟು ಲಗ್ನ ಮಾಡು" ಎಂದು ಹೇಳುತ್ತಾನೆ. ನಂತರ ಇವರ ವಿವಾಹವು ನಡೆಯುವುದು. ಕೊರವಂಜಿ ಆಟದಲ್ಲಿ ಹಾಡು, ಕಥನಗೀತೆ, ಒಡಬು, ಹೊಗಳಿಕೆ ಬೈಗುಳ, ವ್ಯಂಗ್ಯ ಒಳಗೊಂಡಿರುವುದು.

**ಜಡೆ ಕೋಲಾಟ**

ನಿರ್ದಿಷ್ಟ ಅಂತರದಲ್ಲಿ ಎರಡು ಮರದ ಗಳುಗಳನ್ನು ನೆಟ್ಟು ಅವುಗಳ ತುದಿಗೆ ಅಡ್ಡಗಳುವೊಂದನ್ನು ಕಟ್ಟುತ್ತಾರೆ. ನೆಲದಿಂದ ಸುಮಾರು ಹನ್ನೆರಡು ಅಡಿ ಎತ್ತರವಿರುವ ಈ ಅಡ್ಡ ಗಳುವಿಗೆ ಕಲಾವಿದರ ಸಂಖ್ಯೆಯ ಆಧಾರದ ಮೇಲೆ ಹನ್ನೆರಡು ಅಥವಾ ಹದಿನಾರು ಹಗ್ಗಗಳನ್ನು ಕಟ್ಟಿ ಇಳಿಬಿಡಲಾಗುತ್ತದೆ. ಈ ಹಗ್ಗಗಳನ್ನು ಸೇರಿಸಿದ ಸೂತ್ರದ ರೀತಿಯ ಒಂಟಿ ಹಗ್ಗ ಅಡ್ಡಮರದ ನಡು ಭಾಗದಲ್ಲಿ ಇರುತ್ತದೆ. ಕೆಳಗೆ ಇಳಿಬಿದ್ದ ಹಗ್ಗಗಳನ್ನು ನಡುವಿಗೆ ಕಟ್ಟಿಕೊಂಡ ಕಲಾವಿದರು ಕೋಲು ಹಾಕುತ್ತಾ ಒಬ್ಬರನೊಬ್ಬರು ದಾಟುವ ಮೂಲಕ ಕಲಾತ್ಮಕವಾಗಿ ಗಂಟು ಹಾಕುತ್ತಾರೆ. ಜಡೆಯಂತೆ ಹೆಣೆದುಕೊಳ್ಳುವ ಹಗ್ಗವನ್ನು ಮತ್ತದೇ ರೀತಿಯಲ್ಲಿ ಬಿಡಿಸುತ್ತಾರೆ. ಜಡೆ ಹೆಣೆಯುವಾಗ ಚಾಮುಂಡಿ ಮೇಲೂ, ಜಡೆ ಬಿಚ್ಚುವಾಗ ಗೌರಿಯ ಮೇಲೂ ಹಾಡನ್ನು ಹಾಡುವರು.

**ಉದಾಹರಣೆಗೆ: ಜಡೆ ಹಾಕುವ ಹಾಡು**

ತಂದನ್ನು ತಾನು ತಂದೇ ನಾನು ।ತಾ।
ತಂದನ್ನು ತಾನು ತಂದೇ ನಾನು ॥
ಹುಟ್ಟಿದುತ್ತರದೇಶ । ಬೆಳದಿದ್ದು ಮಲೆನಾಡು।
ಬಂದು ಸೇರ್ಯಾಳೆ। ಮೈಸೂರ ॥ತಂದ॥
ಬಂದು ಸೇರ್ಯಾಳೆ ಮೈಸೂರು ॥ಚಾಮುಂಡಿ॥
ತೊಟ್ಟಾವ್ಳೆ ನೋಡು ಹುಲೀ ಚರ್ಮ ॥ತಂದ॥
ತೊಟ್ಟಾವ್ಳೆ ನೋಡು ಹುಲಿ ಚರ್ಮ ॥ಚಾಮುಂಡಿ॥
ಮಾಯಾದ ಬೂದಿ ಮಡುವಲ್ಲಿ ॥ತಂದ॥

ಮಾಯಾದ ಬೂದಿ ಮಡುಲಲ್ಲಿ ಇಟ್ಟುಕೊಂಡು ॥
ಮೈಷಾಸುರನ ಕಣ್ಕಿತ್ತು ॥ತಂದ॥
ಮೈಷಾಸುರನ ಕಣ್ಕಿತ್ತು ॥ಚಾಮುಂಡಿ॥

**ಕೋಲಾಟದ ಪದಗಳು**

ಪುರಾಣ, ಇತಿಹಾಸ, ದೈವ, ಸಾಮಾಜಿಕ ವಿಡಂಬನೆ, ಹೆಣ್ಣು–ಗಂಡಿನ ಪ್ರೇಮ, ಆಧ್ಯಾತ್ಮ ತತ್ವ, ಕುಟುಂಬ ಕಲ್ಯಾಣ, ಸಾಕ್ಷರತೆಗೆ ಸಂಬಂಧಿಸಿದಂತೆ ಹಾಡನ್ನು ಹಾಡುವರು.

**ಉದಾಹರಣೆಗೆ: ಕೋಲು ಕಡಿಯುವ ಹಬ್ಬ**

ಕೋಲು ಕೋಲೆ ಕೋಲನ್ನ ಕೋಲೆ
ಕೋಲ್ಹಬ್ದ ಬಂತು ಕೋಲು ಕಡಿಯಬೇಕು
ಕೋಲು ಕಡಿಯೊ ಹಬ್ಬ
ಯಾವ ಕೋಲು ಮಗನೆ
ದಶಮಿಯ ದಿನಕೆ ॥ಕೋಲನ್ನ ಕೋಲೆ॥

**ಉದಾಹರಣೆಗೆ: ಮೊದಲಿಗೆ ನೆನೆದೇವು**


ಮೊದಲಿಗೆ ನೆನದೇವು ಗಜಮುಖ ಲಿಂಗನ
ಸಿದ್ಧ ಮುಖ ಶಿವಲಿಂಗ ಬೆನಕನ
ಕುಂತೋರು ಹಿರಿಯರೆ, ನಿಂತೋರು ಕಿರಿಯರೆ
ಕೋಲು ತಪ್ಪಿದರೆ ನಗಬೇಡಿರಣ್ಣ ॥ಮೊದಲಿಗೆ॥

ಇಲ್ಲಿ ಕೋಲಾಟದವರು ಎರಡು ಗುಂಪು ಮಾಡಿಕೊಂಡು ಒಂದು ಗುಂಪಿನವರು ಹೆಣ್ಣಿನ ಪರವಾಗಿಯೂ ಇನ್ನೊಂದು ಗುಂಪಿನವರು ಗಂಡಿನ ಪರವಾಗಿಯೂ ಹಾಡುತ್ತಾರೆ.

ಹೀಗೆ ಕೋಲಾಟವು ಕನ್ನಡ ನಾಡಿನಾದ್ಯಂತ ತನ್ನದೇ ಆದ ವಿಶಿಷ್ಟ ಸಂಪ್ರದಾಯದೊಂದಿಗೆ ಪ್ರಚಲಿತದಲ್ಲಿದೆ. ಇಂತಹ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

***

## ಕನ್ನಡದ ರಾಷ್ಟ್ರಕವಿಗಳು



ಎಂ ಗೋವಿಂಧ ಪೈ



ಕುವೆಂಪು



ಜಿ. ಎಸ್ ಶಿವರುದ್ರಪ್ಪ

## ನಮ್ಮ ಸುತ್ತಮುತ್ತಲಿನ ಜನಪದ ನಂಬಿಕೆಗಳು

– ಪ್ರೇಮಾ ಮೇಗಳಮನಿ ಮತ್ತು
ಸಾವಿತ್ರಮ್ಮ ಎಸ್., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಜನಪದ ನಂಬಿಕೆಗಳು ಜನಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಅವು ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ಪ್ರಭಾವಬೀರಿ ಜೀವಂತವಾಗಿವೆ. ಜನತಾಭಾವದ ಅಭಿವ್ಯಕ್ತಿಗಳಾದ ಜನಪದ ನಂಬಿಕೆಗಳು, ಜನತೆಯ ಪರಂಪರಾಗತ ಜ್ಞಾನಸುಧೆ, ಸುಸಂಸ್ಕೃತ ಹೃದಯದ ಪರಿಪಕ್ವ ಅನುಭವದ ಸಾರವೆಂದು ಹೇಳಬಹುದು. ಹೀಗಾಗಿ ಇವು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೆರಿ, ಅವರ ಬದುಕನ್ನೇ ನಿಯಂತ್ರಿಸಿ ನಿರ್ದೇಶಿಸುವ ಪ್ರಮುಖ ಶಕ್ತಿಯಾಗಿ ಪರಿ ಣಮಿಸಿ, ಜನಪದ ಬದುಕಿಗೆ ವಜ್ರಕವಚವಾಗಿದೆ.

ಈ ಹಿನ್ನೆಲೆಯಲ್ಲಿ ಜನಪದ ನಂಬಿಕೆಗಳ ಒಂದು ಪ್ರಮುಖ ಅಂಗವಾದ 'ಮಾನವ ಸಂಬಂಧಿ ನಂಬಿಕೆ' ಗಳನ್ನು ಕುರಿತು ಇನ್ನು ನೋಡಬಹುದು. ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಶ್ಶಾಸ್ತ್ರ ಹಾಗೂ ಜಾನಪದ ವಿಜ್ಞಾನ ಮುಂತಾದ ಶಾಖೆಗಳ ಮಾನವನ ಸಂಬಂಧನಿಷ್ಠ, ಗುಣನಿಷ್ಠ, ಮನೋನಿಷ್ಠ ಹಾಗೂ ಆಚರಣೆನಿಷ್ಠ ಸರ್ವ ಸಂಗತಿಗಳು ಈ ಪ್ರಬಂಧದ ನೀಲನಕ್ಷೆಗೆ ಆಹಾರ ಒದಗಿಸುತ್ತವೆ. ಮನುಷ್ಯನ ವಿವಿಧ ಅವಸ್ಥೆ – ಆಚರಣೆಗಳಿಗೆ ಸಂಬಂಧಿಸಿದ ಭಾವ ಪ್ರಧಾನ ಹಾಗೂ ಕಲ್ಪನಾಪ್ರಧಾನ ಅಂಶಗಳೆಲ್ಲವೂ ಇದರಲ್ಲಿ ಸೇರುತ್ತವೆ. ಕಾಯುವ ದೇವರು, ಕಾಡುವ ದೆವ್ವ, ಉಪಕರಿಸುವ ಪ್ರಾಣಿ – ಪಕ್ಷಿ ಹಾಗೂ ಆಯುರಾರೋಗ್ಯ ನೀಡುವ ಸಸ್ಯ ಸಂಪತ್ತು ಮುಂತಾದವುಗಳ ನಿಕಟ ಸಂಪರ್ಕವು ಮಾನವನಿಗಿದೆಯಾದವರೂ, ಆ ಬಗ್ಗೆ ಪ್ರತ್ಯೇಕ ಪ್ರಬಂಧಗಳಿರುವದರಿಂದ ಅವನ್ನು ಹೊರತುಪಡಿಸಿ, ಕೇವಲ ಮಾನವನ ಆಂಗಿಕ ಆಚರಾಣಾತ್ಮಕ ಅಂಶಗಳಿಗೆ ಮಾತ್ರ ಪ್ರಬಂಧದ ವಿಷಯವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಹುಟ್ಟು ಸಾವುಗಳ ಮಾರ್ಗಮಧ್ಯದ ವೈವಿಧ್ಯಮಯವಾದ ಈ ಸಂಸಾರಯಾತ್ರೆಯಲ್ಲಿ ಲೆಕ್ಕವಿಡಲು ಬೇಸರಪಡುವಷ್ಟು ನಂಬಿಕೆಗಳು ಮನುಷ್ಯನ ಬಾಳಿನಲ್ಲಿ ಸೇರಿಕೊಂಡಿವೆಯಾದರೂ, ಆ ಎಲ್ಲ ನಂಬಿಕೆಗಳ ಮಹಾಂಬುಧಿಯನ್ನು ಈಜುವ ಸಾಹಸಕ್ಕೆ ತೊಡಗದೇ ಆಚಾರ–ವಿಚಾರ, ಕ್ರಿಯೆ–ಕಲ್ಪನೆಗಳಿಗೆ ಸಂಬಂಧಿಸಿದಂತೆ, ಮಾನವನು ಅಳವಡಿಸಿಕೊಂಡ ಆಂತರಿಕ ಮತ್ತು ಬಾಹ್ಯವ್ಯಕ್ತಿತ್ವದ ವಿಚಾರಗಳಿಗೆ ಮಾತ್ರ ಇಲ್ಲಿ ಒತ್ತು ಕೊಡಲಾಗಿದೆ. ನಿತ್ಯ ಜೀವನದಲ್ಲಿ ಅನ್ಯ ವ್ಯಕ್ತಿಯೊಂದಿಗೆ ಸಮೂಹದೊಂದಿಗೆ ಆತ ಇರಿಸಿಕೊಂಡ ನಿಕಟ ಸಂಪರ್ಕದಲ್ಲಿ ಬಂಗಾರದ ಎಳೆಯಂತೆ ಮಿಂಚುವ ವಿಧಿ ನಿಷೇಧಾತ್ಮಕ ನಂಬಿಕೆಗಳ ಸಂಗ್ರಹ ಹಾಗೂ ವಿಶ್ಲೇಷಣೆ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

ಮದುವೆ, ಗೃಹಜೀವನ, ಗರ್ಭಿಣಿ, ಕೂಸು, ಉಡುಗೆ –ತೊಡುಗೆ, ಹಬ್ಬ –ಹರಿದಿನ, ವಾರ –ನಕ್ಷತ್ರ, ಊಟ, ಯಾತ್ರೆ, ಪೂಜೆ, ನಿದ್ರೆ, ಕನಸು, ಆವಯವ, ರೋಗ, ಸುಳಿ ಶುಭಾ– ಶುಭಗಳ ಕಲ್ಪನೆ, ಶಕುನ ಹಾಗೂ ಶವ ಇವೇ ಮುಂತಾದ ವಿಷಯಗಳನ್ನೊಳಗೊಂಡ ಭಾವನಾತ್ಮಕ ಮಾನವ ಸಂಬಂಧಿ ನಂಬಿಕೆಗಳ ವಿಶ್ಲೇಷಣೆಯನ್ನು ಈ ಪ್ರಬಂಧ ಹೊಂದಿದೆ.

ಪ್ರಾಚೀನ ಕಾಡುಮಾನವನಿಂದ ಇತ್ತೀಚಿನ ನಾಡು ಮಾನವನವರೆಗೆ ಆಯಾ ಕಾಲಘಟ್ಟದ ಪರಿಜ್ಞಾನಕ್ಕೆ ತಕ್ಕಂತೆ ನಿತ್ಯ ಜೀವನದ ಆಚರಣೆಯ ಸತ್ಯ ಸಂಗತಿಗಳಾಗಿ ಮಾನವ ನಿಷ್ಠ ನಂಬಿಕೆಗಳು ಜನ್ಮ ತಾಳುತ್ತಲೇ ಬಂದಿವೆ. ನಂಬಿಕೆಯ ಬೆಸುಗೆಯಿಂದಲೇ ಪರಸ್ಪರ ಮಾನವ ಸಂಬಂಧದ ಕೊಂಡಿ ಗಟ್ಟಿಗೊಳ್ಳುತ್ತಲಿದೆಯೆಂಬುದಕ್ಕೆ

ಮಾನವನ ನಿತ್ಯ ಜೀವನವೇ ಸಾಕ್ಷಿಯಾಗಿದೆ. ಪ್ರಬುದ್ಧ ಧರ್ಮಗಳು ಬೆಳಕಿಗೆ ಬರುವ ಮುನ್ನ ನೈಸರ್ಗಿಕ ಧರ್ಮ ಮಾನವನನ್ನು ನಿಯಂತ್ರಿಸುತ್ತ ಬಂದ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ. ಈ ನೈಸರ್ಗಿಕ ಶಕ್ತಿಯ ಪ್ರಭಾವದಿಂದ ಅತಿಮಾನುಷ ಶಕ್ತಿಯ ಭಯಕ್ಕೊಳಗಾದ ಗತಕಾಲದ ಮಾನವ ಸಿಡಿಲು, ಮಿಂಚು, ಗಾಳಿ, ಬೆಂಕಿ ಮುಂತಾದ ನೈಸರ್ಗಿಕ ಶಕ್ತಿಗಳಿಂದ ಭಯಗೊಂಡು, ಅವುಗಳನ್ನು ದೈವತ್ವಕ್ಕೇರಿಸಿ ಪೂಜಿಸಲು ಪ್ರಾರಂಭಿಸಿದನೆಂದು ಕಾಣಿಸುತ್ತದೆ. ಈ ನೈಸರ್ಗಿಕ ನಂಬಿಕೆಗಳೇ ಶಕುನ ರೂಪದಲ್ಲಿ ಧಾರ್ಮಿಕ ನಿಯಮಗಳನ್ನು ಅಳವಡಿಸಿಕೊಂಡು, ಶಿಷ್ಟ ಸಂಪ್ರದಾಯಕ್ಕೆ ತಿರುಗಿ ಜ್ಯೋತಿಷ್ಯ ಸೃಷ್ಟಿಯಾಗಿರಬೇಕು.

ಜ್ಯೋತಿಷ್ಯ ಮಾನವನ ಶ್ರೇಯೋಭಿವೃದ್ಧಿಗೆ ಪೂರಕ ಹಾಗೂ ಮಾರಕವಾದ ಮಾಹಿತಿಯನ್ನು ಒದಗಿಸುವ ಮಾನವ ಸಂಬಂಧಿ ನಂಬಿಕೆಗಳ ವಿಶ್ವಕೋಶವೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ಶಿಷ್ಟರ ಜೋತಿಷ್ಯ, ಸಾಮಾನ್ಯರ ಶಕುನ ಹಾಗೂ ಜಾನಪದೀಯರ ಶಾಸ್ತ್ರ ಇವೇ ಮುಂತಾದವುಗಳ ಸಂಪರ್ಕ ಪಡೆದು ಮಾನವ ಸಂಬಂಧಿ ನಂಬಿಕೆಗಳು ವೈವಿಧ್ಯಮಯ ಸಂಸ್ಕಾರಕ್ಕನುಗುಣವಾಗಿ ಸಾಮೂಹಿಕ ಬೆಳವಣಿಗೆ ಪಡೆದು, ರಾಶಿರಾಶಿಯಾಗಿ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿವೆ. ಮಾನವ ಸಂಬಂಧಿ ನಂಬಿಕೆಗಳು ಬುದ್ಧಿಪೂರ್ವಕವಾಗಿ ಆಲೋಚನಾ ಹಂತಗಳನ್ನೇರಿ ಹೃದಯದಿಂದ ಮೂಡಿಬಂದ ಮಾನವ ಜೀವನದ ನಿತ್ಯನೇಮಗಳಾಗಿವೆ. ವೈಜ್ಞಾನಿಕ ಸತ್ಯ ಹಾಗೂ ಸಾಮಾನ್ಯ ತಿಳುವಳಿಕೆಗಳಿಂದ ಮಾನವನ ಅಂಧಶ್ರದ್ಧೆಯನ್ನು ತಿದ್ದುವದರೊಂದಿಗೆ, ಇವು ಅವರ ಚಿತ್ರಮಯ ಬದುಕಿಗೆ ಬರೆದಿಟ್ಟ ಸಚಿತ್ರ ಶಾಸನಗಳಾಗಿವೆ. ತಟ್ಟಿದರೆ ಶಿಕ್ಷೆ ಎನ್ನುವ ರೀತಿಯಲ್ಲಿ ಸಮಾಜದ ಬಹುಪಾಲು ಜನರು ಮುಚ್ಚುಮರೆಯಿಲ್ಲದೆ ಬಹು ಎಚ್ಚರಿಕೆಯಿಂದ ಇವುಗಳನ್ನು ಪಾಲಿಸುತ್ತ ಬಂದಿರುವರು.

ಮಾನವ ಸಂಬಂಧಿ ನಂಬಿಕೆಗಳು ವರ್ಗೀಕರಣ: ಜನಪದ ನಂಬಿಕೆಗಳ ವ್ಯವಸ್ಥಿತ ಅಧ್ಯಯನಕ್ಕೆ ವಿಷಯಾನುಕ್ರಮ ವರ್ಗೀಕರಣ ಅಗತ್ಯ. ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಜನಪದ ನಂಬಿಕೆಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಲು ಪ್ರಯತ್ನಿಸಿರುವರು. ಗಂಡಿನ ಬಲಗಣ್ಣು ಹಾಗೂ ಬಲಭುಜ ಅದಿರಿದರೆ ಶುಭವಾಗುವದು" "ಹೆಣ್ಣಿಗೆ ಎಡಗಣ್ಣು ಅದಿರಿದರೆ ಶುಭವಾಗುವದು"

ಉಪ್ಪು ತುಳಿದರೆ ಕಣ್ಣು ಕುರುಡಾಗುವವು ಇಂಥ ಕೆಲ ನಂಬಿಕೆಗಳು ಉಪಯುಕ್ತವೆಂದೇ ಹೇಳಬೇಕು. ಉಪ್ಪಿನಲ್ಲಿ ಅನ್ನದ ಸಾರವನ್ನು ಹೆಚ್ಚಿಸುವ ಗುಣವಿದೆ. ಅದಕ್ಕಾಗಿ 'ಉಪ್ಪಿಗಿಂತ ರುಚಿಯಿಲ್ಲ, ಎಂಬ ಮಾತು ಜನಭರಿತವಾಗಿದೆ. ಅನ್ನದ ಬಗ್ಗೆ ಇರುವ ಭಕ್ತಿ ಉಪ್ಪಿನ ಮೇಲೆಯೂ ಇರಬೇಕೆಂಬ ಬೋಧನೆ ಮಾಡುವಾಗ ಕಣ್ಣು ಕುರುಡಾಗುವವು' ಎಂಬ ಬೆದರಿಕೆ ಹಾಕಿರಬೇಕು. ಅನ್ನದೇವರೆಂಬಂತೆ ಉಪ್ಪಿನ ಬಗ್ಗೆಯೂ ದೈವೀಕಲ್ಪನೆ ಕುದುರಿಸುವದಕ್ಕಾಗಿ ಈ ಹಿತೋಕ್ತಿ ನಂಬಿಕೆಯ ರೂಪಧರಿಸಿ ಬಳಕೆಗೆ ಬಂದಿರಬೇಕು.

**ಕಣ್ಣನ್ನು ಕುರಿತ ಕೆಲ ಮೂಢನಂಬಿಕೆಗಳನ್ನು ಈ ಕೆಳಗಿನಂತೆ ಉದಾಹರಿಸಬಹುದು.**

'ಹುಬ್ಬಿನ ಕೂದಲು ಕೂಡಿದರೆ ನಪೂಂಸಕರಾಗುವರು" 'ಮೆಳ್ಳಗಣ್ಣಿನ ಸೊಸೆ ಇದ್ದರೆ ಮನೆ ಏರುತ್ತದೆ' "ಕರಿಕಣ್ಣಿನ ಹೆಣ್ಣನ್ನು ಮದುವೆಯಾದರೆ ಮಸಣ ಸಮೀಪ" ಇವೆಲ್ಲ ಕಣ್ಣನ್ನು ಕುರಿತ ರೂಢಿಯಲ್ಲಿರುವ ಅರ್ಥವಿಲ್ಲದ ನಂಬಿಕೆಗಳು.

ಕಾಯಕ ಮಾಡುವ ಕೈಗಳ ಬಗ್ಗೆ ಜನಪದೀಯರಲ್ಲಿ ಎಲ್ಲಿಲ್ಲದ ಅಭಿಮಾನ. ಸಮರ್ಥ ರೀತಿಯಲ್ಲಿ ಚಿಕಿತ್ಸೆ ನೀಡುವ ವೈದ್ಯರನ್ನು ಅವರ ಚಿಕಿತ್ಸೆಯ ರೀತಿಯನ್ನು ಗಮನಿಸದೇ 'ಕೈಗುಣ ಒಳ್ಳೆಯದು' ಎಂದು, ಕೊಟ್ಟ ದುಡ್ಡು

ಮರಳಿ ಬರದಾದಾಗ 'ಕೈಗುಣ ಕೆಟ್ಟದ್ದು' ಎಂದು ತೀರ್ಮಾನಿಸುವಲ್ಲಿ 'ಕೈ' ಮೊದಲ ಮಾತಾಗಿ ಬರುತ್ತದೆ ಈ ಅಂಗವನ್ನು ಕುರಿತು ಸಾಕಷ್ಟು ನಂಬಿಕೆಗಳು ರೂಢಿಯಲ್ಲಿವೆ.

"ತಲೆಯ ಮೇಲೆ ಕೈಹೊತ್ತು ಕುಳಿತರೆ ಬಡತನ ಬರುತ್ತದೆ" 'ಕೈಕಟ್ಟಿ ಕುಳಿತಕೊಂಡರೆ ದಾರಿದ್ರ್ಯ ಅಪ್ಪಳಿಸುತ್ತದೆ' ಎಂಬ ನಂಬಿಕೆಗಳು ಚಿಂತೆ ಹಾಗೂ ದಾರಿದ್ರ್ಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದು, ಕೆಲಸ ಮಾಡುವ ಕೈಗಳನ್ನು ಬಂಧಿಸಿ ಕೂಡುವುದು ಒಳ್ಳೆಯದಲ್ಲ. ಕಾರ್ಯಶೀಲನಾಗು, ಕ್ರಿಯಾಶೀಲತೆಯಿಂದ ಏನೆಲ್ಲವನ್ನೂ ಪಡೆಯಲು ಸಾಧ್ಯವೆಂಬ ಪರೋಕ್ಷ ಬೋಧನೆ ಇಂಥ ನಂಬಿಕೆಗಳಿಗೆ ಹಿನ್ನೆಲೆಯಾಗಿದೆ. 'ಕೈಕೆಸರಾದರೆ ಬಾಯಿ ಮೊಸರು' ಎಂಬ ನಾಣ್ಣುಡಿ ಇಂಥ ನಂಬಿಕೆಗಳಿಗೆ ಪೋಷಣೆ ನೀಡುವದು.

'ಆಕಳಿಸುವಾಗ ಕೈಬೆರಳ ಚಟಕಿ ಹೊಡೆಯಬಾರದು' ಆಕಳಿಕೆ ನಿದ್ರೆಯ ಸೂಚನೆಯನ್ನು ನೀಡುವದಾಗಿದೆ. ಬಾಯಿಗೆ ಅಂಗೈ ಮುಚ್ಚಿ ಆಕಳಿಸುವದು ಆರೋಗ್ಯದಾಯಕ ಲಕ್ಷಣ. ಆಕಳಿಸುವಾಗ ಏದುಸಿರನ್ನು ಒಳಗೆ ಎಳೆದುಕೊಂಡು ಹೊರಗೆ ಬಿಡುವ ಕ್ರಿಯೆ ನಡೆಯುವದು. ಆಕಳಿಸುವ ವ್ಯಕ್ತಿ ರೋಗದಿಂದ ಬಳಲುವವನಾಗಿದ್ದರೆ, ಆತನ ಅಂತರಾಳದಿಂದ ಬರುವ ಬಿರುಸಿನ ಬಿಸಿಯುಸಿರು ಎದುರಿಗೆ ಕುಳಿತವರಿಗೆ ಬಡಿಯದಿರಲೆಂದು, 'ಅಂಗೈಯಿಂದ ಬಾಯಿಮುಚ್ಚಿ ಆಕಳಿಸುವದು ಆರೋಗ್ಯದಾಯಕ' ಎಂಬ ನಂಬಿಕೆ ರೂಢಿಯಲ್ಲಿ ಬಂದಿರಬೇಕು

"ಆರು ಬಟ್ಟಿನ ಕೂಸು ಹುಟ್ಟಿದರೆ ಅನ್ನ ಹೆಚ್ಚುವದು."

"ಮುತ್ತೈದೆಯರು ಮುಂಗೈಗೆ ಹಸಿರು ಬಳೆ ಧರಿಸಬೇಕು."

ಎರಡೂ ಕೈಗಳಿಂದ ತಲೆ ತುರಿಸಬಾರದು ಇವೆಲ್ಲ 'ಕೈ'ಯನ್ನು ಕುರಿತ ಆರೋಗ್ಯದಾಯಕ ನಂಬಿಕೆಗಳಾದರೆ, ಅರ್ಥವಿಲ್ಲದ ಕೆಲ ನಂಬಿಕೆಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

ಉದಾ. "ಅಂಗೈ ತುರಿಸಿದರೆ ರೊಕ್ಕ ಖರ್ಚಾಗುವವು"

"ಹೆಣ್ಣು ಮಕ್ಕಳ ಕೈಮೇಲೆ ಕೂದಲು ಇದ್ದರೆ ಬೇಗನೆ ಅಮಂಗಲೆಯರಾಗುವರು."

ಇಂಥ ನಂಬಿಕೆಗಳಿಗೆ ಅರ್ಥ ಹುಡುಕುವದು ಕಷ್ಟದ ಕೆಲಸವೆಂದೇ ಹೇಳಬೇಕು.

'ಮೂಗು', ಮುಖಕ್ಕೆ ಮೆರಗು ತರುವ ಪ್ರಮುಖ ಅಂಗ. ಅದು ನೀಟಾಗಿರಬೇಕೆಂಬುದೇ ಸರ್ವರ ಅಭಿಲಾಷೆ. ಸೌಂದರ್ಯವರ್ಣನೆಯ ಸಂದರ್ಭದಲ್ಲಿ ಮೂಗನ್ನು ಸಂಪಿಗೆ ಎಸಳಿಗೆ ಹೋಲಿಸಿ ಹೇಳುವ ಸನ್ನಿವೇಶಗಳು ಸಾಹಿತ್ಯದಲ್ಲಿ ವಿಪುಲವಾಗಿ ಬೆಳೆದು ಬಂದಿವೆ. 'ಬಟ್ಟನ್ನು ಮುಖಕ್ಕೆ ನೆಟ್ಟನ್ನು ಮೂಗು' ಎಂದು ಜನಪದ ಗೀತೆಗಳಲ್ಲಿ ವರ್ಣಿಸಲಾಗಿದೆ. ಅದಕ್ಕಾಗಿ ಎದ್ದು ಕಾಣುವ ಮೂಗು ಸೌಂದರ್ಯದ ಹೆಚ್ಚಳಕ್ಕೆ ಪೂರಕವೆಂಬ ಕಲ್ಪನೆಯಿಂದ 'ಮೂಗು ಉದ್ದ ಇದ್ದವರು ಪುಣ್ಯವಂತರು' ಎಂಬ ನಂಬಿಕೆ ಹುಟ್ಟಿಕೊಂಡಿದೆ. ಮೂಗಿಗೂ ಪುಣ್ಯವಂತರಾಗುವದಕ್ಕೂ ಯಾವುದೇ ಸಂಬಂಧವಿಲ್ಲದೇ ಹೋದರೂ ಸಹ, ಚಪ್ಪಟೆ ಮೂಗು ಸೌಂದರ್ಯವರ್ಧಕ ಅಲ್ಲವೆಂಬ ಬೋಧನೆಯನ್ನು ನಾವಿಲ್ಲಿ ಅರಿಯುತ್ತೇವೆ.

ಹೀಗೆ ಜನಪದ ನಂಬಿಕೆಗಳು ಜನರ ದಿನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಕೆಲವು ಸಲ ಅವರ ನಂಬಿಕೆಯನ್ನು ಹೆಚ್ಚಿಸುತ್ತವೆ. ಮತ್ತು ಕೆಲವು ಸಂದರ್ಭಗಳಲ್ಲಿ ಸನ್ನಿವೇಶ ಹಾಗೂ ಸಮಯಕ್ಕೆ ವಿರುದ್ದವಾಗಿ ಪರಿಣಮಿಸುವುದನ್ನು ಸಹ ಕಾಣಬಹುದಾಗಿದೆ.

***

## ಭಾರತ ರತ್ನ ಪ್ರಶಸ್ತಿ ಪುರಸ್ಕೃತರ ಪಟ್ಟಿ

– ಜಿ ಉಮಾದೇವಿ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಭಾರತ ರತ್ನ ಭಾರತದ ನಾಗರಿಕರಿಗೆ ದೊರೆಯಬಹುದಾದ ಅತ್ಯುನ್ನತ ಪ್ರಶಸ್ತಿ. ಭಾರತ ರತ್ನ ಪ್ರಶಸ್ತಿಯನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಾರ್ವಜನಿಕ ಸೇವೆ ಮತ್ತಿತರ ಕ್ಷೇತ್ರಗಳಲ್ಲಿ ಅತಿ ದೊಡ್ಡ ಸಾಧನೆಗಳನ್ನು ತೋರಿದ ಗಣ್ಯರಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು 1954 ರಲ್ಲಿ ಆರಂಭಿಸಲಾಯಿತು. ಆಗ ಈ ಪ್ರಶಸ್ತಿಯನ್ನು ಯಾರಿಗೂ ಮರಣಾನಂತರ ಪ್ರಧಾನ ಮಾಡುವ ಉದ್ದೇಶವಿರಲಿಲ್ಲ.

ಮಹಾತ್ಮ ಗಾಂಧಿಯವರಿಗೆ ಈ ಪ್ರಶಸ್ತಿ ದೊರಕದ್ದಕ್ಕೆ ಪ್ರಮುಖ ಕಾರಣ ಇದೇ ಇದ್ದೀತು. 1966ರ ನಂತರ ಮರಣಾನಂತರವೂ ಈ ಪ್ರಶಸ್ತಿಯನ್ನು ಪ್ರದಾನ ಮಾಡಲು ಅವಕಾಶ ಸೃಷ್ಟಿಯಾಯಿತು (ಇದುವರೆಗೆ ಒಟ್ಟು ಹದಿನಾಲ್ಕು ವ್ಯಕ್ತಿಗಳಿಗೆ ಅವರ ಮರಣಾನಂತರ ಭಾರತ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ).

ಭಾರತ ರತ್ನ ಪ್ರಶಸ್ತಿಯನ್ನು ಪಡೆಯುವ ವ್ಯಕ್ತಿ ಭಾರತೀಯ ನಾಗರಿಕರಾಗಿರಬೇಕೆಂಬ ನಿಯಮವೇನಿಲ್ಲದಿದ್ದರೂ ಸಾಮಾನ್ಯವಾಗಿ ಇದನ್ನು ಪಾಲಿಸಲಾಗುತ್ತದೆ. ಭಾರತೀಯ ನಾಗರಿಕರಲ್ಲದಿದ್ದರೂ ಈ ಪ್ರಶಸ್ತಿಯನ್ನು ಪಡೆದ ಇಬ್ಬರೇ ವ್ಯಕ್ತಿಗಳೆಂದರೆ ನೆಲ್ಸನ್ ಮಂಡೇಲಾ (1990ರಲ್ಲಿ) ಮತ್ತು ಖಾನ್ ಅಬ್ದುಲ್ ಗಫಾರ್ ಖಾನ್ (1987ರಲ್ಲಿ).

ಪ್ರಶಸ್ತಿ ಪದಕದ ಮೊದಲ ವಿನ್ಯಾಸದಂತೆ ವೃತ್ತಾಕಾರದ ಚಿನ್ನದ ಪದಕದ ಮೇಲೆ ಸೂರ್ಯನ ಚಿತ್ರ ಮತ್ತು ದೇವನಾಗರಿ ಲಿಪಿಯಲ್ಲಿ **"ಭಾರತ ರತ್ನ"**, ಮತ್ತು ಹಿಂಭಾಗದಲ್ಲಿ ಭಾರತದ ರಾಷ್ಟ್ರೀಯ ಚಿಹ್ನೆ ಮತ್ತು **"ಸತ್ಯಮೇವ ಜಯತೇ"** ಎಂದು ಬರೆಯಬೇಕೆಂದಿದ್ದಿತು. ಈ ವಿನ್ಯಾಸದ ಯಾವುದೇ ಪದಕವನ್ನು ಉಪಯೋಗಿಸಲಾಗಿಲ್ಲ. ಮುಂದಿನ ವರ್ಷವೇ ಪದಕದ ವಿನ್ಯಾಸವನ್ನು ಬದಲಾಯಿಸಲಾಯಿತು.

### ಪ್ರಶಸ್ತಿಗೆ ಭಾಜನರಾದ ವರ್ಷ – ಪುರಸ್ಕೃತರ ಹೆಸರು ಮತ್ತು ಅವರ ರಾಜ್ಯ/ ದೇಶ

1) 1954 – ಎಸ್ ರಾಧಾಕೃಷ್ಣನ್ – ಆಂಧ್ರಪ್ರದೇಶ
2) 1954 – ಸಿ. ರಾಜಗೋಪಾಲಚಾರಿ – ತಮಿಳುನಾಡು
3) 1954 – ಡಾ. ಸಿ. ವ್ಹಿ. ರಾಮನ್ – ತಮಿಳುನಾಡು
4) 1955 – ಭಗವಾನದಾಸ – ಉತ್ತರ ಪ್ರದೇಶ
5) 1955 – ಸರ್. ಎಮ್. ವಿಶ್ವೇಶ್ವರಯ್ಯ – ಕರ್ನಾಟಕ
6) 1955 – ಜವಾಹರಲಾಲ್ ನೆಹರು – ಉತ್ತರ ಪ್ರದೇಶ
7) 1957 – ಪಂ. ಗೋ. ವಲ್ಲಭಿ ಪಂಥ – ಉತ್ತರ ಪ್ರದೇಶ
8) 1958 – ಧೊಂಡೊ ಕೇಶವ ಕರ್ವೆ – ಮಹಾರಾಷ್ಟ್ರ
9) 1961 – ಬಿಧಾನ್ ಚಂದ್ರ ರಾಯ್ – ಪಶ್ಚಿಮ ಬಂಗಾಳ
10) 1961 – ಪುರುಷೋತ್ತಮದಾಸ ಟಂಡನ್ – ಉತ್ತರ ಪ್ರದೇಶ
11) 1962 – ಡಾ. ರಾಜೇಂದ್ರ ಪ್ರಸಾದ್ – ಬಿಹಾರ
12) 1963 – ಜಾಕೀರ್ ಹುಸೇನ್ – ಉತ್ತರ ಪ್ರದೇಶ

13) 1963 – ಡಾ. ಪಾಂಡುರಂಗ ವಾಮನ ಕಾಣೆ – ಮಹಾರಾಷ್ಟ್ರ
14) 1966 – ಲಾಲ್ ಬಹಾದ್ದೂರ ಶಾಸ್ತ್ರೀ – ಉತ್ತರ ಪ್ರದೇಶ
15) 1971 – ಇಂದಿರಾಗಾಂಧಿ – ಉತ್ತರ ಪ್ರದೇಶ
16) 1975 – ವ್ಹಿ. ವ್ಹಿ. ಗಿರಿ – ಒಡಿಶಾ
17) 1976 – ಕೆ. ಕಾಮರಾಜ್ – ತಮಿಳುನಾಡು
18) 1980 – ಮಧರ್ ಥೆರಿಸಾ –ಪಶ್ಚಿಮ ಬಂಗಾಳ (ಉತ್ತರ ಮ್ಯಾಸಿಡೋನಿಯಾ)
19) 1983 – ವಿನೋಬಾ ಭಾವೆ – ಮಹಾರಾಷ್ಟ್ರ
20) 1987 – ಖಾನ್ ಅಬ್ದುಲ್ ಗಫಾರಖಾನ್ – ಪಾಕಿಸ್ತಾನ
21) 1988 – ಎಂ. ಜಿ. ರಾಮಚಂದ್ರನ್ – ತಮಿಳುನಾಡು
22) 1990 – ಡಾ. ಅಂಬೇಡ್ಕರ್ – ಮಹಾರಾಷ್ಟ್ರ
23) 1990 – ನೆಲ್ಸನ್ ಮಂಡೇಲಾ – ದಕ್ಷಿಣ ಆಫ್ರಿಕಾ
24) 1991 – ಮೊರಾರ್ಜಿ ದೇಸಾಯಿಯ – ಗುಜರಾತ್
25) 1991 – ರಾಜೀವ್ ಗಾಂಧೀ – ಉತ್ತರ ಪ್ರದೇಶ
26) 1991 – ಸರ್ದಾರ್ ಪಟೇಲ್ – ಗುಜರಾತ್
27) 1992 – ಜೆ. ಆರ್. ಡಿ. ಟಾಟಾ – ಮಹಾರಾಷ್ಟ್ರ
28) 1992 – ಮೌಲಾನಾ ಅಬ್ದುಲ್ ಕಲಾಂ ಆಜಾದ್ – ಪಶ್ಚಿಮ ಬಂಗಾಳ
29) 1992 – ಸತ್ಯಜಿತ್ ರೇ – ಪಶ್ಚಿಮ ಬಂಗಾಳ
30) 1997 – ಗುಲ್ಜಾರಿಲಾಲ್ ನಂದಾ – ಪಂಜಾಬ್
31) 1997 – ಅರುಣಾ ಅಸಫ್ ಅಲಿ – ಪಶ್ಚಿಮ ಬಂಗಾಳ
32) 1997 – ಎ. ಪಿ. ಜೆ. ಅಬ್ದುಲ್ ಕಲಾಂ – ತಮಿಳುನಾಡು
33) 1998 – ಎಂ. ಎಸ್. ಸುಬ್ಬುಲಕ್ಷ್ಮಿ – ತಮಿಳುನಾಡು
34) 1998 – ಸಿ. ಸುಬ್ರಹ್ಮಣ್ಯಂ – ತಮಿಳುನಾಡು
35) 1999 – ಜಯಪ್ರಕಾಶ ನಾರಾಯಣ – ಬಿಹಾರ
36) 1999 – ಅಮರ್ತ್ಯಸೇನ್ – ಪಶ್ಚಿಮ ಬಂಗಾಳ
37) 1999 – ರವಿಶಂಕರ್ – ಪಶ್ಚಿಮ ಬಂಗಾಳ
38) 1999 – ಗೋಪಿನಾಥ್ ಬೋರ್ಡೋಲೋಯಿ – ಅಸ್ಸಾಂ
39) 2001 – ಉ. ಬಿಸ್ಮಲ್ಲಾಖಾನ್ – ಉತ್ತರ ಪ್ರದೇಶ
40) 2001 – ಲತಾ ಮಂಗೇಶ್ಕರ್ –ಮಹಾರಾಷ್ಟ್ರ
41) 2008 – ಭೀಮಸೇನ ಜೋಶಿ – ಕರ್ನಾಟಕ
42) 2013 – ಸಚಿನ್ ತೆಂಡೂಲ್ಕರ್ – ಮಹಾರಾಷ್ಟ್ರ
43) 2013 – ಸಿ. ಎನ್. ಆರ್. ರಾವ್ – ಕರ್ನಾಟಕ

44) 2015 – ಮದನ ಮೋಹನ ಮಾಳ್ವೀಯಾ – ಉತ್ತರ ಪ್ರದೇಶ

45) 2015 – ಅಟಲ ಬಿಹಾರಿ ವಾಜಪೇಯಿ – ಮಧ್ಯಪ್ರದೇಶ

46) 2019 – ಪ್ರಣಬ್ ಮುಖರ್ಜಿ – ಪಶ್ಚಿಮ ಬಂಗಾಳ

47) 2019 – ಭೂಪೇನ್ ಹಜಾರಿಕಾ – ಅಸ್ಸಾಂ

48) 2019 – ನಾನಾಜಿ ದೇಶಮುಖ್ – ಮಹಾರಾಷ್ಟ್ರ

***

## ಕವಿಗಳು – ಸಾಹಿತಿಗಳು ಮತ್ತು ಅವರ ಕಾವ್ಯನಾಮ

– ಮೇಘಾ ಕೆ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

1. ಅಜ್ಜಂಪುರ ಸೀತಾರಾಂ – ಆನಂದ
2. ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ – ಅ. ನ. ಕೃ
3. ಅರಗದ ಲಕ್ಷ್ಮಣರಾವ್ – ಹೊಯ್ಸಳ
4. ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ – ಅ. ರಾ. ಮಿತ್ರ
5. ಆದ್ಯರಂಗಾಚಾರ್ಯ – ಶ್ರೀರಂಗ
6. ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿ – ಕೆ. ಎಸ್. ಎನ್
7. ಕೆ. ವಿ. ಪುಟ್ಟಪ್ಪ – ಕುವೆಂಪು
8. ಕುಂಬಾರ ವೀರಭದ್ರಪ್ಪ – ಕುಂವೀ
9. ಕಯ್ಯಾರ ಕಿಞ್ಞಣ್ಣರೈ – ದುರ್ಗಾದಾಸ
10. ಕಸ್ತೂರಿ ರಘುನಾಥಚಾರ ರಂಗಾಚಾರ – ರಘುಸುತ
11. ಕುಳಕುಂದ ಶಿವರಾಯ – ನಿರಂಜನ
12. ಕೆ. ಪಿ. ಪೂರ್ಣಚಂದ್ರ ತೇಜಸ್ವಿ – ಪೂಚಂತೇ
13. ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ – ಜಿ ಎಸ್ ಎಸ್
14. ಗೋವಿಂದಾಚಾರ್ಯ ಭೀಮಾಚಾರ್ಯ ಜೋಷಿ –ಜಡಭರತ
15. ಚನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ – ಮಧುರಚೆನ್ನ
16. ಚಂದ್ರಶೇಖರ ಪಾಟೀಲ – ಚಂಪಾ
17. ಜಾನಕಿ ಶ್ರೀನಿವಾಸ ಮೂರ್ತಿ – ವೈದೇಹಿ
18. ತಳುಕಿನ ರಾಮಾಸ್ವಾಮಿ ಸುಬ್ಬರಾವ್ – ತ. ರಾ. ಸು.
19. ತಿರುಮಲೆ ರಾಜಮ್ಮ – ಭಾರತಿ
20. ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯ –ತೀನಂಶ್ರೀ
21. ದ. ರಾ. ಬೇಂದ್ರೆ – ಅಂಬಿಕಾತನಯದತ್ತ
22. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ – ಡಿವಿಜಿ

23. ದೇ. ಜವರೇಗೌಡ – ದೇಜಗೌ
24. ದೊಡ್ಡರಂಗೇಗೌಡ – ಮನುಜ
25. ದೇವುಡು ನರಸಿಂಹ ಶಾಸ್ತ್ರಿ – ಕುಮಾರ ಕಾಳಿದಾಸ
26. ನಂದಳಿಕೆ ಲಕ್ಷ್ಮೀನಾರಾಯಣ – ಮುದ್ದಣ
27. ಪಾಟೀಲ ಪುಟ್ಟಪ್ಪ – ಪಾಪು
28. ಪಂಜೆ ಮಂಗೇಶರಾಯ – ಕವಿಶಿಷ್ಯ
29. ಪುರೋಹಿತ ತಿರುನಾರಾಯಣ ನರಸಿಂಗರಾವ್ – ಪುತಿನ
30. ರಾಯಸಂ ಭಿಮಸೇನರಾವ್ – ಬೀಚಿ
31. ಬಾಳಾಚಾರ್ಯ ಗೊಪಾಲಚಾರ್ಯ ಸಕ್ಕರಿ – ಶಾಂತಕವಿ
32. ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ – ಬಿಎಂಶ್ರೀ
33. ಬೆಟಗೇರಿ ಕೃಷ್ಣಶರ್ಮ – ಆನಂದಕಂದ
34. ಅಂಬಳ ರಾಮಕೃಷ್ಣಶಾಸ್ತ್ರಿ – ಶ್ರೀಪತಿ
35. ಎ. ಆರ್. ಕೃಷ್ಣಶಾಸ್ತ್ರಿ – ಎ. ಆರ್. ಕೃ
36. ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಶ್ರೀನಿವಾಸ
37. ರಾಮೇಗೌಡ – ರಾಗೌ
38. ವಿನಾಯಕ ಕೃಷ್ಣ ಗೋಕಾಕ್ – ವಿನಾಯಕ
39. ವೆಂಕಟೇಶ ತಿರುಕೊ ಕುಲಕರ್ಣಿ – ಗಳಗನಾಥ
40. ಸಿದ್ದಯ್ಯಪುರಾಣಿಕ – ಕಾವ್ಯಾನಂದ
41. ಎಂ. ಆರ್. ಶ್ರೀನಿವಾಸಮೂರ್ತಿ – ಎಂ. ಆರ್. ಶ್ರೀ
42. ಸಿ. ಪಿ. ಕೃಷ್ಣಕುಮಾರ್ – ಸಿ. ಪಿ. ಕೆ
43. ಎಚ್.ಎಸ್.ಅನುಸೂಯ – ತ್ರಿವೇಣ

***

**ಶಿಕಾರಿಪುರ ತಾಲ್ಲೂಕಿನ ಶಿವಶರಣರು**



**ಅಲ್ಲಮಪ್ರಭು**



**ಅಕ್ಕಮಹಾದೇವಿ**



**ಸತ್ಯಕ್ಕ**

## ಜನಪದ ಕಲೆಯಲ್ಲಿ ವೀರಗಾಸೆಯ ವೈಶಿಷ್ಟತೆ

– ಶಶಿಕುಮಾರ ಗಂಟೇರ., ನಾಲ್ಕನೆ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಪೌರಾಣಿಕ ಕಥೆಯನ್ನು ಆಧಾರಿಸಿದ ಈ ವೀರಗಾಸೆ ಕುಣಿತವು ದಕ್ಷಬ್ರಹ್ಮ ಮತ್ತು ಈಶ್ವರನಿಗೆ ಸೇರಿದ ಒಂದು ಸುಂದರ ಕತನವಾಗಿದೆ. ಒಮ್ಮೆ ದಕ್ಷಬ್ರಹ್ಮನೂ ಒಂದು ಯಜ್ಞವನ್ನು ತನ್ನ ಮನೆಯಲ್ಲಿ ಇಟ್ಟುಕೊಂಡಾಗ ತನ್ನ ಮಗಳನ್ನು ಮತ್ತು ಅಳಿಯನನ್ನು ಕರೆಯುವುದಿಲ್ಲದಿರುವಾಗ ನಡೆಯುವ ಒಂದು ಘಟನಾವಾಳಿಯ ಚಿತ್ರಣ.

ದಕ್ಷಬ್ರಹ್ಮನಿಗೂ ಅವನ ಅಳಿಯನಾದ ಈಶ್ವರನಿಗೂ ವೈರತ್ವ ಬಂದು ದಕ್ಷಬ್ರಹ್ಮನು ತಾನು ಮಾಡುವ ಯಾಗಕ್ಕೆ ಈಶ್ವರನನ್ನು ಬಿಟ್ಟು ಉಳಿದ ದೇವಾನುದೇವತೆಗಳನ್ನು ಆಹ್ವಾನಿಸುತ್ತಾನೆ. ಯಜ್ಞದಲ್ಲಿ ಈಶ್ವರನಿಗೆ ನ್ಯಾಯವಾಗಿ ಸಲ್ಲಬೇಕಾದ ಆವಿರ್ಭಾಗವನ್ನು ಕೊಡದೆ ತಿರಸ್ಕರಿಸುತ್ತಾನೆ. ಈಶ್ವರನು ಬೇಡವೆಂದರೂ ತಂದೆ ಮಾಡುವ ಯಾಗದಲ್ಲಿ ಭಾಗವಹಿಸಲು ಪಾರ್ವತಿ ಬರುತ್ತಾಳೆ.

ದಕ್ಷಬ್ರಹ್ಮ ಅಳಿಯನ ಮೇಲಿನ ಕೋಪದಿಂದ, ಮಗಳೆಂಬ ಮಮತೆಯನ್ನೂ ತೊರೆದು, ಕಂಡೂ ಕಾಣದಂತೆ ತಿರಸ್ಕಾರವಾಗಿ ಕಾಣುತ್ತಾನೆ. ಅವಳೆದುರಿಗೆ ಈಶ್ವರನನ್ನು ನಿಂದಿಸುತ್ತಾನೆ. ಇದನ್ನು ಕೇಳಿದ ಪಾರ್ವತಿ ಸಹಿಸಲಾಗದೆ, ಪತಿನಿಂದೆಯನ್ನು ಹೊತ್ತು ಕೈಲಾಸಕ್ಕೆ ಹಿಂದಿರುಗಲಾಗದೆ ಅಗ್ನಿಕೊಂಡ ಹಾಳಾಗಿ ಹೋಗಲಿ, ನಿನ್ನ ಹೆಣ್ಣು ಮಕ್ಕಳು ಮುಂಡೆಯರಾಗಲಿ, ಆಗಸ ತೂಕದ ಚಿನ್ನವಿಲ್ಲದಂತಾಗಲಿ, ಭೂಮಿ ತೂಕದ ಬೆಳ್ಳಿಯಿಲ್ಲದಂತಾಗಲಿ ಎಂದು ತಂದೆಗೆ ಶಾಪವನ್ನು ಕೊಟ್ಟು ಅಗ್ನಿಕುಂಡಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆಗ ಇದೆಲ್ಲವನ್ನೂ ಏಕದೃಷ್ಟಿಯಿಂದ ಗಮನಿಸಿದ ಈಶ್ವರನು ಉಗ್ರವಾಗಿ ತಾಂಡವ ನೃತ್ಯವನ್ನು ಮಾಡುವಾಗ ಹಣೆಯ ಮೇಲೆ ಬಂದ ಬೆವರಿನ ಹನಿಗಳನ್ನು ಸೆಳೆದು ತೆಗೆದು ನೆಲಕ್ಕೆ ಅಪ್ಪಳಿಸುತ್ತಾನೆ.

ನೂರೊಂದು ಆಯುಧಗಳನ್ನು ಧರಿಸಿದಂತಹ ವೀರಭದ್ರನ ಜನನವಾಗುತ್ತದೆ. ಆಗ ಸಪ್ತ ಸಮುದ್ರಗಳು ಬತ್ತಿಹೋದವು. ಹುಟ್ಟಿದ ಮರುಕ್ಷಣದಲ್ಲಿಯೇ ವೀರಭದ್ರನು ಲೋಕವನ್ನೇ ಬಿಲ್ಲು ಮಾಡಿಕೊಂಡು, ಭೂಮಿಯನ್ನೇ ಬಾಣವನ್ನಾಗಿ ಮಾಡಿಕೊಂಡು, ತಂದೆಯೇ ನಮಗೆ ವೈರಿ ಯಾರು? ಎಂದು ಕೇಳುತ್ತಾನೆ. ಅದಕ್ಕೆ ಶಿವನು ದಕ್ಷಬ್ರಹ್ಮನೆಂದು ಹೇಳಿ ಅವನದು ಮುನ್ನೂರ ಅರವತ್ತು ಗಾವುದ ಪಟ್ಟಣ, ಅದಕ್ಕೆ ಮುನ್ನೂರ ಅರವತ್ತು ಬಾಗಿಲು, ಒಂದೊಂದು ಬಾಗಿಲಿಗೂ ಒಬ್ಬೊಬ್ಬ ರಾಕ್ಷಸರು ಕಾವಲಿರುತ್ತಾರೆ. ಆ ರಾಕ್ಷಸರ ಒಂದೊಂದು ತೊಟ್ಟು ರಕ್ತ ಬಿದ್ದರೆ ಒಂದು ಕೋಟಿ ರಾಕ್ಷಸರು ಜನಿಸುತ್ತಾರೆ ಎಂದು ಹೇಳಿ ಅವನ ಹಿಂದೆಯೇ ಜನಿಸಿದ ಚೌಡೇಶ್ವರಿಯನ್ನು ಸಹಾಯಕ್ಕಾಗಿ ಕಳುಹಿಸಿ ಕೊಡುತ್ತಾನೆ.

ವೀರಭದ್ರನು ರಾಕ್ಷಸರನ್ನು ಸಂಹರಿಸಿದ ನಂತರ ದಕ್ಷಬ್ರಹ್ಮನ ಯಾಗ ಶಾಲೆಗೆ ಹೋಗಿ ಅವನ ತಲೆಯನ್ನು ಚಂಡಾಡುತ್ತಾನೆ. ತಲೆ ಅಗ್ನಿಕುಂಡಕ್ಕೆ ಬಿದ್ದು ಸುಟ್ಟು ಕರಿಕಾಗುತ್ತದೆ. ಇದನ್ನು ಕಂಡ ದಕ್ಷಬ್ರಹ್ಮನ ಮಡದಿಯು ವೀರಭದ್ರನಿಗೆ ಆರತಿ ಬೆಳಗಿ ಪತಿಭಿಕ್ಷೆಯನ್ನು ಬೇಡುತ್ತಾಳೆ. ಶಿವನು ಯುದ್ಧಕ್ಕೆ ಕಳುಹಿಸುವಾಗ ಶರಣು ಹೊಕ್ಕವರನ್ನು ಕಾಯಿ ಎಂದು ಹೇಳಿದ್ದನ್ನು ನೆನದುಕೊಂಡು, ಅವನಿಗೆ ಪ್ರಾಣದಾನ ಮಾಡಲು ರುಂಡವಿಲ್ಲದಿರುವುದನ್ನು ಗಮನಿಸಿ, ಉತ್ತರ ದಿಕ್ಕಿಗೆ ಮುಖ ಮಾಡಿ ಮಲಗಿರುವ ಯಾವುದಾದರೂ ಪ್ರಾಣಿಯ ತಲೆಯನ್ನು ಕತ್ತರಿಸಿ ತನ್ನಿ ಎಂದು ಹೇಳಿ ಕಳುಹಿಸುತ್ತಾನೆ.

ದಾರಿಯಲ್ಲಿ ಉತ್ತರ ದಿಕ್ಕಿಗೆ ತಲೆ ಹಾಕಿ ಒಂದು ಟಗರು ಮಲಗಿರುತ್ತದೆ. ಅದರ ರುಂಡವನ್ನೇ ಕತ್ತರಿಸಿ ತರುತ್ತಾರೆ. ಅದನ್ನೇ ದಕ್ಷನ ಮುಂಡಕ್ಕೆ ಜೋಡಿಸಿ ಪ್ರಾಣದಾನ ಮಾಡುತ್ತಾನೆ. ಈ ಸಂದರ್ಭದಲ್ಲಿ ವೀರಭದ್ರನು

ತೋರಿದ ಪ್ರತಾಪದ ಪ್ರತೀಕವೇ ವೀರಗಾಸೆ ಹಿಂದಿನ ಕಥೆಯಾಗಿದೆ, ಅಂದಿನಿಂದಲೇ ಈ ಕಲೆ ಬೆಳೆದು ಬಂದಿತೆಂದೂ ಕಲಾವಿದರು ಹೇಳುತ್ತಾರೆ.

ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ, ಕಾರ್ತೀಕ ಶ್ರಾವಣ ಸೋಮವಾರಗಳಲ್ಲಿ ಕಲಾವಿದರು (ಇವರಿಗೆ ಲಿಂಗದ ವೀರರು ಎಂದು ಹೇಳುತ್ತಾರೆ) ತಪ್ಪದೆ ಕಲೆಯನ್ನು ಪ್ರದರ್ಶಿಸುತ್ತಾರೆ. ಲಿಂಗದ ವೀರರನ್ನು ಊರಿಗೆ ಕರೆಸಿ ವೀರಭದ್ರನ ಪ್ರತಾಪದ ಬಗ್ಗೆ ಖಡ್ಗ ಹೇಳಿಸಿ ಕಥೆ ಕೇಳುವುದರಿಂದ ಗ್ರಾಮಕ್ಕೆ ಒಳ್ಳೆಯದಾಗುತ್ತದೆಂದೂ ದನಕರುಗಳಿಗೆ ರೋಗರುಜಿನಗಳಿದ್ದರೆ ಅವು ನಿವಾರಣೆಯಾಗುತ್ತವೆಂದೂ ನಂಬಿಕೆಯಿದೆ.

ಕಲಾವಿದರಲ್ಲಿಯೂ ಈ ಕಲೆಯನ್ನು ಬಿಟ್ಟರೆ ತಮಗೆ ದರಿದ್ರ ಬರುತ್ತದೆ ಎಂಬ ಭಾವನೆ ಇದೆ. ಕಲಾವಿದರು ಎಷ್ಟೇ ಶ್ರೀಮಂತರಾಗಿದ್ದರೂ ಶಿವರಾತ್ರಿ, ಯುಗಾದಿ ಹಬ್ಬದಂದು ಕಾವಿ ಧರಿಸಿ ಮೂರು ಮನೆಗಾದರೂ ಕ್ವಾರಣ್ಯಕ್ಕೆ ಹೋಗಬೇಕು. ಇವರನ್ನು ವೀರಭದ್ರನ ಅವತಾರವೆಂದೇ ಭಾವಿಸಿರುವ ಗ್ರಾಮೀಣರು ಎಂದೂ ಬರಿಗೈಯಲ್ಲಿ ಕಳುಹಿಸದೆ ಭಿಕ್ಷೆ ನೀಡಿ ನಮಸ್ಕರಿಸುತ್ತಾರೆ.

ಕಲಾವಿದರ ವೇಷಭೂಷಣ ವೈಶಿಷ್ಟ್ಯಪೂರ್ಣ. ತಲೆಗೆ ಬಿಳಿಯ ಚೌಲಿಯನ್ನು ಹಾಕಿಕೊಂಡಿರುತ್ತಾರೆ. ಕಾವಿ ಅಂಗಿ, ಕಾವಿ ಕಾಸೆಪಂಚೆ, ಕಿವಿಗೆ ರುದ್ರಾಕ್ಷಿ, ಹಣೆ ಹುಬ್ಬು, ಕಿವಿಗಳಿಗೆ ವಿಭೂತಿ, ಕೊರಳು ತೋಳು ಮುಂಗೈಗಳಲ್ಲಿ ರುದ್ರಾಕ್ಷಿ ಮಾಲೆ, ನಾಗಾಭರಣ, ಎದೆಯ ಹತ್ತಿರ ವೀರಭದ್ರಸ್ವಾಮಿಯ ಹಲಗೆ– ಇಷ್ಟನ್ನು ಧರಿಸಿರುತ್ತಾರೆ. ಸೊಂಟದಲ್ಲಿ ಚೌಲಿ ಹಾಕಿದ ಹಿತ್ತಾಳೆಯ ನರಸಿಂಹ ಮತ್ತು ದಕ್ಷಬ್ರಹ್ಮನ ಶಿರಗಳನ್ನು ಕಟ್ಟಿಕೊಂಡಿರುತ್ತಾರೆ.

ಮೊಣಕಾಲಿಗೆ ಜಂಗು ಧರಿಸಿರುತ್ತಾರೆ. ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ವೀರಭದ್ರನ ಹಲಗೆಯನ್ನು ಹಿಡಿದಿರುತ್ತಾರೆ. ದೇವರ ಉತ್ಸವದ ಮುಂದೆ ಕರಡಿ ಮತ್ತು ಚಮಾಳ ವಾದ್ಯದ ಗತ್ತಿಗೆ ಲಯಬದ್ಧವಾಗಿ ಕುಣಿಯುತ್ತಾರೆ. ಕುಣಿತದ ಮಧ್ಯೆ ವೀರಭದ್ರನ ಒಡಪುಗಳನ್ನು ಹೇಳುತ್ತಾರೆ. ಜಾತ್ರೆ ಉತ್ಸವಗಳಲ್ಲಿ ಇವರು ಕೊಂಡ ಹಾಯ್ದನಂತರ, ಇವರ ಹಿಂದೆ ಕಳಸದವರು ಹಾಗೂ ಹರಕೆ ಹೊತ್ತ ಭಕ್ತರು ಹಾಯುತ್ತಾರೆ. ಶಾಸ್ತ್ರ ಪವಾಡ ನಡೆಸುವುದು ವೀರಗಾಸೆಯವರ ಮತ್ತೊಂದು ವಿಶೇಷ.

ಹೀಗೆ ವೀರಗಾಸೆಯು ಕನ್ನಡ ನಾಡಿನಾದ್ಯಂತ ತನ್ನದೇ ಆದ ವಿಶಿಷ್ಟ ಸಂಪ್ರದಾಯದೊಂದಿಗೆ ಪ್ರಚಲಿತದಲ್ಲಿದೆ. ಇಂತಹ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿ**

"ಯಾವುದಕ್ಕೂ ಅಂಜದಿರು; ಅದ್ಭುತ ಕಾರ್ಯವನ್ನೆಸಗುವೆ. ಭೀತಿಯೇ ಪ್ರಪಂಚದ ಎಲ್ಲ ದುಃಖಗಳಿಗೂ ಮಹತ್ಕಾರಣ. ನಮ್ಮ ದುರವಸ್ಥೆಗಳಿಗೆಲ್ಲಾ ಭೀತಿಯೇ ಕಾರಣ. ನಿರ್ಭೀತಿಯೇ ಕ್ಷಣಮಾತ್ರದಲ್ಲಿ ಸ್ವರ್ಗವನ್ನು ಸಾಧಿಸಿಕೊಡಬಲ್ಲದು. ಆದುದರಿಂದ ಎದ್ದು ನಿಲ್ಲು, ಜಾಗೃತನಾಗು ಮತ್ತು ಗುರಿ ಪ್ರಾಪ್ತವಾಗುವವರೆಗೂ ನಿಲ್ಲದಿರು."

## ಕನ್ನಡದ ಪ್ರಸಿದ್ಧ ಸಾಹಿತಿಗಳ ಆತ್ಮಕಥೆಗಳು

– ಚೈತ್ರ ಆರ್ ಲಮಾಣಿ., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

- ದ. ರಾ. ಬೇಂದ್ರೆ – ನಡೆದು ಬಂದ ದಾರಿ
- ಏಣಗಿ ಬಾಳಪ್ಪ – ನನ್ನ ಬಣ್ಣದ ಬದುಕು
- ಕುವೆಂಪು – ನೆನಪಿನ ದೋಣಿಯಲ್ಲಿ
- ಶಿವರಾಮ ಕಾರಂತ – ಹುಚ್ಚು ಮನಸಿನ ಹತ್ತು ಮುಖಗಳು
- ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಭಾವ
- ಅರಕಲಗೂಡು ನರಸಿಂಗರಾಯ ಕೃಷ್ಣರಾಯ – ಬರಹಗಾರನ ಬದುಕು
- ಸ.ಸ.ಮಾಳವಾಡ – ದಾರಿ ಸಾಗಿದೆ
- ಎಸ್. ಎಲ್. ಭೈರಪ್ಪ – ಭಿತ್ತಿ
- ಪಿ. ಲಂಕೇಶ್ – ಹುಳಿ ಮಾವಿನ ಮರ
- ಕಡಿದಾಳ್ ಮಂಜಪ್ಪ – ನನಸಾಗದ ಕನಸು
- ಬಸವರಾಜ ಕಟ್ಟೀಮನಿ – ಕಾದಂಬರಿಕಾರನ ಬದುಕು, ನೆನಪಿನ ಬುತ್ತಿ
- ಎಚ್. ನರಸಿಂಹಯ್ಯ – ಹೋರಾಟದ ಹಾದಿ (ತೆರೆದ ಮನ)
- ದೇ.ಜವರೇಗೌಡ – ಹೋರಾಟದ ಬದುಕು
- ಎ. ಎನ್. ಮೂರ್ತಿರಾವ್ – ಸಂಜೆಗಣ್ಣಿನ ಹಿನ್ನೋಟ
- ಹರ್ಡೇಕರ್ ಮಂಜಪ್ಪ – ಕಳೆದ ನನ್ನ ಮೂವತ್ತು ವರ್ಷಗಳ ಕಾಣಿಕೆ
- ಬೀಚಿ – ನನ್ನ ಬಯಾಗ್ರಫಿ
- ಕುಂ. ವೀರಭದ್ರಪ್ಪ – ಗಾಂಧಿ ಕ್ಲಾಸು
- ಗುಬ್ಬಿ ವೀರಣ್ಣ – ಕಲೆಯೇ ಕಾಯಕ
- ಸ. ಜ. ನಾಗಲೋಟಿಮಠ – ಬಿಚ್ಚಿದ ಜೋಳಿಗೆ
- ಸಿದ್ದಲಿಂಗಯ್ಯ – ಊರು ಕೇರಿ
- ಕಯ್ಯಾರ ಕಿಞ್ಞಣ್ಣರೈ – ದುಡಿತವೇ ನನ್ನ ಬದುಕು
- ಅರವಿಂದ ಮಾಲಗಿತ್ತಿ – ಗೌರ್ಮೆಂಟ್ ಬ್ರಾಹ್ಮಣ
- ಲಕ್ಷ್ಮಣರಾವ್ ಗಾಯಕವಾಡ್ – ಉಚಲ್ಯಾ
- ಶ್ರೀರಂಗ – ನಾಟ್ಯ ನೆನಪುಗಳು
- ಅನುಪಮಾ ನಿರಂಜನ – ನೆನಪು ಸಿಹಿ–ಕಹಿ
- ಅ. ನ. ಕೃ – ಬರಹಗಾರನ ಬದುಕು
- ತ. ಸು. ಶಾಮರಾಯ – ಮೂರು ತಲೆಮಾರು
- ಜಿ. ಪಿ. ರಾಜರತ್ನಂ – ಹತ್ತು ವರುಷಗಳು

***

## ಬೇರಿನಿಂದ ಬೇರಾಗದಿರಿ

– ಶ್ವೇತಾ ಜಿ. ಹೆಚ್., ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ಮೂರನೆಯ ಶತಮಾನದಿಂದಲೂ ಪ್ರಸಿದ್ಧವಾಗಿರುವ, ಕರ್ನಾಟಕದ ಉದ್ದಗಲಕ್ಕೂ ಆವರಿಸಿರುವ ದಾಸರ, ವಚನಕಾರರ, ಕವಿಗಳ, ಲೇಖಕರ ಬರಹಗಳಲ್ಲಿ ರಾರಾಜಿಸುವ ಐದು ಕೋಟಿ ಜನರ ನಾಡಿ ಮಿಡಿತವಾಗಿರುವ ಭಾಷೆ ಕನ್ನಡ. ಸಮೃದ್ಧವಾದ ಹಾಗೂ ಶ್ರೀಮಂತವಾದ ನಮ್ಮ ಭಾಷೆಯನ್ನು ಉಳಿಸಿಕೊಂಡು ಬೆಳೆಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ.

ಕನ್ನಡವನ್ನು ಮಾತನಾಡಿ, ಕನ್ನಡವನ್ನು ಬೆಳೆಸಿ–ಉಳಿಸಿ ಎಂಬ ಕೂಗು, ಹೋರಾಟಗಳು, ಲೇಖನಗಳು ಹಾಗೂ ದೃಶ್ಯ ಮಾಧ್ಯಮದಲ್ಲಿ ಕಾರ್ಯಕ್ರಮಗಳನ್ನು ನಾವು ದಿನವೂ ನೋಡುತ್ತೇವೆ. ಕನ್ನಡ ಪರ ಸಂಘಗಳು, ಕವಿಗಳು, ಲೇಖಕರು ಇವರು ಮಾತ್ರ ಕನ್ನಡವನ್ನು ಉಳಿಸಲು ಸಾಧ್ಯ ಎಂದು ಹೇಳಲಾಗುವುದಿಲ್ಲ. ಕನ್ನಡದ ಲಿಪಿ ಸುಮಾರು 1500– 1600 ವರ್ಷಗಳಿಗಿಂತಲೂ ಹಿಂದಿನದು. ಐದನೆಯ ಶತಮಾನದ ಹಲ್ಮಿಡಿ ಶಾಸನದ ಸಮಯದಲ್ಲಾಗಲೇ ಕನ್ನಡ ಬಹಳ ಅಭಿವೃದ್ಧಿ ಹೊಂದಿತ್ತು. ಕನ್ನಡದ ಬೆಳವಣಿಗೆ ಕೇವಲ ರಾಜ–ಮಹಾರಾಜರಿಂದ ಅಥವಾ ಕವಿಗಳಿಂದಲ್ಲ. ಬದಲಿಗೆ ಕನ್ನಡದ ಏಳಿಗೆಗೆ ಪ್ರತಿಯೊಬ್ಬ ಸಾಮಾನ್ಯನ ಕೊಡುಗೆ ಇದೆ.

ಎಷ್ಟೋ ಶತಮಾನಗಳಿಂದ ಕೋಟ್ಯಾಂತರ ಜನರ ಉಸಿರಾಗಿರುವ ಕನ್ನಡವನ್ನು ಮಾತನಾಡಲು ಕನ್ನಡಿಗರೇ ಹಿಂಜರಿಯುವುದನ್ನು ನೋಡಿದಾಗ ಆಗುವ ಸಂಕಷ್ಟ ಅಷ್ಟಿಷ್ಟಲ್ಲ. ಅಡುಗೆಯ ಮನೆಯಲ್ಲಿ ಕೇಳಿ ಬರುವ ಅಜ್ಜಿಯ ಪದಗಳು, ಅಜ್ಜನ ಸ್ವಾರಸ್ಯವಾದ ಪ್ರಸಂಗಗಳು, ಅಮ್ಮ ಹೇಳುವ ಕನ್ನಡದ ನೀತಿ ಕತೆಗಳು, ಅಪ್ಪ ಓದುವ ಕನ್ನಡದ ಕವನಗಳು ಇತ್ಯಾದಿಗಳ ಪರಿಚಯವೇ ಈಗಿನ ಮಕ್ಕಳಿಗೆ ಇರುವುದಿಲ್ಲ. ವಿಪರ್ಯಾಸವೆಂದರೆ ಇಂತಹದನ್ನು ತಿಳಿಸಿ ಕೊಡುವ ಪ್ರಯತ್ನವು ಈಗ ನಡೆಯುತ್ತಿಲ್ಲ.

ಕರ್ನಾಟಕದಲ್ಲಿರುವ ಶಾಲೆಯಲ್ಲಿಯೇ ಕನ್ನಡದಲ್ಲಿ ಪಾಠ ಮಾಡುವುದಿಲ್ಲ. ಮಕ್ಕಳು ಕಾಂನ್ವೆಂಟಿನಲ್ಲಿ ಕನ್ನಡ ಮಾತಾಡುವಂತಿಲ್ಲ. ಮಾತನಾಡಿದರೆ ದಂಡ ತೆರಬೇಕಾಗುತ್ತದೆ! ಮಕ್ಕಳು ಇಂಗ್ಲೀಷ್ ನಾವೆಲ್ ಓದಿದರೆ, ಇಂಗ್ಲೀಷ್ ಮಾತನಾಡಿದರೆ ಏನೋ ಹೆಮ್ಮೆ!! ಕನ್ನಡದಲ್ಲಿ ಯಾವುದೂ ಒಳ್ಳೆಯ ಕಾದಂಬರಿಗಳಿಲ್ಲವೇ? ಅಥವಾ ನೀತಿ ಕತೆಗಳಿಲ್ಲವೆ? ಹಾಗೆಂದ ಮಾತ್ರಕ್ಕೆ ಬೇರೆ ಭಾಷೆಯನ್ನು ಕಲಿಯಬಾರದು ಎಂದಲ್ಲ. ನಮ್ಮ ಭಾಷೆಯನ್ನು ಮರೆಯಬಾರದು.

ಕರ್ನಾಟಕದಲ್ಲಿ ಒಮ್ಮೊಮ್ಮೆ ಕನ್ನಡಕ್ಕಿಂತ ಬೇರೆ ಭಾಷೆಗಳೇ ಹೆಚ್ಚು ಕೇಳಿ ಬರುತ್ತವೆ. ರಾಜಧಾನಿ ಬೆಂಗಳೂರಿನಲ್ಲಂತೂ ಬೇರೆ ಭಾಷೆಗಳದ್ದೇ ರಾಜ್ಯಭಾರ... "ಹಾಯ್, ಹೌ ಆರ್ ಯೂ?" ಎಂಬ ಮಾತುಗಳೇ ಹೆಚ್ಚು. ಆಂಗ್ಲ ಭಾಷೆ ಕಲಿತರೆ ಮಾತ್ರ ಎಲ್ಲಿ ಬೇಕಾದರೂ ಬದುಕಬಹುದು, ಆಂಗ್ಲ ಭಾಷೆ ಕಲಿತರೆ ಮಾತ್ರ ಒಳ್ಳೆಯ ಕೆಲಸ ದೊರೆಯುವುದು ಎಂಬ ಮೂಢನಂಬಿಕೆಗಳು ಜನರ ಮನಸಲ್ಲಿ ಬೇರೂರಿವೆ. ಫ್ರಾನ್ಸ್, ಚೀನಾ, ಮಡಗಾಸ್ಕರ್ ಹೀಗೆ ಹಲವಾರು ದೇಶಗಳಲ್ಲಿ ಆಂಗ್ಲ ಭಾಷೆಯನ್ನು ಬಳಸದೆ ತಮ್ಮ ಮಾತೃ ಭಾಷೆಯಲ್ಲಿಯೇ ಎಲ್ಲಾ ವ್ಯವಹಾರಗಳನ್ನು ನಡೆಸುತ್ತಾರೆ.

ಹಣಕ್ಕಾಗಿ ಹೊರ ದೇಶಕ್ಕೆ ಹೋಗುವುದಕ್ಕಾಗಿ ಬೇರೆ ಭಾಷೆಯನ್ನು ಕಲಿಯುವ ಜನರು ಮಾತೃ ಭಾಷೆಯನ್ನೇ ಮರೆತರೆ ಏನು ಚೆನ್ನ? ಕನಸು ಕಾಣುವಾಗ, ಸಂಕಷ್ಟದಲ್ಲಿರುವಾಗ, ನೋವಿನಲ್ಲಿರುವಾಗ

ನೆನಪಾಗುವ ಕನ್ನಡ, ಕನಸು ನನಸಾದಾಗ, ಸಂತಸದಲ್ಲಿರುವಾಗ ಏಕೆ ನೆನಪಿಗೆ ಬಾರದು? ಇಂತಹ ಸಂದರ್ಭದಲ್ಲಿ ಕುವೆಂಪು ಅವರ ಬಾರಿಸು ಕನ್ನಡ ಡಿಂಡಿಮವ ಸಾಲುಗಳು ನೆನಪಿಗೆ ಬಾರದೆ ಇರದು,

"ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು, ಒಟ್ಟಿಗೆ ಬಾಳುವ ತೆರದಲಿ ಹರಸು!
ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವಾ".

ಹೊರದೇಶದಿಂದ ಬಂದ ಎಷ್ಟೋ ಜನರು ಕನ್ನಡ ಭಾಷೆಯ ವೈಭವವನ್ನು ಅದರ ಮೌಲ್ಯವನ್ನು ಅರಿತು ಕನ್ನಡ ಕಲಿಯುವುದನ್ನು ನಾವು ಕಾಣಬಹುದು. ನಮ್ಮ ಸಂಸ್ಕೃತಿಯ ಮಹತ್ವವನ್ನು ವಿದೇಶಿಯರು ಅರಿತುಕೊಂಡರೂ ನಮ್ಮವರಲ್ಲಿ ಹಲವರಿಗೆ ಇದರ ಅರಿವಾಗಿಲ್ಲ. ಮನದಲ್ಲಿ ಆಳವಾಗಿ ಬೇರೂರಿರುವ ಕನ್ನಡ ಭಾಷೆಯನ್ನು ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಮರೆಯಲು ಸಾಧ್ಯವಿಲ್ಲ. ತೋರಿಕೆಗಾಗಿ, ಹಣಕ್ಕಾಗಿ, ಅಧಿಕಾರದ ದಾಹಕ್ಕಾಗಿ, ಶ್ರೀಮಂತಿಕೆಯ ಮೋಹಕ್ಕಾಗಿ ಬೇರೆ ಭಾಷೆಯನ್ನು ಆತ ಮಾತನಾಡಬಹುದು. ಆದರೆ ಕನ್ನಡದ ಮಾತು, ನುಡಿ ಕೊಡುವ ಖುಷಿ, ತೃಪ್ತಿ ಬೇರೆ ಯಾವ ಭಾಷೆಗಳು ಕೊಡಲಾರವು.

ಎಲ್ಲಾ ಭಾಷೆಗಳಲ್ಲೂ ಪಾಂಡಿತ್ಯ ಪಡೆದ ಪಂಡಿತನಿಗೆ ರಾತ್ರಿಯ ಸಮಯದಲ್ಲಿ ಕೋಲಿನಿಂದ ಹೊಡೆದಾಗ ಆತ ತನ್ನ ಮಾತೃ ಭಾಷೆಯಲ್ಲಿಯೇ ಕಿರುಚುತ್ತಾನೆ. ಎಷ್ಟೇ ಬೆಳೆದರು ನಮ್ಮ ಬೇರು ಕನ್ನಡದಲ್ಲಿಯೇ ಇರುತ್ತದೆ. ಎಳೆ ಮಗು ತೊದಲುತ್ತ ನುಡಿಯುವ "ಅಮ್ಮ" ಎನ್ನುವ ಮೊದಲ ಪದವನ್ನು "ಮಮ್ಮಿ" ಎಂದೋ, "ಮಾಮ್" ಎಂದೋ ಬದಲಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಬೇರಿನಿಂದ ಬೇರಾಗುವುದೂ ಅಸಾಧ್ಯ.

***

**ಸ್ವಾಮಿ ವಿವೇಕಾನಂದರ ದಿವ್ಯ ವಾಣಿಗಳು**

"ಎಲ್ಲವನ್ನೂ ದೂರ ಎಸೆಯಿರಿ. ನಿಮ್ಮ ಮುಕ್ತಿಯ ಬಯಕೆಯನ್ನು ಕೂಡ. ಇತರರಿಗೆ ಸಹಾಯಮಾಡಿ."

"ನಮಗೆ ತ್ಯಾಗ ಮಾಡುವ ಧೈರ್ಯ ಬೇಕಾದರೆ ನಾವು ಉದ್ವೇಗವಶರಾಗಕೂಡದು. ಉದ್ವೇಗ ಕೇವಲ ಪ್ರಾಣಿಗಳಿಗೆ ಸೇರಿದ್ದು. ಪ್ರಾಣಿಗಳು ಸಂಪೂರ್ಣವಾಗಿ ಉದ್ವೇಗದ ಅಧೀನದಲ್ಲಿರುವುವು."

"ಆದರ್ಶದಿಂದ ಕೂಡಿದ ವ್ಯಕ್ತಿ ಒಂದು ಸಾವಿರ ತಪ್ಪುಗಳನ್ನು ಮಾಡಿದರೆ, ಆದರ್ಶವಿಲ್ಲದ ವ್ಯಕ್ತಿಯು ಐವತ್ತು ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದ್ದರಿಂದ ಆದರ್ಶವನ್ನು ಇಟ್ಟುಕೊಳ್ಳುವುದು ಒಳ್ಳೆಯದು."

"ಜೀವನವೆಂಬುದು ಕಠಿಣ ಸತ್ಯ. ಧೈರ್ಯವಾಗಿ ಅದನ್ನು ಎದುರಿಸಿ. ನಿಮ್ಮ ಮಾರ್ಗದಲ್ಲಿ ಮುಂದುವರೆಯಿರಿ. ಅದು ಅಭೇದ್ಯವಾಗಿರಬಹುದು. ಆದರೆ ಆತ್ಮ ಅದಕ್ಕಿಂತ ಬಲಯುತವಾದುದು."

# ಕನ್ನಡದಲ್ಲಿ ವಚನ ಸಾಹಿತ್ಯ

– ಪ್ರವೀಣ ಎಸ್., ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

ವಚನಕಾರರು ಕನ್ನಡಕ್ಕೆ ನೀಡಿದ ವಿಶಿಷ್ಟ ಸಾಹಿತ್ಯ ಪ್ರಕಾರ ವಚನ. ಈ ಸಾಹಿತ್ಯವನ್ನು ಐತಿಹಾಸಿಕವಾಗಿ ಬಸವ ಪೂರ್ವಯುಗ, ಬಸವಯುಗ, ಬಸವೋತ್ತರಯುಗ ಎಂದು ವಿಭಾಗಿಸುತ್ತಾರೆ.

**ಇತಿಹಾಸ**

ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಬಸವಪೂರ್ವಯುಗದ ಶರಣರು. ಇವರಲ್ಲಿ ಚಾಳುಕ್ಯ ಜಯಸಿಂಹನ (1015–1042) ಅರಸಿ ಸುಗ್ಗಲೆಯ ಗುರುವಾದ ಜೇಡರದಾಸಿಮಯ್ಯನ ವಚನಗಳು ಲಭಿಸಿವೆ. 10ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿರಬಹುದಾದ ಈತನ ಗುರು ಶಂಕರದಾಸಿಮಯ್ಯನೂ ವಚನಗಳನ್ನು ರಚಿಸಿರಬಹುದು.

ಜೇಡರ ದಾಸಿಮಯ್ಯನ ಹದಗೊಂಡ ಶೈಲಿಯೂ, ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಅದಕ್ಕಾಗಿ ಈ ಸಾಹಿತ್ಯಪ್ರಕಾರದ ಪ್ರಾಚೀನತೆ 10ನೆಯ ಶತಮಾನದಷ್ಟು ಹಿಂದೆ ಸರಿಯಬಹುದಾಗಿದೆ. ಈ ಕಾಲದ ವಚನಗಳು ಅಲ್ಲಲ್ಲಿ ಅಂಶ, ಲಯ ಒಳಪ್ರಾಸ ಯುಕ್ತವಾಗಿದ್ದು ಗಾತ್ರದಲ್ಲಿ ಚಿಕ್ಕವಾಗಿವೆ.

ಜೇಡರ ದಾಸಿಮಯ್ಯನ ವಚನಗಳು ಇದಕ್ಕೆ ನಿದರ್ಶನ. ಮುಂದಣ ಯುಗದ ವಚನ ಸಾಹಿತ್ಯದ ಮೇಲೆ ಇವುಗಳ ಪ್ರಭಾವ ಕೆಲಮಟ್ಟಿಗೆ ತೋರಿಬರುತ್ತದೆ. ಈ ಯುಗದ ವಚನ ಸಾಹಿತ್ಯ ಈಗ ಕಡಿಮೆ ಪ್ರಮಾಣದಲ್ಲಿ ಸಿಕ್ಕಿದರೂ ಶೋಧಿಸಿದಲ್ಲಿ ಹೊಸ ವಚನಗಳು, ವಚನಕಾರರು ಹೊರಬರುವ ಸಂಭವವಿದೆ.

**ವಚನಸಾಹಿತ್ಯದ ಸುವರ್ಣಯುಗ**

ಬಸವಯುಗ ವಚನಸಾಹಿತ್ಯದ ಸುಗ್ಗಿಕಾಲ. 12ನೆಯ ಶತಮಾನದ ಮಧ್ಯಭಾಗದಲ್ಲಿ ಮೈಮುರಿದು ಎದ್ದ ಲಿಂಗಾಯತ ಆಂದೋಲನ ಕನ್ನಡ ಸಮಾಜಕ್ಕೆ ಹೊಸ ತಿರುವು ಕೊಟ್ಟಿತು. ಆಚಾರ–ವಿಚಾರ, ಭಾಷೆ – ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ಹೊಸತನ್ನು ತುಂಬಿತು. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ, ಮಡಿವಾಳ ಮಾಚಿದೇವ ಇವರು ಸುಪ್ರಸಿದ್ಧ ವಚನಕಾರರು. ಈ ಕಾಲದ ವಚನ ಸಂಖ್ಯೆ ಹಲವು ಸಾವಿರ, ಹಲವು ಲಕ್ಷ, ಕೋಟಿ ಎಂಬ ಹೇಳಿಕೆಗಳಿವೆ.

ಕನ್ನಡಭಾಷೆಯ ಅಭಿವ್ಯಕ್ತಿ ಸಾಧ್ಯತೆಯನ್ನು ತಳಮಟ್ಟ ಕೈವಶ ಮಾಡಿಕೊಂಡ ವಚನಕಾರರು ಆ ಸಾಧ್ಯತೆಯನ್ನು ಇನ್ನೂ ಹಿಗ್ಗಿಸಿದರು. ಅನುಭವ ಅಭಿವ್ಯಕ್ತಿಗಳಲ್ಲಿ ಪ್ರಾಮಾಣಿಕತೆಯನ್ನು ಸಾಧ್ಯ ಮಾಡಿ ತೋರಿಸಿದರು. ಈ ಆಂದೋಲನದ ಅಧಿನಾಯಕ ಬಸವಣ್ಣ. ಕಾರ್ಯಚಟುವಟಿಕೆಗಳ ಕೇಂದ್ರ ಸ್ಥಳ ಕಲ್ಯಾಣ. ಅಂದಿನ ಅನುಭವಮಂಟಪದ ಅಧ್ಯಕ್ಷನಾಗಿ ಮೆರೆದವನೆಂದರೆ ಅಲ್ಲಮಪ್ರಭು. ಈತ ಹಿರಿಯ ಆತ್ಮಜ್ಞಾನಿ. ನಿಜವಾದ ವೈರಾಗ್ಯವನ್ನು ಪಡೆದವ. ತನಗಿಂತ ಕಿರಿಯರಾದ ಅಕ್ಕಮಹಾದೇವಿ. ಬಸವಣ್ಣ, ಸಿದ್ಧರಾಮ ಮೊದಲಾದವರ ಧ್ಯೇಯ ಧೋರಣೆಗಳಲ್ಲಿನ ಇತಿಮಿತಿಗಳನ್ನು ಎತ್ತಿ ತೋರಿಸಿ ಅವರನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ದ ಹಿರಿಯ.

ಈತ ತನ್ನ ವಚನಗಳಲ್ಲಿ ತಾನು ಕಂಡ ಸತ್ಯವನ್ನು ತನಗೆ ಹಿಡಿಸದ ಆಚಾರವಿಚಾರಗಳನ್ನು ತೀಕ್ಷ್ಣವಾಗಿ ಪ್ರಸ್ತಾಪಿಸಿದ್ದಾನೆ. ಇವನಿಗೆ ತನ್ನವರು ಪರರು ಎಂಬ ಹಂಗಿಲ್ಲ. ಅನಾಚಾರವನ್ನು ಎಲ್ಲೇ ಕಾಣಲಿ ಈತ

ಟೀಕಿಸುತ್ತಾನೆ. ವಚನ ಸಾಹಿತ್ಯದಲ್ಲೆಲ್ಲ ಈತನ ಅತಿ ವಚನಗಳು ಅತಿ ಕಠಿಣವೆನಿಸಿವೆ. ಈತನ ಬೆಡಗಿನ ವಚನಗಳಂತೂ ಪಾರಿಭಾಷಿಕ ಸಂಕೇತಗಳಿಂದ ಕೂಡಿ, ಭೇದಿಸಲಸಾಧ್ಯವಾಗಿವೆ.

ಅಲ್ಲಮನ ವಚನಗಳು ಬಸವಣ್ಣ ಅಥವಾ ಮಹದೇವಿಯಕ್ಕನ ವಚನಗಳಷ್ಟು ಜನಪ್ರಿಯವಾಗಿರದಿದ್ದರೂ ತಮ್ಮ ಆಳವಾದ ತತ್ವಸಾರದಿಂದ, ಶೈಲಿಯಿಂದ, ಕಾವ್ಯತೆಯಿಂದ ಬಹು ಚೆನ್ನಾಗಿವೆ. ಉಳಿದವರಲ್ಲಿನ ಅತಿರೇಕಗಳಾವುವೂ ಅಲ್ಲಮನಲ್ಲಿ ಕಾಣವು. ಇದೊಂದೇ ದೃಷ್ಟಿಯಿಂದಲಾದರೂ ಇವನ ವಚನಗಳು ವ್ಯಾಸಂಗ ಯೋಗ್ಯವಾಗುತ್ತವೆ. ಭಕ್ತಿಭಂಡಾರಿ ಎಂಬ ಕೀರ್ತಿಗೆ ಭಾಜನನಾದ ಬಸವಣ್ಣನ ವಚನಗಳಲ್ಲಿ ಭಕ್ತಿಯ ಅತಿರೇಕವನ್ನು ಕಾಣುತ್ತೇವೆ.

ಹೆಂಗರುಳಿನ ಸಹಾನುಭೂತಿಯನ್ನು ಕಾಣುತ್ತೇವೆ. ಒಂದು ದೇಶದ ಮಹಾಮಂತ್ರಿಯಾಗಿದ್ದರೂ ಆತ ಅಹಂಕಾರಪಟ್ಟವನಲ್ಲ. ಜಂಗಮಸೇವೆಯೇ ಲಿಂಗದ ಸೇವೆ ಎಂದು ತನ್ನ ತನು, ಮನ, ಧನಗಳನ್ನು ಜಂಗಮ ದಾಸೋಹಕ್ಕಾಗಿ ಮುಡಿಪಾಗಿಟ್ಟ ಭಕ್ತ ಶ್ರೇಷ್ಠನೀತ. ಅನುಕಂಪ, ಜೀವನಾನುಭವದ ಸಾರ ರಸಾದ್ರಹೃದಯ, ಲೋಕಹಿತಸಾಧನೆಯ ಉದ್ದೇಶ–ಇವು ಕ್ಷಣ ಕ್ಷಣಕ್ಕೂ ಈತನ ವಚನಗಳಲ್ಲಿ ಕಾಣುತ್ತವೆ. ಮತೋಪದೇಶಕ್ಕೆಂದೇ ಕಟ್ಟಿದವಾದರೂ ಈತನ ವಚನಗಳಲ್ಲಿ ಹೃದ್ಯವಾದ, ರಸಭಾವಗಳನ್ನು ಮಿಡಿವ ಮಾತುಗಳು ಉದ್ದಕ್ಕೂ ಬರುತ್ತವೆ.

**13–14ನೆಯ ಶತಮಾನ**

ಲಿಂಗಾಯತಕ್ಕೆ ಸ್ಥಿರನೆಲೆ ಸಿಕ್ಕಿದ್ದು ನೂರೊಂದು ವಿರಕ್ತರು ಬಾಳಿದ ಪ್ರೌಢದೇವರಾಯನ ಕಾಲದಲ್ಲಿ, ವಿಪ್ಲವಕ್ಕೆ ಗುರಿಯಾಗಿ ನಷ್ಟಗೊಳ್ಳುತ್ತಿದ್ದ ಮತ್ತು ಪುರಾಣರಚನೆಯಿಂದ ಅಲಕ್ಷಿಸಲ್ಪಟ್ಟ ಹಿಂದಣ ವಚನ ಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನ ಕಾರ್ಯ ಪ್ರಾರಂಭವಾಯಿತು. ಈ ಕಾರ್ಯವನ್ನು ನಿರ್ವಹಿಸಿದವರಲ್ಲಿ ಮಹಲಿಂಗ ಮೊದಲಾದವರೂ ಪ್ರೇರಣೆ ಕೊಟ್ಟವರಲ್ಲಿ ಲಕ್ಕಣದಂಡೇಶ ಮುಂತಾದವರೂ ಪ್ರಮುಖರು.

ಇವರ ಪ್ರಯತ್ನದಿಂದಾಗಿ ಸಕಲಪುರಾತನರ ವಚನ, ಏಕೋತ್ತರಶತಸ್ಥಲ, ಲಿಂಗಲೀಲಾ ವಿಲಾಸಚಾರಿತ್ರ ಮೊದಲಾದ ಗ್ರಂಥಗಳಲ್ಲಿ ವಚನಗಳು ತತ್ವದ ತಳಹದಿಯ ಮೇಲೆ ಸೂತ್ರಬದ್ಧವಾಗಿ ಹೆಣೆಯಲ್ಪಟ್ಟವು. ಹೀಗೆ ವಚನಸಾಹಿತ್ಯ ಹೊಸ ರೂಪವನ್ನು ರೂಪಿಸಿಕೊಂಡು ಮುನ್ನಡೆಯಿತು. ಶಿವನಿಷ್ಠೆಯ ಸಂಗವಂಶ ಕೊನೆಗೊಂಡ ಹದಿನೈದನೆಯ ಶತಮಾನದಲ್ಲಿ ನಡೆದ ವಚನ ಸಾಹಿತ್ಯ ಸಂಬಂಧವಾದ ಆಂದೋಲನೆಯ ಕೇಂದ್ರವ್ಯಕ್ತಿ ತೋಂಟದ ಸಿದ್ಧಲಿಂಗ.

ಷಟ್‌ಸ್ಥಲದ ಇತಿಹಾಸದಲ್ಲಿ ಎರಡನೆಯ ಚೆನ್ನಬಸವಣ್ಣನೆನಿಸಿದ ಈತನ ದೈವೀ ಬೆಂಬಲದಿಂದ ವಚನಗಳ ಸಂಕಲನ, ಸಂಪಾದನೆ ಇನ್ನೂ ತೀವ್ರಗೊಂಡಿತು. ಈ ಜಾಗ್ರತ ಸಮಯದಲ್ಲಿ ಹುಟ್ಟಿದ ನಾಲ್ಕು ಶೂನ್ಯ ಸಂಪಾದನೆಗಳಲ್ಲಿ ಕೊನೆಯವೆರಡು ಈತನ ಶಿಷ್ಯವರ್ಗದವರಿಂದ ರಚನೆಗೊಂಡುದು ಗಮನಿಸಬೇಕಾದ ಸಂಗತಿ. ಸಾಲದುದಕ್ಕೆ ಈತನ ಶಿಷ್ಯರಲ್ಲಿ ಸಂಪಾದನೆಯ ಒಂದು ಶಿಷ್ಯ ಪರಂಪರೆಯೇ ಮುಂದುವರಿಯಿತು.

ಈ ಸಂಪ್ರದಾಯಕ್ಕೆ ಸಂಬಂಧಿಸಿದ ಸಂಪಾದನೆಯ ಚೆನ್ನಂಜೆದೇವ, ಸಂಪಾದನೆಯ ಬೋಳಬಸವದೇವ, ಸಂಪಾದನೆಯ ಗುರುಶಾಂತದೇವ, ಸಂಪಾದನೆ ಸಿದ್ಧವೀರಣಾರ್ಯ ಮುಂತಾದವರು ಕಾರಣವಾಗಿ ಲಿಂಗವಿಕಳಾವಸ್ಥೆಯ ವಚನ, ಮಿಶ್ರ ಸ್ತೋತ್ರದ ವಚನ, ಆಚರಣೆಯ ವಚನ, ಬಸವಸ್ತೋತ್ರದ ವಚನ, ಶರಣಸ್ತೋತ್ರದ ವಚನ–ಇತ್ಯಾದಿ ಹೊಸ ಹೊಸ ವಚನಸಂಕಲನ ಗ್ರಂಥಗಳು ಹೊರಬಂದುವು.

ಹೀಗೆ ಬಸವಣ್ಣನ ತರುವಾಯದ ಅವಧಿ ವಚನಗಳ ಸಂಕಲನ, ಸಂಪಾದನೆಗಳ ಯುಗವೆನಿಸಿದರೂ ತೋಂಟದ ಸಿದ್ಧಲಿಂಗ, ಘನಲಿಂಗಿದೇವ, ಕಾಡಸಿದ್ಧ, ಷಣ್ಮುಖಸ್ವಾಮಿ ಮೊದಲಾದವರು ವಚನಗಳನ್ನು ರಚಿಸಿದ್ದಾರೆ. ಗುಣ, ಗಾತ್ರ ಎರಡು ದೃಷ್ಟಿಯಿಂದಲೂ ಇವರ ವಚನಗಳು ಬಸವಯುಗದ ವಚನಗಳ ಎತ್ತರಕ್ಕೆ ಬಾರವು.

ಶರಣರು ತ್ರಿವಿಧಿ, ಮಂತ್ರಗೋಪ್ಯ, ಕರಣಹಸಿಗೆ, ವಿಶ್ರಾರ್ಪಣ ಇತ್ಯಾದಿ ಪ್ರಕಾರಗಳನ್ನು ನಿರ್ಮಿಸಿದ್ದರೂ ವಚನ ಪ್ರಕಾರ ಅವರ ವ್ಯಕ್ತಿಸಿದ್ಧಿಯ ಪತಾಕೆ. ಇದರಲ್ಲಿ ವಚನ, ಸ್ವರವಚನವೆಂದು ಎರಡು ವಿಧಗಳುಂಟು. ಒಂದು ಅನುಭಾವದ ಗದ್ಯ ಪ್ರಕಾರ, ಇನ್ನೊಂದು ಅನುಭಾವದ ಗೀತಪ್ರಕಾರ. ವಚನಗಳು ತಮ್ಮ ಉಜ್ಜಲ ಸಾಹಿತ್ಯದಿಂದ, ಸ್ವರವಚನಗಳು ತಮ್ಮ ಗೇಯ ಗುಣದಿಂದ ಸಮಸ್ತ ಸಹೃದಯರನ್ನೂ ಆಕರ್ಷಿಸಿವೆ.

ಪ್ರತಿಯೊಬ್ಬ ಶರಣನ ವಚನ ಮತ್ತು ಸ್ವರವಚನಗಳ ಕೊನೆಗೆ ಕೃತಿಕಾರನನ್ನು ಸೂಚಿಸುವ, ಆರಾಧ್ಯದೈವನಾಮಾಂಕಿತವಾದ, ಮುದ್ರೆ ಇರುತ್ತದೆ. ಕೂಡಲಸಂಗಮದೇವ, ಕೂಡಲಚೆನ್ನಸಂಗಮದೇವ ಹೀಗೆ ಒಂದೊಂದು ದೇವತೆಯ ಸುತ್ತ ಇರುವ ಕೆಲವು ಅಂಕಿತಗಳು ಒಂದೊಂದು ಮಾರ್ಗವನ್ನು ನಿರ್ಮಿಸುತ್ತವೆ. ಗಾತ್ರದೃಷ್ಟಿಯಿಂದ ವಚನ ಒಂದು ಬಿಡಿ ಮುಕ್ತಕ.

ಸ್ವರವಚನ 3–5, 7–9 ನುಡಿಗಳ ಒಂದು ಪುಂಜ. ಹಾಡುಗಬ್ಬಗಳಾದ ಈ ಸ್ವರವಚನಗಳು ಬಸವ ಮುಂತಾದವರಿಂದ ಪ್ರವೃತ್ತವಾಗಿದ್ದು ಮುಂದೆ ಬಂದ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಬೀಲಾಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಮೈಲಾರದ ಬಸವಲಿಂಗ ಶರಣ ಮೊದಲಾದವರ ಕೈಯಲ್ಲಿ ಉಚ್ಛ್ರಾಯಸ್ಥಿತಿಗೇರಿದವು.

ವಚನಸಾಹಿತ್ಯದ ಈ ರಮ್ಯ ಮಾರ್ಗ ವಿಕಾಸಗೊಂಡು ಹಲವು ಬಗೆಯಾಗಿ ಬೆಳೆದಿರುವುದನ್ನು ಮುಂದಿನ ದಾಸಸಾಹಿತ್ಯದಲ್ಲೂ ಇಸ್ಲಾಮೀ ಅನುಭಾವಿ ಸಾಹಿತ್ಯದಲ್ಲೂ ಕಾಣಬಹುದಾಗಿದೆ. ವಚನಗಳು ಚರಿತ್ರೆ, ತತ್ತ್ವ, ಸಾಹಿತ್ಯ ದೃಷ್ಟಿಗಳಿಂದ ಅಮೂಲ್ಯವೆನಿಸಿವೆ. ತಾವು ಸತ್ಯವನ್ನು ಕಂಡ ಉಂಡ ಅನುಭವವನ್ನು ಅಭಿವ್ಯಕ್ತಗೊಳಿಸುವಲ್ಲಿ ಕೆಲವು ಸಲ ಶರಣರ ವ್ಯಕ್ತಿಗತ ಅಂಶಗಳೂ ವಚನಗಳಲ್ಲಿ ನುಸುಳಿಬಂದಿವೆ.

**ಇಪ್ಪತ್ತನೆಯ ಶತಮಾನದಲ್ಲಿ**

ವಚನ ಕನ್ನಡ ಸಾಹಿತ್ಯಕ್ಕೇ ವಿಶಿಷ್ಟವಾದ ಒಂದು ಸಾಹಿತ್ಯ ಪ್ರಕಾರ, ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಶಿವಶರಣರ ವಚನ ವಾಙ್ಮಯ ಲೋಕದ ಅನುಭಾವ ಸಾಹಿತ್ಯಕ್ಕೆ ಒಂದು ಶ್ರೀಮಂತ ಕೊಡುಗೆ, ಸುಮಾರು ಹನ್ನೆರಡು ಶತಮಾನದ ಹೊತ್ತಿಗೆ ಯಶಸ್ಸಿನ ತುದಿಯನ್ನೇರಿದ ಈ ಸಾಹಿತ್ಯ ಪ್ರಕಾರ ಬರಬರುತ್ತಾ ತನ್ನ ಉಜ್ವಲ ಕಾಂತಿಯನ್ನು ಕಳೆದುಕೊಂಡು ಕೊನೆಗೊಮ್ಮೆ ನಿಂತೇ ಹೋಯಿತು.

ನಡುವೆ ಒಂದು ಸಲ ಅದರ ಪುನರುಜ್ಜೀವನದ ಪ್ರಯತ್ನ ನಡೆದಿರುವುದಕ್ಕೇನೋ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಗಳಿವೆ; ಆದರೆ ಯಶಸ್ಸಿನ ದಾಖಲೆಗಳಿಲ್ಲ. ಬಸವಣ್ಣ, ಅಕ್ಕಮಹಾದೇವಿ ಮೊದಲಾದವರು ಈ ಅಭಿವ್ಯಕ್ತಿ ಮಾಧ್ಯಮದಲ್ಲಿ ತೋರಿದ ಕೌಶಲವೇ ಒಂದು ಜಲಚಿಹ್ನೆಯಾಗಿ ನಿಂತು ಹೋಯಿತು. ಇದನ್ನು ಅನುಸರಿಸಿದವರು ಅನುಕರಿಸಿದವರು ಅನೇಕರು; ಆದರೆ ಮೀರಿದವರು ಮಾತ್ರ ಒಬ್ಬರೂ ಇಲ್ಲ.

ಸರಳವಾದ ಮಾತುಗಳಲ್ಲಿ ಅನುಭವ ತೀವ್ರತೆಯನ್ನು, ಪ್ರಾಮಾಣಿಕ ಆತ್ಮವಿಮರ್ಶೆಯಲ್ಲಿ ದಿಟ್ಟತನವನ್ನು ಅಲಂಕಾರ ಭಾರವಿಲ್ಲದ ರಚನೆಯಲ್ಲಿ ಕಲೆಗಾರಿಕೆಯನ್ನು ಹೊಮ್ಮಿಸುವುದು ಮುಂದಿನವರಿಗೆ ಸಾಧ್ಯವಾಗಲಿಲ್ಲ.

ಆದರೂ ಪ್ರಯೋಗಪ್ರಿಯರಿಗೆ ವಚನಗಳ ಮಾದರಿ ಯಾವಾಗಲೂ ಒಂದು ಆಹ್ವಾನವಾಗಿ ಉಳಿದದ್ದರಲ್ಲಿ ಆಶ್ಚರ್ಯವಿಲ್ಲ.

ವಿಚಾರಧಾರೆ, ಆವೇಶ, ಉತ್ಸಾಹಗಳು ಛಂದಸ್ಸಿನ ಚೌಕಟ್ಟನಲ್ಲಿ ಸಿಕ್ಕಿ ಸೊರಗದಿರಬೇಕಾದರೆ ವಚನದಂಥ ಒಂದು ಮಾಧ್ಯಮ ಎಲ್ಲ ಕಾಲಕ್ಕೆ ಸಮರ್ಪಕವಾಗಿ ಅಗತ್ಯವಾಗಿ ತೋರಿದ್ದರಲ್ಲಿಯೆ ಈ ಪ್ರಕಾರದ ಮಹತ್ವವಿದೆ. ಅಂತೆಯೇ ಹೊಸ ಸಾಹಿತ್ಯದಲ್ಲಿಯೂ ವಚನ ಪ್ರಕಾರ ಒಂದು ಪ್ರೇರಣೆಯ ಸೆಲೆಯಾಗಿದೆ ಅನುಕರಣೆಗೆ ಮಾದರಿಯಾಗಿದೆ.

ಸಾಹಿತ್ಯಚರಿತ್ರೆಯ ಪರಿಭಾಷೆಯಲ್ಲಿ ನಮಗೆ ಪರಿಚಿತರಾಗಿರುವಂಥ ವಚನಕಾರರು ಇಂದು ಇಲ್ಲ. ಆದರೆ ಸಾಹಿತ್ಯಕ್ಷೇತ್ರದ ಬೇರೆಬೇರೆ ಪ್ರಕಾರಗಳಲ್ಲಿ ಇಂದು ಕೆಲಸ ಮಾಡುತ್ತಿರುವ ಅನೇಕರು ವಚನಗಳನ್ನು ರಚಿಸಿದ್ದಾರೆ. ಈ ಗದ್ಯಗೀತ ಪ್ರಕಾರದ ರೂಪಾಂಶಕ್ಕೆ ಹೊಸ ಲೇಖಕರಿಗೆ ಅನ್ಯಮೂಲಗಳ ಸ್ಫೂರ್ತಿಯೂ ಲಭಿಸಿದೆ. ವಾಲ್ಟ್‌ವಿಟ್ ಮನ್ನನ ಗರಿಕೆಗಳು, ರವೀಂದ್ರನಾಥ ಠಾಕೂರರ ಕವಿತೆಗಳ ಇಂಗ್ಲಿಷ್ ಅನುವಾದಗಳು ಈ ನಿಟ್ಟಿನಲ್ಲಿ ನೆನಪಿಗೆ ಬರುವ ಮೂಲಗಳು.

ಸಮಕಾಲೀನರು ಅನೇಕರು ವಚನಗಳನ್ನು ಇಲ್ಲವೇ ರೂಪಾಂಶದಲ್ಲಿ ವಚನಗಳಿಗೆ ತೀರ ಹತ್ತಿರವಾದ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಇಪ್ಪತ್ತೆರೆಡು ಜನ ಲೇಖಕರು ಮೂವತ್ತಕ್ಕೂ ಹೆಚ್ಚು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹದಿನೆಂಟು ಜನರ ವಚನಗಳು, ಬೇರೆ ಬೇರೆ ಗ್ರಂಥಗಳಲ್ಲಿ ಪತ್ರಿಕೆಗಳಲ್ಲಿ ಅಚ್ಚಾಗಿವೆ ಅಥವಾ ಹಸ್ತ ಪ್ರತಿಯ ರೂಪದಲ್ಲಿವೆ.

ಈ ಲೇಖಕರಲ್ಲಿ ಮೂರೇ ಮೂರು ವಚನಗಳನ್ನು ಬರೆದ ತೀ. ನಂ. ಶ್ರೀಕಂಠಯ್ಯನವರೂ ಮೂರುಸಾವಿರದ ಐದುನೂರು ವಚನಗಳನ್ನು ಬರೆದು ಪ್ರಖ್ಯಾತರಾದ ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಚೆನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳೂ ಸೇರಿದ್ದಾರೆ; ಶಂಕರಮ್ಮ, ಓಂಕಾರಮ್ಮನವರ ಹಾಗೆ ವಾಚಕರಿಗೆ ಪರಿಚಯವೇ ಇಲ್ಲದವರೂ ನಾಡಿನಲ್ಲಿ ಮನೆ ಮಾತಾಗಿರುವ ಕುವೆಂಪು, ಬೇಂದ್ರೆಯವರೂ ಇದ್ದಾರೆ.

ರಂಗಣ್ಣ, ದಿವಾಕರರಂಥ ಹಿರಿಯರೂ ಚಂದ್ರಶೇಖರ ಐತಾಳ, ಭೈರವಮೂರ್ತಿಯವರಂಥ ತರುಣರೂ, ಸಿಂಪಿ ಲಿಂಗಣ್ಣನವರಂಥ ಮಾಸ್ತರರೂ, ಸದಾಶಿವ ಶಿವಾಚಾರ್ಯರು, ಗಂಗಾಧರ ಶಿವಾಚಾರ್ಯರು ಅವರಂಥ ಮಠಾಧೀಶರೂ, ಜೋಳದರಾಶಿ ದೊಡ್ಡನಗೌಡರಂಥ ಗಮಕಿಗಳೂ ಈ ಪಟ್ಟಿಯಲ್ಲಿ ಬರುತ್ತಾರೆ. ಈ ಎಲ್ಲ ಲೇಖಕರು ಬರೆದಿರುವ ವಚನಗಳ ಸಂಖ್ಯೆ ಒಂದು ಅಂದಾಜಿನಂತೆ ಸುಮಾರು ಹತ್ತು ಸಾವಿರವಾಗುತ್ತದೆ. ಇದೇನು ಸಾಮಾನ್ಯವಾದ ಸಾಧನೆಯಲ್ಲ.

ರಚನೆಯ ವಿನ್ಯಾಸದ ದೃಷಿಯಿಂದಲೂ ವಸ್ತುವೈವಿಧ್ಯದ ದೃಷ್ಟಿಯಿಂದಲೂ ಈ ವಚನಗಳು ನಾನಾ ಬಗೆಯಾಗಿವೆ. ಇವುಗಳಲ್ಲಿ ಪ್ರಾಚೀನ ಸಂಪ್ರದಾಯವಿದೆ. ಆಧುನಿಕ ವಿಚಾರಧಾರೆಯಿದೆ. ಆತ್ಮಶೋಧನೆಯಿದೆ, ಪ್ರಕೃತಿವರ್ಣನೆಯಿದೆ, ಭಕ್ತಿ ಇದೆ. ರಾಜಕೀಯವಿದೆ. ಭಾವುಕತೆಯಿದೆ, ವೈಚಾರಿಕತೆಯಿದೆ, ಪರದ ಆದರ್ಶವಿದೆ, ಇಹದ ವಾಸ್ತವಿಕತೆಯಿದೆ, ಮರಗಟ್ಟಿಕೊಂಡ ಪ್ರತಿಭೆಯೊಡನೆ ಕುಡಿಯೊಡೆದ ಪ್ರಜ್ಞೆಯಿದೆ.

ಇಲ್ಲಿ ಅರಳಿದ ವಚನಗಳಿವೆ. ಕರುಳಿನ ವಚನಗಳಿವೆ; ಅನುಕರಿಸಿದ ವಚನಗಳಿಗೂ ಸೋಗಿನ ವಚನಗಳಿಗೂ ಬರವಿಲ್ಲ. ಈ ಆಧುನಿಕ ವಚನ ಸಾಹಿತ್ಯ ಮೈದಾಳಿರುವ ರೀತಿ, ಅದರ ಮುಖ್ಯ ಒಲವು ನಿಲುವುಗಳು, ಪ್ರವೃತ್ತಿಗಳು ವಿಸ್ತಾರವಾದ ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾಗಿವೆ. ಸಮಕಾಲೀನ ವಚನಕಾರರಲ್ಲಿ

ಮೊದಲು ಗಮನ ಸೆಳೆಯುವ ಹೆಸರು ಎಸ್. ವಿ. ರಂಗಣ್ಣನವರದು. ಜಚನಿ ಅವರನ್ನು ಬಿಟ್ಟರೆ ರಂಗಣ್ಣನವರೇ ಅತಿ ಹೆಚ್ಚಿನ ಸಂಖ್ಯೆಯ ವಚನಗಳನ್ನು ಬರೆದಿದ್ದಾರೆ.

ರಂಗಬಿನ್ನಪ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಅವರ ವಚನಗಳು 1212. ಹೊಸ ಸಾಹಿತ್ಯದಲ್ಲಿ ಮೊತ್ತಮೊದಲಿಗೆ ವಚನಗಳನ್ನು ಬರೆದು ಪ್ರಕಟಿಸಿದ ಕೀರ್ತಿಯೂ ಅವರದೆ. 1925ರ ಅಕ್ಟೋಬರ್ ತಿಂಗಳಿನಲ್ಲಿ ಅವರು ತಮ್ಮ ಪ್ರಥಮ ವಚನವನ್ನು ಬರೆದುದಾಗಿ ಹೇಳಿಕೊಂಡಿದ್ದಾರೆ. ಸುಮಾರು ಹತ್ತು ವರ್ಷಗಳ ಅನಂತರ (1934) ರಂಗಣ್ಣವನರ ಹದಿನೈದು ವಚನಗಳನ್ನು ರಂಗಯ್ಯನ ವಚನಗಳು ಎಂಬ ಶೀರ್ಷಿಕೆಯಲ್ಲಿ ಪ್ರಬುದ್ಧ ಕರ್ಣಾಟಕ ಮೊದಲ ಬಾರಿಗೆ ಪ್ರಕಟಿಸಿತು.

ಆಧುನಿಕರಲ್ಲಿ ಇದಕ್ಕಿಂತ ಮೊದಲು ಬೇರೊಬ್ಬರು ವಚನಗಳನ್ನು ಪ್ರಕಟಿಸಿರುವುದು ಗಮನಕ್ಕೆ ಬಂದಿಲ್ಲ. ಐತಿಹಾಸಿಕವಾಗಿ ಆಧುನಿಕ ವಚನಕಾರರಲ್ಲಿ ರಂಗಣ್ಣನವರು ಮೊದಲಿಗರಾಗಿರುವುದು ಮಾತ್ರವಲ್ಲದೆ ಈ ಸಾಹಿತ್ಯ ಪ್ರಕಾರಕ್ಕೆ ರಾಷ್ಟ್ರದ ಅತ್ಯಚ್ಚ ಪ್ರಶಸ್ತಿಯನ್ನು ಗಳಿಸಿ ಸಫಲತೆಯನ್ನು ಪಡೆದಿದ್ದಾರೆ. ಒಂದು ದೃಷ್ಟಿಯಿಂದ ಬೇಂದ್ರೆಯವರೇ ರಂಗಣ್ಣನವರಿಗಿಂತ ಮೊದಲು ವಚನಗಳನ್ನು ರಚಿಸಿದವರು ಎನ್ನಬೇಕು.

ಅವರ ಪ್ರಖ್ಯಾತವಾದ ಕರುಳಿನ ವಚನಗಳು ಜಯ ಕರ್ನಾಟಕದಲ್ಲಿ 1931ರಲ್ಲಿ ಪ್ರಕಟವಾದರೂ ಅವನ್ನು ಪೂರ್ಣಗೊಳಿಸಿದ್ದು 1942ರಲ್ಲಿಯೆ ಎಂದೂ ಅವರು ಹೇಳಿದ್ದಾರೆ. ಆದರೆ ರಂಗಣ್ಣನವರ ವಚನಗಳು ರಚನಾ ವಿನ್ಯಾಸದಲ್ಲಿ ವಚನಗಳ ಚೌಕಟ್ಟಿನಲ್ಲಿ ಬರುವ ಹಾಗೆ ಬೇಂದ್ರೆಯವರ ವಚನಗಳು ಬರುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಬೇಂದ್ರೆಯವರ ವಚನಗಳು ಹೆಚ್ಚು ಕಡಿಮೆ ಫ್ರೀ–ವರ್ಸಿಗೆ ಸರಿಯಾಗುವ ಸ್ವಚ್ಛಂದ ಗೀತೆಗಳೇ ಸರಿ.

ಪ್ರಾಚೀನರ ವಚನಗಳು ಶುದ್ಧ ಪಾರಮಾರ್ಥಿಕ ಸಾಧನೆಯ ಮಾರ್ಗದೊಳಗಿನವು. ಕರುಳಿನ ವಚನಗಳೂ ಲೌಕಿಕ ಭಾವದ ಪ್ರಕಟನೆಗೆ ಬಳಸಿಕೊಂಡಂಥವು–ಎಂಬ ಬೇಂದ್ರೆಯವರ ಮಾತುಗಳು ಸಹಜವಾಗಿ ವಸ್ತುವನ್ನುದ್ದೇಶಿಸುತ್ತವೆ. ರೂಪಾಂಶದಲ್ಲಿ ಅವು ಪ್ರಾಚೀನರ ವಚನಗಳಿಗಿಂತಲೂ ವಿಟ್‌ಮನ್, ಠಾಕೂರರ ಕೃತಿಗಳಿಗೆ ಹತ್ತಿರವಾದ ಗದ್ಯಗೀತೆಗಳು. ಕುವೆಂಪು ಅವರ ಕಿಂಕಿಣಿಗೂ ದಿವಾಕರರ ಅಂತರಾತ್ಮನಿಗೆ ಕೃತಿಗೂ ಈ ಮಾತುಗಳೇ ಅನ್ವಯವಾಗುತ್ತವೆ.

ರಂಗಣ್ಣನವರ ವಚನಗಳಲ್ಲಿ ಪ್ರಾಚೀನ ವಚನಗಳ ಪ್ರತಿಧ್ವನಿಯನ್ನು ಸ್ಪಷ್ಟವಾಗಿ ಕೇಳಬಹುದಾಗಿದೆ. ಇದು ಆ ಸಾಹಿತ್ಯ ಪ್ರಕಾರ ಹೊಸ ಕಾಲದ ಲೇಖಕರ ಮೇಲೆ ಪ್ರಭಾವ ಬೀರಿರುವುದಕ್ಕೆ ಒಂದು ಉದಾಹರಣೆಯೂ ಹೌದು. ಎಂಟು ನೂರು ವರ್ಷಗಳಷ್ಟು ಹಿಂದಿನ ಆ ವಚನಗಳು ರೂಪಗೊಂಡ ಅನ್ಯಾದೃಶ ಸೊಗಸಿಗೆ, ಅವುಗಳಲ್ಲಿ ಅಭಿವ್ಯಕ್ತಗೊಂಡ ನಿಚ್ಚಳ ಪ್ರಮಾಣಿಕತೆಗೆ, ತೊಯ್ತ ತುಡಿತಗಳಿಗೆ ರಂಗಣ್ಣನವರ ಪ್ರತಿಭೆ ಸ್ಪಂದಿಸಿದ್ಧರಲ್ಲಿ ಆಶ್ಚರ್ಯವಿಲ್ಲ.

ಹೊಸ ಕಾಲಕ್ಕೆ ತಕ್ಕಂತೆ ಸಾಹಿತ್ಯವೂ ಹೊಸ ರೂಪವನ್ನು ಪಡೆಯುವುದು ಅನಿವಾರ್ಯವಾದುದರಿಂದ, ಈ ವಚನಗಳಾದರೂ ಪ್ರಾಚೀನದ ಪ್ರತಿರೂಪವಾದರೆ ಹೆಚ್ಚಿನದೇನನ್ನೂ ಸಾಧಿಸುವಂತಿರಲಿಲ್ಲ. ಆಗಲೇ ವಚನ ಸಾಹಿತ್ಯ ಸೃಷ್ಟಿಯ ಎರಡನೆಯ ಆವರ್ತದಲ್ಲಿಯ ವಚನಗಳ ಬಣ್ಣ ಅಳಿಸಿರುವುದು. ಕಾವು ಕಳೆದಿರುವುದು, ದನಿ ಮಾಸಿರುವುದು ಸಾಹಿತ್ಯ ಚರಿತ್ರೆಯ ವಿದ್ಯಾರ್ಥಿಗಳಿಗೆ ತಿಳಿದಿದೆ ಎನ್ನಬಹುದು.

***

## ಭಾಷಾ ಸಂಘದ ಸಹಯೋಗದಲ್ಲಿ ನಡೆದ ಕಾರ್ಯಕ್ರಮಗಳು

### 21–03–2022ರಂದು ನಡೆದ 2021–22ನೇ ಸಾಲಿನ ಚಿಗುರು ಸಂಚಿಕೆಯ ಬಿಡುಗಡೆಯ ಕಾರ್ಯಕ್ರಮ



## ಮಾಧ್ಯಮಗಳಲ್ಲಿ ಭಾಷಾ ಸಂಘದ ಚಟುವಟಿಕೆಗಳ ವರದಿ

### ಕನ್ನಡಪ್ರಭ ದಿನಪತ್ರಿಕೆ 27–04–2022

# ಶಿಕಾರಿಪುರದಲ್ಲಿ ವಿಶ್ವ ಪುಸ್ತಕ ದಿನಾಚರಣೆ



–ಶಿವಮೊಗ್ಗ ಸಂಚಲನ

**ಶಿಕಾರಿಪುರ:** ನಗರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಪುಸ್ತಕ ದಿನಾಚರಣೆಯ ಅಂಗವಾಗಿ ಪ್ರಾಧ್ಯಾಪಕರು ಪ್ರಶಿಕ್ಷಣಾರ್ಥಿಗಳು ಸಂಗ್ರಹಿಸಿದ ಪುಸ್ತಕಗಳನ್ನು ಪ್ರದರ್ಶನ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಡಾ.ಶಿವಕುಮಾರ್ ಜಿ ಎಸ್ ಅವರು ಪುಸ್ತಕ ಪ್ರದರ್ಶನವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಾ ಪುಸ್ತಕಗಳು ಮನುಷ್ಯನ ಇತಿಹಾಸವನ್ನು ತಿಳಿಸುತ್ತವೆ. ವಿವಿಧ ರೀತಿಯ ಪುಸ್ತಕಗಳು ಹಲವಾರು ಜ್ಞಾನವನ್ನು ನೀಡುವುದಲ್ಲದೆ ಮನುಷ್ಯನ ವ್ಯಕ್ತಿತ್ವವನ್ನು ಹೆಚ್ಚಿಸುತ್ತವೆ. ಜಗತ್ತಿನಲ್ಲಿ ವಿವಿಧ ಸಾಧನೆಗಳನ್ನು ಮಾಡಿರುವ ಅನೇಕ ಮಹನೀಯರು ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು.

ಡಾ. ಬಿ.ಆರ್ ಅಂಬೇಡ್ಕರ್ ಅವರು ಹೇಳಿರುವಂತೆ "ಯಾರು ಇತಿಹಾಸವನ್ನು ಮರೆತಿರುವರೋ ಅವರು ಮತ್ತೊಂದು ಇತಿಹಾಸವನ್ನು ಸೃಷ್ಟಿಸಲಾರರು". ಹಾಗಾಗಿ ಜೀವನದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕಾದರೆ ಪುಸ್ತಕಗಳು ದಾರಿದೀಪವಾಗಿ ಪರಿಣಮಿಸುತ್ತವೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಸಿಬ್ಬಂದಿ ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಈ ಪುಸ್ತಕ ಪ್ರದರ್ಶನ ಕಾರ್ಯಕ್ರಮಕ್ಕೆ ಕುಮದ್ವತಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರು ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳು ಆಗಮಿಸಿ ಪುಸ್ತಕಗಳನ್ನು ಅವಲೋಕನ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ವಿಜಯ ಕರ್ನಾಟಕ ದಿನಪತ್ರಿಕೆ 28–04–2022

# ಪುಸ್ತಕಗಳು ಸಾಧನೆಗೆ ದಾರಿದೀಪ

**ವಿಕ ಸುದ್ದಿಲೋಕ** ಶಿವಮೊಗ್ಗ

ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆ ನಡೆಯಿತು. ದಿನಾಚರಣೆ ಅಂಗವಾಗಿ ಪ್ರಾಧ್ಯಾಪಕರು, ಪ್ರಶಿಕ್ಷಣಾರ್ಥಿಗಳು ಸಂಗ್ರಹಿಸಿದ ಪುಸ್ತಕಗಳ ಪ್ರದರ್ಶನ ಆಯೋಜಿಸಲಾಗಿತ್ತು.

ಪ್ರದರ್ಶನ ಉದ್ಘಾಟಿಸಿದ ಪ್ರಾಚಾರ್ಯ ಡಾ. ಜಿ.ಎಸ್.ಶಿವಕುಮಾರ್ ಮಾತನಾಡಿ, ಪುಸ್ತಕಗಳು ಮನುಷ್ಯನ ಇತಿಹಾಸವನ್ನು ತಿಳಿಸುತ್ತವೆ. ವಿವಿಧ ರೀತಿಯ ಪುಸ್ತಕಗಳು ಹಲವಾರು ಜ್ಞಾನವನ್ನು ನೀಡುವುದಲ್ಲದೆ ಮನುಷ್ಯನ ವ್ಯಕ್ತಿತ್ವವನ್ನು ಹೆಚ್ಚಿಸುತ್ತವೆ. ಜಗತ್ತಿನಲ್ಲಿ ಸಾಧನೆ ಮಾಡಿರುವ ಅನೇಕ ಮಹನೀಯರು ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಜೀವನದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಪುಸ್ತಕಗಳು ದಾರಿದೀಪವಾಗಿ ಪರಿಣಮಿಸುತ್ತವೆ ಎಂದು ಹೇಳಿದರು.

ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆ ನಡೆಯಿತು.

## ಸ್ವಾಮಿ ವಿವೇಕಾನಂದರ ದಿವ್ಯ ವಾಣಿ

"ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನಬೇಕು, ಅಪಾರ ಇಚ್ಛಾಶಕ್ತಿ ಬೇಕು. 'ನಾನು ಸಮುದ್ರವನ್ನೇ ಪಾನಮಾಡುತ್ತೇನೆ', ಎಂದು ಪ್ರಯತ್ನಶೀಲನು ಹೇಳುತ್ತಾನೆ. 'ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿಪುಡಿಯಾಗುತ್ತವೆ' ಎನ್ನುತ್ತಾನವನು. ಇಂತಹ ಶಕ್ತಿ ಯನ್ನೂ ಭಾತಿಯನ್ನೂ ಪಡೆಯಿರಿ; ಕಷ್ಟಪಟ್ಟು ದುಡಿಯಿರಿ, ನೀವು ಗುರಿ ಸೇರುವುದು ನಿಶ್ಚಯ."

29–06–2022ರಂದು ಭಾಷಾ ಸಂಘ ಮತ್ತು ಶಿರಿಯಾಳ ಕಲಾಕೇಂದ್ರ (ರಿ), ಶಿರಾಳಕೊಪ್ಪ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ "ಶಿಕ್ಷಣದಲ್ಲಿ ನಾಟಕೀಯ ಅಂಶಗಳು" ಎಂಬ ವಿಷಯದ ಕುರಿತು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಗಣ್ಯರು ಉಧ್ಘಾಟನೆ ನೆರವೇರಿಸುತ್ತಿರುವುದು.



29–06–2022ರಂದು ಭಾಷಾ ಸಂಘ ಮತ್ತು ಶಿರಿಯಾಳ ಕಲಾಕೇಂದ್ರ (ರಿ), ಶಿರಾಳಕೊಪ್ಪ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ "ಶಿಕ್ಷಣದಲ್ಲಿ ನಾಟಕೀಯ ಅಂಶಗಳು" ಎಂಬ ವಿಷಯದ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯನ್ನು ಸಂಪನ್ಮೂಲ ವ್ಯಕ್ತಿಯಾದ ಡಾ. ಗುರುಪ್ರಸಾದ್ ಟಿ. ಆರ್ ರವರು ನೀಡುತ್ತಿತಿರುವುದು.



## ಮಕ್ಕಳ ಮನಸ್ಸು ಗೆಲ್ಲುವವನೇ ನಿಜವಾದ ಶಿಕ್ಷಕ

ಶಿಕಾರಿಪುರ: ಶಿಕ್ಷಕರು ಪಾಠ ಮಾಡುವಾಗ ಭಾವನೆಗಳನ್ನು ಜತೆಗೂಡಿಸಿಕೊಂಡಾಗ ಬೋಧನೆ ಮತ್ತಷ್ಟು ಪರಿಣಾಮಕಾರಿ ಆಗುತ್ತದೆ ಎಂದು ಶಿರಾಳಕೊಪ್ಪ ಕದಂಬ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಟಿ.ಆರ್.ಗುರುಪ್ರಸಾದ್ ಹೇಳಿದರು. ಬುಧವಾರ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಐಕ್ಯುಎಸಿ, ಶಿಕ್ಷಣ ಸಂಘ ಮತ್ತು ಸಿರಿಯಾಳ ಕಲಾ ಕೇಂದ್ರದ ಆಶ್ರಯದಲ್ಲಿ ಆಯೋಜಿಸಿದ್ದ ಶಿಕ್ಷಣದಲ್ಲಿ ನಾಟಕ ಕಲೆ ಎಂಬ ವಿಷಯದ ಕುರಿತ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಾಗಾರದಲ್ಲಿ ಮಾತನಾಡಿದರು. ಶಿಕ್ಷಕರ ಮೊಗದಲ್ಲಿ ಸದಾ ಮಂದಹಾಸ ಇರಬೇಕು. ನಗುವಿರದ ಬೋಧನೆ ಪರಿಣಾಮಕಾರಿ ಆಗುವುದಿಲ್ಲ. ಮಕ್ಕಳ ಮನಸನ್ನು ಅರಿಯಬಲ್ಲವನೇ ನಿಜವಾದ ಶಿಕ್ಷಕ ಎಂದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಶಿವಕುಮಾರ್ ಮಾತನಾಡಿ, ಶಿ ರಚನಾತ್ಮಕವಾದ ಕಾರ್ಯ, ಬೋಧನೆಗಳಿಂದ ನಮ್ಮನ್ನು ಗುರುತಿಸಿಕೊಳ್ಳಬೇಕು ಎಂದರು. ಸಹ ಪ್ರಾಧ್ಯಾಪಕರಾದ ಡಾ. ಕಿರಣ್ ಕುಮಾರ್, ಡಾ. ವೀರೇಂದ್ರ ಕುಮಾರ್ ವಾಲಿ, ಡಾ. ಎಚ್.ರವಿ ಇದ್ದರು.

ಕ್ರಾಂತಿ ದೀಪ 30-06-2022



ಶಿಕಾರಿಪುರ: ಶಿಕ್ಷಣದಲ್ಲಿ ನಾಟಕ ಮತ್ತು ಕಲೆ ಎಂಬ ವಿಷಯದ ವಿಶೇಷ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕಾ ಕಾರ್ಯಕ್ರಮವನ್ನು ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿತ್ತು. ಉಪನ್ಯಾಸಕರಾಗಿ ಶಿರಾಳಕೊಪ್ಪ ಕದಂಬ ಕಾಲೇಜಿನ ಪ್ರೊ. ಗುರುಪ್ರಸಾದ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕಾಲೇಜು ಪ್ರಾಚಾರ್ಯ ಪ್ರೊ. ಜಿ.ಎಸ್. ಶಿವಕುಮಾರ್ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರಾದ ಡಾ. ವೀರೇಂದ್ರಕುಮಾರ್ ವಾಲಿ, ಡಾ. ರವಿ ಮೊದಲಾದವರಿದ್ದರು.

ವಿ ಜ ಯ ವಾ ಣಿ 01-07-20 22


https://youtu.be/1EoLxv6A7Kw

http://youtube.be/ye7LpJaH4r0


ದಿನಾಂಕ 12–08–2022ರಂದು ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಕುವೆಂಪು ವಿಶ್ವವಿದ್ಯಾಲಯ ಮಟ್ಟದ ವಚನ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದ ಭಾಷಾ ಸಂಘದ ಸದಸ್ಯ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುತ್ತಿರುವುದು.




**ನೋಷನ್ ಪ್ರಕಾಶನದಿಂದ ಪ್ರಕಟಣೆಯಾದ ಸಂಪಾದಕರ ಈ ಹಿಂದಿನ ಪುಸ್ತಕಗಳು:**





ಪಂಪ ಪ್ರಶಸ್ತಿ ಪುರಸ್ಕೃತರು




ಸಿರಿಗನ್ನಡ ಭಾಷಾಂಶ ಸಂಚಿ




ಶಿವಮೊಗ್ಗ ಜಿಲ್ಲಾ
ಪ್ರವಾಸಿ ತಾಣಗಳು




**Educational Perspectives**

***

## ಶಿಕ್ಷಣ ಮಹಾವಿದ್ಯಾಲಯದ ಬಗ್ಗೆ

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯವು 1996ರಲ್ಲಿ ಪ್ರಾರಂಭವಾಗಿ, 2011ರಲ್ಲಿ ಕರ್ನಾಟಕ ಸರ್ಕಾರದ ಅನುದಾನಕ್ಕೆ ಒಳಪಟ್ಟಿರುತ್ತದೆ. ಶಿಕ್ಷಣ ಮಹಾವಿದ್ಯಾಲಯವು ಕುವೆಂಪು ವಿಶ್ವವಿದ್ಯಾನಿಲಯದಿಂದ ಶಾಶ್ವತ ಸಂಯೋಜನೆಯೊಂದಿಗೆ ಎನ್.ಸಿ.ಟಿ.ಇ. ಹಾಗೂ ಯು.ಜಿ.ಸಿ ಅಧಿನಿಯಮ 2(ಎಫ್), ಸೆಕ್ಷನ್ 12(ಬಿ) ಮನ್ನಣೆ ಪಡೆದಿದೆ ಮತ್ತು ನ್ಯಾಕ್‌ನಿಂದ 'ಬಿ' ಗ್ರೇಡ್ ಮಾನ್ಯತೆ ಹೊಂದಿದೆ. ಅನುಭವಿ ಅಧ್ಯಾಪಕ ವೃಂದ, ಸುಸಜ್ಜಿತ ಪ್ರಯೋಗಾಲಯ, ವಸತಿ ನಿಲಯಗಳು, ಪ್ರಯಾಣಕ್ಕೆ ಬಸ್ ಸೌಕರ್ಯಗಳೊಡನೆ ಸುಂದರವಾದ ವಾತಾವರಣದಲ್ಲಿ ಎನ್‌ಸಿಟಿಇ ನಿಯಮಗಳ ಪ್ರಕಾರ ಸುಸಜ್ಜಿತ ಕಟ್ಟಡವನ್ನು ಹೊಂದಿದೆ. ಇದು ಶಿಕಾರಿಪುರದ ಶಿವಮೊಗ್ಗ ರಸ್ತೆಯ ಪಕ್ಕದಲ್ಲಿರುವ 4.24 ಎಕರೆಜಾಗದಲ್ಲಿದೆ. ಕಾಲೇಜಿನ ಆವರಣವು ರಮಣೀಯ ಸೌಂದರ್ಯದೊಂದಿಗೆ ಶಾಂತ ಹಾಗೂ ಸುಂದರವಾದ ಪರಿಸರವನ್ನು ಹೊಂದಿದ್ದು ಶಿಕ್ಷಣಕ್ಕೆ ಅನುಕೂಲಕರವಾಗಿದೆ. ಮಹಾವಿದ್ಯಾಲಯವು ಉತ್ತಮ ಗುಣಮಟ್ಟದ ಶಿಕ್ಷಕರ ಶಿಕ್ಷಣವನ್ನು ಒದಗಿಸುವ ದಾಖಲೆಯನ್ನು ಹೊಂದಿದ್ದು, ಪ್ರತಿ ವರ್ಷ 100% ಫಲಿತಾಂಶವನ್ನು ಪಡೆಯುತ್ತಿದೆ.

## ಭಾಷಾ ಸಂಘ

ಪ್ರಶಿಕ್ಷಣಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಕೌಶಲಗಳನ್ನು ಬೆಳೆಸುವುದರೊಂದಿಗೆ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಹೆಚ್ಚು ಉತ್ಸಾಹದಿಂದ ಭಾಗವಹಿಸುವಂತೆ ಮಾಡುವ ಉದ್ದೇಶದಿಂದ ಭಾಷಾ ಸಂಘವನ್ನು ಸ್ಥಾಪಿಸಲಾಗಿದೆ. ಈ ಸಂಘವು ಪ್ರಶಿಕ್ಷಣಾರ್ಥಿಗಳನ್ನು ಭಾಷಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅಭಿಪ್ರೇರಿಸುವ ಕಾರ್ಯವನ್ನೂ ಸಹ ಮಾಡುತ್ತಿದೆ. ಹಾಗೂ ಸಂಘದ ವತಿಯಿಂದ ಕೈಗೊಳ್ಳುವಂತಹ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚು ಮಾಹಿತಿ ಪೂರ್ಣವಾಗಿದ್ದು ಪ್ರಶಿಕ್ಷಣಾರ್ಥಿಗಳ ಭಾಷಾ ಪ್ರೌಢಿಮೆಯನ್ನು ಹೆಚ್ಚಿಸುವುದರೊಂದಿಗೆ ಲಭ್ಯವಿರುವ ಸಮಯಾವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮಾಡುವ ಒಂದು ಉತ್ತಮ ವೇದಿಕೆಯಾಗಿದೆ.

ಪ್ರಶಿಕ್ಷಣಾರ್ಥಿಗಳಲ್ಲಿ ಸೃಜನಾತ್ಮಕ ಬರವಣಿಗೆ ಹಾಗೂ ಓದುವ ಕೌಶಲಗಳನ್ನು ವೃದ್ಧಿಸುವ ದೃಷ್ಟಿಯಿಂದ ವಾರ್ಷಿಕವಾಗಿ ಚಿಗುರು" ಎಂಬ ವಾರ್ಷಿಕ ಹೊತ್ತಿಗೆಯನ್ನು ಹೊರತರಲಾಗುತ್ತಿದೆ.

Price Rs 225.00
ISBN 979-888975046-8
9 798889 750468